ಲಂಕೇಶ್

ಮೇ 2, 2012 ಪುಟ 20 ರೂ. 14/-

ವಿಠಲನಿಗೆ ಕೈಕೋಳದ ಪರೀಕ್ಷೆ




ವಿದೇಶಿ ವೇಶ್ಯಾ ಜಾಲ

ಮಸ್ಕತ್‌ಗೆ 200 ಕನ್ನಡತಿಯರ ಮಾರಾಟ

◆

ಮೈಸೂರು ಸೀಮೆಯಲ್ಲಿ ನೇಪಾಳ ಬಾಂಗ್ಲಾ ಹುಡುಗಿಯರು

ಹೊಳಲ್ಕೆರೆ, ಶಿರಹಟ್ಟಿ ಶಾಸಕರ ಅಂಧಾ ದರ್ಬಾರ್



ಸುಳ್ಯ: ಕುರುಂಜಿ ಫ್ಯಾಮಿಲಿಯ ತ್ರಿಕೋನ ರಾಜಿ





ದಾವಣಗೆರೆ ನಗರಪಾಲಿಕೆ ಲೂಟಿ



ನೌಕರರ ಮುಷ್ಕರ

KSRTCಯಲ್ಲಿ ಹಿಟ್ಲರ್‌ಗಳು



ಶಿಕ್ಷಣದ ಹಕ್ಕು V/s ಖಾಸಗೀಕರಣದ ಸೊಕ್ಕು

ಸ್ವಾತಂತ್ರ್ಯ ಬಂದು 63 ವರ್ಷಗಳಾದ ನಂತರ ಪ್ರಜಾಪ್ರಭುತ್ವ ಸರ್ಕಾರ ಶಿಕ್ಷಣ ಮೂಲಭೂತ ಹಕ್ಕೆಂದು ಒಪ್ಪಿಕೊಳ್ಳುತ್ತದೆ. ಆದರೆ ಎಲ್ಲರಿಗೂ ಶಿಕ್ಷಣ ಕೊಡಲು ಬೇಕಾದ ಸಂಪನ್ಮೂಲವಿಲ್ಲವೆಂದು ನೆಪಹೇಳುತ್ತದೆ. ವಾಸ್ತವವಾಗಿ ಈ ದೇಶದ ಎಲ್ಲಾ ಮಕ್ಕಳಿಗೂ ಏಕರೂಪಿ ಗುಣಮಟ್ಟದ ಶಿಕ್ಷಣ ಕೊಡಲು ಅಂದಾಜು ವರ್ಷಕ್ಕೆ 3 ಲಕ್ಷ ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ ಬೇಕಾಗುತ್ತದೆ. ಈ ದೇಶದ 13 ಕೋಟಿ ಮಕ್ಕಳಿಗೆ ಅನುಕೂಲವಾಗುವ ಈ ಕನಿಷ್ಠ ಕಲ್ಯಾಣಕಾರಿ ಕಾರ್ಯಕ್ರಮಕ್ಕೆ ತನ್ನ ಬಳಿ ಹಣವಿಲ್ಲವೆಂದು ಹೇಳುವ 'ಕಲ್ಯಾಣ ರಾಜ್ಯದ' ಸರ್ಕಾರ ವರ್ಷವೊಂದಕ್ಕೆ ಕೇವಲ 20 ಕಾರ್ಪೊರೇಟ್ ಉದ್ಯಮಪತಿಗಳಿಗೆ 5.5 ಲಕ್ಷ ಕೋಟಿ ರೂಪಾಯಿ ರಿಯಾಯತಿಯನ್ನು ನೀಡುತ್ತದೆ.

ಸಮಾಜ ಕಲ್ಯಾಣ ಕಾರ್ಯಕರ್ಮಗಳಿಗೆ ಸಂಪನ್ಮೂಲಗಳ ಕೊರತೆ ಎಂದು ಹೇಳುತ್ತಲೇ ಸರ್ಕಾರ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳನ್ನು, ಶಿಕ್ಷಣ, ಆಸ್ಪತ್ರೆ, ರಸ್ತೆ ಆಹಾರ ಪಡಿತರ ಎಲ್ಲವನ್ನೂ ಖಾಸಗೀಕರಣಗೊಳಿಸಿದೆ. ಅದರ ಭಾಗವಾಗಿಯೇ ಶಿಕ್ಷಣ ಮೂಲಭೂತ ಹಕ್ಕಾದರೂ, ಅದನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾದರೂ ಅದನ್ನು ಪೂರೈಸಲು ಬೇಕಾದ ಶಾಲೆಗಳನ್ನು, ಮತ್ತು ಉಪಾಧ್ಯಾಯರುಗಳನ್ನು ಒದಗಿಸುವಷ್ಟು ಹಣಕಾಸು ತನ್ನ ಬಳಿ ಇಲ್ಲವಾದ್ದರಿಂದ ಶಾಲೆ ನಡೆಸುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶೇ.25 ರಷ್ಟು ಸೀಟುಗಳನ್ನು ಬಡ ವಿದ್ಯಾರ್ಥಿಗಳಿಗೆ ಮೀಸಲಿಡುವ ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯಿದೆಯನ್ನು 2009ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿತು. ಮೇಲ್ನೋಟಕ್ಕೆ ಅದು ಪ್ರತ್ಯಕ್ಷವಾಗಿಯೇ ಪ್ರಾಥಮಿಕ ಶಿಕ್ಷಣದಲ್ಲಿ ಖಾಸಗೀಕರಣವನ್ನು ಹೆಚ್ಚಿಸುವ, ಪ್ರಾಥಮಿಕ ಶಿಕ್ಷಣದ ವಾಣಿಜ್ಯೀಕರಣವನ್ನು ಉತ್ತೇಜಿಸುವ, ಪ್ರಾಥಮಿಕ ಹಂತದಲ್ಲಿ ವಿಭಿನ್ನ ಬಗೆಯ ತಾರತಮ್ಯವುಳ್ಳ ಶಿಕ್ಷಣ ಪದ್ಧತಿಯನ್ನು ಸಮರ್ಥಿಸುವ ಹುನ್ನಾರವೂ ಆಗಿತ್ತು. ಹೆಚ್ಚೆಂದರೆ ಕೆಲವು ಉನ್ನತ ಗುಣಮಟ್ಟದ – ಅವುಗಳಲ್ಲಿ ಹೆಚ್ಚಿನವು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಎಂದು ಹೆಸರಿಸಲ್ಪಡುವ ಕ್ರಿಶ್ಚಿಯನ್, ಜೈನ್ ಮತ್ತು ಶ್ರೀಮಂತ ಮುಸ್ಲಿಂ ಸಂಸ್ಥೆಗಳು ನಡೆಸುವ ಕಾನ್ವೆಂಟುಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳು – ಶಾಲೆಗಳಲ್ಲಿ ಬಡ ಮತ್ತು ಈವರೆಗೆ ಶಿಕ್ಷಣ ವಂಚಿತ ಮಕ್ಕಳಿಗೆ ಶೇ. 25 ಸೀಟುಗಳನ್ನು ಈ ಕಾಯಿದೆ ದಕ್ಕಿಸಿಕೊಡುತ್ತಿತ್ತು. ಆದರೆ ಆ ಶೇ. 25 ಸೀಟುಗಳಿಗೆ ಬೇಕಾದ ಹಣವನ್ನು ಸರ್ಕಾರವೇ ತುಂಬಿಸುತ್ತದೆ ಎಂಬುದೇ ಈ ಕಾಯಿದೆಯ ತಾತ್ಪರ್ಯ. ಅಂದರೆ ಸರ್ಕಾರವೇ ನೇರವಾಗಿ ಬಡವರ ಹೆಸರಲ್ಲಿ ಸರ್ಕಾರಿ ಬೊಕ್ಕಸದಿಂದ ಖಾಸಗಿ ಕುಬೇರರ ಖಜಾನೆ ತುಂಬುವ ಯೋಜನೆ ಇದು. ಇಂದಿನ ಹತಾಶ ಪರಿಸ್ಥಿತಿ ಹೇಗಿದೆಯೆಂದರೆ ಹೇಗಿದ್ದರೂ ಖಾಸಗೀಕರಣವನ್ನು ಸಾರಾಸಗಟು ವಿರೋಧಿಸಲು ಸಾಧ್ಯವಿಲ್ಲ, ಆದ್ದರಿಂದ ಶೇ.25 ರಷ್ಟು ಮಕ್ಕಳಿಗಾದರೂ ಇದರಿಂದ ಒಳ್ಳೆಯ ಶಿಕ್ಷಣ ಸಿಕ್ಕರೆ ಸಿಗಲಿ ಬಿಡಿ ಎಂದು ಈ ಅನ್ಯಾಯವನ್ನು ಸಮರ್ಥಿಸುವ ನೈಚ್ಯಾನುಸಂಧಾನವನ್ನು ಜನತೆಯ ಮೇಲೆ ಹೇರಲಾಗುತ್ತಿದೆ.

ವಿಪರ್ಯಾಸವೆಂದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಇಷ್ಟು ರಾಜಿಗೂ ಸಿದ್ಧವಿಲ್ಲ. ಈ ಕಾಯಿದೆ ಹೊರಬಿದ್ದೊಡನೆ ಅಂತಹ ಸಂಸ್ಥೆಗಳು ಇದರಿಂದ ತಮ್ಮ ಶಾಲೆಗಳ ಗುಣಮಟ್ಟ ಕುಸಿಯುವುದೆಂದೂ, ಸಂಸ್ಕಾರವಂತ ಕುಲೀನ ಮಕ್ಕಳ ನಡುವೆ ಸಂಸ್ಕಾರರಹಿತ, ದಡ್ಡ ಬಡ ಸ್ಲಂ ಮಕ್ಕಳು ಬಂದರೆ ಎಂತಹ ಸಾಂಸ್ಕೃತಿಕ ಅಧಃಪತನ ಸಂಭವಿಸುತ್ತದೆಂದೂ ಹುಯಿಲೆಬ್ಬಿಸಿ ತಮ್ಮ ನಿಜವಾದ ಜಾತಿವಾದಿ, ರೇಸಿಸ್ಟ್, ಬ್ರಾಹ್ಮಣೀಯ ಫ್ಯಾಸಿಸ್ಟ್ ಮನೋಭಾವವನ್ನು ಅನಾವರಣ ಮಾಡಿಕೊಂಡವು. ಕೆಲವು ಸಂಸ್ಥೆಗಳು ಇದರ ವಿರುದ್ಧ ಸುಪ್ರಿಂ ಕೋರ್ಟಿನ ಮೆಟ್ಟಿಲನ್ನು ಏರಿದವು.

ಎಲ್ಲರಿಗೂ ಶಿಕ್ಷಣ ಒದಗಿಸಬೇಕಿರುವುದು ಸರ್ಕಾರದ ಕರ್ತವ್ಯ. ಆದರ ಜವಾಬ್ದಾರಿಯನ್ನು ನಮ್ಮ ಮೇಲೆ ಹೇರಿ ನಮ್ಮ ಸಂಸ್ಥೆಗಳಲ್ಲಿ ಶೇ.25ರಷ್ಟು ಬಡ ಮಕ್ಕಳಿಗೆ ಅವಕಾಶ ಕೊಡಲು ಕಡ್ಡಾಯ ಮಾಡುವುದು ಸಂವಿಧಾನ ವಿರೋಧಿ ನಿಲುವು. ಸಂವಿಧಾನದ 19 (1) (ಜಿ) ಕಲಂ ಈ ದೇಶದ ನಾಗರಿಕರು ಯಾವುದೇ ಬಗೆಯ ವ್ಯವಹಾರವನ್ನು ಎಲ್ಲಿ ಬೇಕಾದರೂ ಶುರು ಮಾಡಬಹುದೆಂಬ ಹಕ್ಕು ದಯಪಾಲಿಸುತ್ತದೆ. ಆದರ ಮೇಲೆ ಸರ್ಕಾರ ಸವಾರಿ ಮಾಡುವಂತಿಲ್ಲ... ಇತ್ಯಾದಿ ವಾದಗಳನ್ನು



ಮುಂದಿಟ್ಟವು. ಅದರಲ್ಲೂ ಕೆಲವು ಖಾಸಗಿ ಸಂಸ್ಥೆಗಳು ತಾವು ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆಯುತ್ತಿಲ್ಲವಾದ್ದರಿಂದ ಸರ್ಕಾರ ತಮ್ಮ ಮೇಲೆ ಯಾವುದೇ ನಿಯಂತ್ರಣವನ್ನು ಹೇರುವಂತಿಲ್ಲ ಎಂದು ವಾದ ಹೂಡಿದವು. ಆದರೆ ಇದೇ ಶಿಕ್ಷಣ ಸಂಸ್ಥೆಗಳೇ ನಗರಗಳ ಒಳ ಮತ್ತು ಹೊರಭಾಗದಲ್ಲಿ ಶಿಕ್ಷಣ ಸಂಸ್ಥೆಯ ಹೆಸರಲ್ಲಿ – ಅದರಲ್ಲೂ ಚಾರಿಟಬಲ್ ಸಂಸ್ಥೆಗಳೆಂಬ ಎಂದರೆ ಲಾಭಕ್ಕಾಗಿಯಲ್ಲದೇ ಜನೋಪಯೋಗಿ ಕೆಲಸಕ್ಕೆ ಎಂಬ ಹೆಸರಿನಲ್ಲಿ – ನೂರಾರು ಎಕರೆ ಜಮೀನನ್ನು ದಕ್ಕಿಸಿಕೊಂಡಿವೆ. ಸರ್ಕಾರದಿಂದ ಜಮೀನು, ನೀರು, ಶುಲ್ಕ ವಿನಾಯತಿ ಇನ್ನಿತ್ಯಾದಿ ಹಲವು ಬಗೆಯ ಅನುದಾನ ಪಡೆದಿರುವುದನ್ನು ಮರೆಮಾಚುತ್ತವೆ.

ಸಂವಿಧಾನವೆಂಬ ಕಾಗೆ ಗೂಡಿನಲ್ಲಿ ಮೊತ್ತಗೆ ತೂರಿಕೊಂಡ ಈ ಖಾಸಗಿ ಕೋಗಿಲೆಗಳು ಈಗ ಕಾಗೆ ಮರಿಗಳಿಗೇ ಗೂಡಿನಲ್ಲಿ ಜಾಗವಿಲ್ಲವೆನ್ನುತ್ತಿವೆ.

ಈ ದಾವೆಯ ಬಗ್ಗೆ ಮೊನ್ನೆ ಸುಪ್ರೀಂ ಕೋರ್ಟಿನ ಮೂರು ಸದಸ್ಯರ ಬೆಂಚು ತೀರ್ಮಾನವನ್ನು ಪ್ರಕಟಿಸಿದೆ. ಅದು ಈ ಖಾಸಗಿ ಶಿಕ್ಷಣ ಸಂಸ್ಥೆಗಳ ಅಸ್ತಿತ್ವದ ಬಗ್ಗೆಯಾಗಲಿ, ಎಲ್ಲರಿಗೂ ಏಕರೂಪಿ ಗುಣಮಟ್ಟದ ಶಿಕ್ಷಣ ಕೊಡಬೇಕೆಂಬ ಸಂವಿಧಾನದ ನಿರ್ದೇಶನವನ್ನು ಈ ಖಾಸಗಿ ಶಿಕ್ಷಣ ಸಂಸ್ಥೆಗಳು ಉಲ್ಲಂಘಿಸಿರುವ ವಿಷಯವನ್ನು ಪರಿಗಣನೆಗೇ ತೆಗೆದುಕೊಂಡಿಲ್ಲ. ಆದರೂ ಶೇ.25 ಬಡಮಕ್ಕಳಿಗೆ ಎಲ್ಲಾ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲೂ ಅವಕಾಶ ಕೊಡಬೇಕೆಂದೂ, ಅದನ್ನು ಈ ಸಾಲಿನಲ್ಲೇ ಜಾರಿಗೆ ತರಬೇಕೆಂದೂ ಆದೇಶ ಹೊರಡಿಸಿದೆ. ಸರ್ಕಾರದಿಂದ ಅನುದಾನ ಪಡೆಯದ ಮಾತ್ರಕ್ಕೆ ಸಂವಿಧಾನದತ್ತ ಜವಾಬ್ದಾರಿಯನ್ನು ಸರ್ಕಾರ ಈಡೇರಿಸಲು ತೆಗೆದುಕೊಳ್ಳುವ ಕ್ರಮದಲ್ಲಿ ಖಾಸಗಿಯವರು ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲವೆಂದು ಹೇಳಿದೆ. ಅಷ್ಟರ ಮಟ್ಟಿಗೆ



ಚಾರ್ವಾಕ

• ಶಿವಸುಂದರ

ಈ ತೀರ್ಮಾನ ಸ್ವಾಗತಾರ್ಹವಾಗಿದೆ.

ಏಕೆಂದರೆ ಖಾಸಗಿ, ಸರ್ಕಾರಿ, ಸಹಕಾರಿ, ಭಾರತದಲ್ಲಿ ಕಾರ್ಯನಿರ್ವಹಿಸುವ ವಿದೇಶಿ ಸಂಸ್ಥೆಯಾಗಲಿ – ಎಲ್ಲವೂ ಈ ದೇಶದಲ್ಲಿ ಕಾರ್ಯಾಚರಣೆ ಮಾಡುವಾಗ ಈ ದೇಶದ ಸಂವಿಧಾನದ ಆಶಯಗಳಿಗೆ ಒಳಪಟ್ಟು ಮತ್ತು ಅದಕ್ಕೆ ವ್ಯತಿರಿಕ್ತವಾಗದೇ ಕೆಲಸ ಮಾಡಬೇಕು. ಸಂವಿಧಾನದ ಕಲಂ 19 ಯಾವುದೇ ವ್ಯಕ್ತಿಗೆ ಯಾವುದೇ ವ್ಯವಹಾರ ಮಾಡಲು ಅವಕಾಶ ಮಾಡಿಕೊಟ್ಟರೂ



ಒಟ್ಟಾರೆ ಸಾರ್ವಜನಿಕ ಹಿತಾಸಕ್ತಿ ಮತ್ತು ಸಂವಿಧಾನದ ಆಶಯಕ್ಕೆ ಒಳಪಟ್ಟು ಅದನ್ನು ನಿಯಂತ್ರಿಸುವ ಅಧಿಕಾರವನ್ನು ಪ್ರಭುತ್ವಕ್ಕೆ ಕೊಟ್ಟೇ ಇರುತ್ತದೆ. ಆದರೆ ಜಾಗತೀಕರಣದ ನಂತರ ಕೋರ್ಟುಗಳು ಸಹ ಮಾರುಕಟ್ಟೆ ಶಕ್ತಿಗಳ ಪರವಾದ – ಅಂದರೆ ಸಂವಿಧಾನ ಆಶಯಗಳಿಗೆ ವಿರೋಧವಾದ – ತೀರ್ಮಾನಗಳನ್ನೇ ಕೊಡುತ್ತಾ ಬಂದಿದ್ದವು. ಉದಾಹರಣೆಗೆ, ಸರ್ಕಾರಿ ಕಾರ್ಖಾನೆಗಳ ಖಾಸಗೀಕರಣ, ಎಸ್‌ಇಜೆಡ್, ದುಗ್ಗಾಣಿ ಬೆಲೆಗೆ ದೇಶದ ಸಂಪನ್ಮೂಲಗಳ ವಿಕ್ರಯ ಇನ್ನಿತ್ಯಾದಿ ಪ್ರಕರಣಗಳಲ್ಲಿ ಕೋರ್ಟುಗಳು ಸಂವಿಧಾನದ ಆಶಯವಾದ, ಸಮಾನತೆಗೆ ವಿರುದ್ಧವಾದ, ಸಂಪತ್ತು ಒಂ[illegible] ಕಡೆ ಕೇಂದ್ರೀಕರಣಗೊಳಿಸಲು ಪೂರಕವಾದ ಆರ್ಥಿಕನೀತಿ[illegible] ಸಮರ್ಥನೆಗೆ ನಿಂತಿದ್ದವು.

ಈ ಹಿನ್ನೆಲೆಯಲ್ಲಿ ನೋಡಿದರೆ ಈ ತೀರ್ಪ[illegible] ನೀಡುವಾಗ ಕೋರ್ಟು ಖಾಸಗಿ ಅನುದಾನರಹಿ[illegible] ಸಂಸ್ಥೆಗಳಿಗೂ ಸಂವಿಧಾನಿಕ ಜವಾಬ್ದಾರಿ ಇದೆ ಎಂ[illegible] ಹೇಳಿರುವುದು ಸ್ವಾಗತಾರ್ಹವಾದ ಬೆಳವಣಿಗೆಯಾಗಿ[illegible] ಆದರೆ ಇದೇ ತೀರ್ಪು ಶೇ. 25ರಷ್ಟು ಮಕ್ಕಳಿಗೆ ನ್ಯಾಯವ[illegible] ಒದಗಿಸುವ ಸಮಯದಲ್ಲೇ ಉಳಿದ ಶೇ.75 ಭಾಗದ[illegible] ಅಸಮಾನತೆ ಮುಂದುವರೆಯಲು ಅವಕ[illegible] ಮಾಡಿಕೊಟ್ಟಿರುವುದು ವಿಪರ್ಯಾಸವಾದು[illegible] ಅದು ಈ ಪ್ರಜಾತಂತ್ರದ ಮಿತಿಯನ್ನ[illegible] ಸೂಚಿಸುತ್ತದೆ.

ಅಷ್ಟು ಮಾತ್ರವಲ್ಲ, ಈ ತೀರ್ಪಿನಿ[illegible] ಅನುದಾನ ರಹಿತ ಅಲ್ಪಸಂಖ್ಯಾತ ಶಿಕ್[illegible] ಸಂಸ್ಥೆಗಳನ್ನು ಹೊರಗಿಡಲಾಗಿದೆ. ಇ[illegible] ಸಂವಿಧಾನದ 30 ನೇ ಕಲಮಿನ[illegible] ಅಲ್ಪಸಂಖ್ಯಾತ ಸಮುದಾಯವು ತ[illegible] ಅನನ್ಯತೆಯನ್ನು ಕಾಪಾಡಿಕೊಳ್ಳಲು ತನ್ನ[illegible] ಆದ ಶಿಕ್ಷಣ ಸಂಸ್ಥೆಗಳನ್ನು ರಚಿಸಿಕೊಳ್ಳಬಹುದೆಂದು ನೀಡಿರು[illegible] ಅವಕಾಶವನ್ನು ಕಾರಣವನ್ನಾಗಿ ನೀಡಲಾಗಿದೆ. ಅಂದರೆ ಇಂ[illegible] ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಸಾಮ್ರಾಜ್ಯವನ[illegible] ನಿರ್ಮಿಸಿಕೊಂಡಿರುವ ಕ್ರಿಶ್ಚಿಯನ್ ಮಿಷಿನರಿಗ[illegible] ನಡೆಸುತ್ತಿರುವ ಕಾನ್ವೆಂಟುಗಳನ್ನು, ಮುಸ್ಲಿಂ ಶ್ರೀಮಂತ[illegible] ಮತ್ತು ಜೈನ ಕುಳಗಳು ನಡೆಸುತ್ತಿರುವ ಶಾಲೆಗಳೆ[illegible] ದುಬಾರಿ ಅಂಗಡಿಗಳನ್ನು ಅನಾಮತ್ತಾಗಿ ಇದರಿಂ[illegible] ಹೊರಗಿಡಲಾಗಿದೆ. ವಾಸ್ತವವಾಗಿ ಈ ಸಂಸ್ಥೆಗಳು ಅಲ್ಪಸಂಖ[illegible] ಮುಸುಕಿನಲ್ಲಿ ಶಿಕ್ಷಣದ ದಂಧೆಯನ್ನೇ ನಡೆಸುತ್ತಿವೆ. ಕನಿ[illegible] ಆ ಸಂಸ್ಥೆಗಳಲ್ಲಿ ಶೇ.50ರಷ್ಟಾದರೂ ಅದೇ ಅಲ್ಪಸಂಖ[illegible] ಸಮುದಾಯದ ಬಡ ಮತ್ತು ಶಿಕ್ಷಣ ವಂಚಿತ ಮಕ್ಕ[illegible] ಮೀಸಲಿಡಬೇಕೆಂದಾದರ[illegible] ನ್ಯಾಯಾಲಯ ಹೇಳಬೇಕಿತ್ತು.

ಏನೇ ಇರಲಿ. ಜಾಗತೀಕರಣ[illegible] ಕಾಲಘಟ್ಟದಲ್ಲಿ ಪ್ರಪ್ರಥಮ ಬಾರಿ[illegible] ಖಾಸಗಿಯವರೂ ಸಂವಿಧಾನ[illegible] ಆಶಯಗಳಿಗೆ ಬದ್ಧರು ಎಂ[illegible] ಹೇಳುವಷ್ಟರ ಮಟ್ಟಿಗೆ ಈ ತೀರ್ಪ[illegible] ಸ್ವಾಗತಾರ್ಹ. ಆದರೆ ಇದೇ ತೀರ್ಪ[illegible] ಖಾಸಗಿಕರಣವನ್ನು ಸಮರ್ಥ[illegible] ಮಾಡಿರುವುದು ನಂತರದಲ್ಲಿ ಆಯ[illegible] ರಾಜ್ಯಗಳು ರೂಲ್ಸ್‌ಗಳನ್ನು ಮಾಡುವ[illegible] ಅಥವಾ ಜಾರಿಗೆ ತರುವಾಗ ಅಥ[illegible] ಹೊಸ ಶಿಕ್ಷಣ ನೀತಿ ರೂಪಿಸುವಾಗ ಖಾಸಗಿ ಪರವ[illegible] ನಿಲ್ಲಲು ಕುಮ್ಮಕ್ಕು ಕೊಡುತ್ತದೆ.

ತಮ್ಮ ಗೂಡಿನಲ್ಲೇ ಬದುಕುತ್ತಿರುವ ಕಾಗೆ ಮರಿಗ[illegible] ತಾವು ಕೋಗಿಲೆಗಳ ಹಂಗಿನಲ್ಲಿ ಬದುಕುತ್ತಿದೇವೇನ[illegible] ಎಂಬ ಹಂಗನ್ನು ಹುಟ್ಟಿಸುವ ಜಾಗತೀಕರಣದ ಮೌಲ್ಯವ[illegible] ಈ ತೀರ್ಪು ಪರೋಕ್ಷವಾಗಿ ಸಮರ್ಥಿಸಿದಂತೆಯೇ ಆಗಿದ[illegible]

ಕೋಗಿಲೆಗಳ ಗಾನದಲ್ಲಿರುವ ಈ ಮೋಸವನ್ನು ಮ[illegible] ಕಾಗೆಗಳ ಕರ್ಕಶತೆಯಲ್ಲಿರುವ ವಾಸ್ತವವನ್ನು ಸಮಾ[illegible] ಅರ್ಥಮಾಡಿಕೊಳ್ಳಬೇಕಿದೆ.

ನೋ ಕಾಮೆಂಟ್ಸ್

"ವಿಶೇಷ ವಿತ್ತವಲಯ ಅಂದರೆ ಕಡಿಮೆ ಬೆಲೆಗೆ ಬಡವರ ಭೂಮಿ ಕಿತ್ತುಕೊಂಡು ವಿದೇಶಿ ಕಂಪನಿಗಳಿಗೆ ಕೈಗಾರಿಕೆ ಆರಂಭಿಸಲು ನೀಡುವುದಾ? ವಿಶೇಷ ವಿತ್ತ ವಲಯದ ಹೆಸರಿನಲ್ಲಿ ಬಡವರಿಂದ ಕಡಿಮೆ ಬೆಲೆಗೆ ಭೂಮಿಯನ್ನು ಕಿತ್ತುಕೊಳ್ಳುತ್ತೀರಿ. ಹತ್ತು ಸಾವಿರ ಜನರನ್ನು ನಿರಾಶ್ರಿತರನ್ನಾಗಿ ಮಾಡಿ ಒಂದು ಸಾವಿರ ಜನರಿಗೆ ಉದ್ಯೋಗ ನೀಡುತ್ತೀರಿ. ವಿದೇಶಿ ಕಂಪನಿಗಳಿಗೆ ತೆರಿಗೆ ವಿನಾಯಿತಿ ನೀಡುವುದಲ್ಲದೆ ಹಣ ಲೂಟಿ ಮಾಡಲು ಅವಕಾಶ ಮಾಡಿಕೊಡುತ್ತೀರಿ. ಕಡಿಮೆ ಖರ್ಚಿನಲ್ಲಿ ಕಾರ್ಮಿಕರು ಸಿಗುತ್ತಾರೆ ಎಂದು ವಿದೇಶಿ ಕಂಪನಿಗಳು ಇಲ್ಲಿಗೆ ಬರುತ್ತವೆ. ಇಲ್ಲಿನ ಸಂಪನ್ಮೂಲವನ್ನು ಬಳಸಿಕೊಳ್ಳುವ ವಿದೇಶಿ ಕಂಪನಿಗಳಿಂದ ಜನರಿಗೆ ಏನೂ ಪ್ರಯೋಜನವಿಲ್ಲ."

– ನ್ಯಾ. ಶೈಲೇಂದ್ರಕುಮಾರ್

"ಅಪರಾಧಿಗಳು ನಿರ್ದೋಷಿಗಳಾಗುತ್ತಿದ್ದು ನಿರ್ಗತಿಕರು ಅಪರಾಧಿಗಳಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಾನೂನಿನ ಮೂಲಕ ಈ ದೇಶದಲ್ಲಿ ಸಮ ಸಮಾಜ ಸ್ಥಾಪಿಸಲು ಸಾಧ್ಯವಿಲ್ಲ."

– ಬಿ.ಎಂ.ಪುಟ್ಟಯ್ಯ

"ನಮ್ಮಲ್ಲಿ ಏನೇ ಸೌಲಭ್ಯ ಬಂದರೂ ಆಯಾ ಜಾತಿಗಳಲ್ಲಿನ ಬಲಾಢ್ಯರೇ ಕಿತ್ತುಕೊಳ್ಳುವಂಥ ಪರಂಪರೆ ಬೆಳೆದುಕೊಂಡುಬಂದುಬಿಟ್ಟಿದೆ. ಅಧಿಕಾರ ಒಂದು ಕಡೆ ಬ್ರಾಹ್ಮಣರಿಂದ ಶೂದ್ರರ ಕಡೆಗೆ ಬಂದಿತಾದರೂ ಶೂದ್ರರು ಅದನ್ನು ದಲಿತರಿಗೆ ಕೊಡುವುದಕ್ಕೆ ಸಿದ್ಧವಿಲ್ಲ. ದಲಿತರಲ್ಲಿ ಎಡ ಮತ್ತು ಬಲದವರು ಒಂದು ಸ್ವಲ್ಪ ಅಧಿಕಾರದ ರುಚಿ ನೋಡಿದ್ದಾರೆ. ಆದರೆ ಅದನ್ನು ಅವರು ದಕ್ಕಲಿಗರಿಗೋ ಮತ್ತೊಬ್ಬರಿಗೋ ಕಲ್ಪಿಸಿಕೊಡೋಕೆ ರೆಡಿಯಿಲ್ಲ. ಇದನ್ನು ನಾವು ನಿಭಾಯಿಸುವ ಜರೂರು ಇದೆ. ಆದರೆ ನಮ್ಮಲ್ಲಿ ಪ್ರಬಲವಾಗಿ ಬೇರು ಬಿಟ್ಟಿರುವ ಯೋಚನೆಯೆಂದರೆ ಮೀಸಲಾತಿಯ ಮೂಲಕವೇ ಎಲ್ಲವನ್ನೂ ಬಗೆಹರಿಸಿಕೊಳ್ಳಲು ಯತ್ನಿಸುವುದು. ನಾವು ಒಂದನ್ನು ಮರೆತುಬಿಟ್ಟಿದೀವಿ. ಜಾತಿ ವಿನಾಶ ನಮ್ಮ ಗುರಿಯಾಗಬೇಕೆ ವಿನಃ ಜಾತಿಯನ್ನು ಭದ್ರಕೋಟೆ ಮಾಡಿಕೊಳ್ಳುವುದಲ್ಲ. ಮೀಸಲಾತಿ ತತ್‌ಕ್ಷಣದಲ್ಲಿ ವಿದ್ಯೆ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪ್ರಾತಿನಿಧ್ಯವನ್ನು ಕೊಡಬಹುದೇ ವಿನಃ ಅಸಮಾನತೆಯನ್ನು, ದಾರಿದ್ರ್ಯವನ್ನು ಹೋಗಲಾಡಿಸುವುದು ಮೀಸಲಾತಿಯ ಗುರಿಯಲ್ಲ."

–ಪ್ರೊ. ರವಿವರ್ಮ ಕುಮಾರ್

"ನಾನು ಅಂದು ದೊರೆತ ಮೀಸಲಾತಿಯ ಮೂಲಕ ದಲಿತರಿಗೆ ಒಂದು ಧ್ವನಿಯಾಗಿ ಲೋಕಸಭೆಯಲ್ಲಿ ಕೆಲಸ ಮಾಡ್ತೀನಿ ಅಂದುಕೊಂಡಿದ್ದೆ. ಆದರೆ ಈಗ ಮೂರು–ನಾಲ್ಕು ಸಲ, ಚುನಾವಣೆಯ ಮೂಲಕ ಆಯ್ಕೆಯಾದ ನಂತರ ನನಗೆ ಈಗ ಅನಿಸುತ್ತಿದೆ. ನಾವು ದಲಿತರ ಧ್ವನಿಯಾಗುವ ಬದಲು ಸರ್ಕಾರದ ಧ್ವನಿಯಾಗಿ ಪರಿವರ್ತಿತವಾಗುತ್ತಿದ್ದೇವೆ."

–ಕೇಂದ್ರ ಸಚಿವ ಮೌರ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ಪರಿಶಿಷ್ಟ ಸಮಾಜದಲ್ಲಿ ಹುಟ್ಟಿದರೂ ತಮ್ಮ ರಾಜಕೀಯ ಬೆಳವಣಿಗೆಗಾಗಿ ಜಾತಿಯ ಜನರ ಬಗ್ಗೆ ಬಾಯ್ಬಿಡುವುದಿಲ್ಲ, ರಾಜಕೀಯವಾಗಿ ಮುನ್ನಡೆಯಲು ಮೇಲ್ವರ್ಗಗಳ ಜೊತೆ ಅನ್ಯೋನ್ಯತೆಯಿಂದ ಇರುತ್ತಾರೆ. ಆದರೆ ನಾನು ಹಾಗಲ್ಲ. ನಾನು ಸೋತರೂ ಗೆದ್ದರೂ ಅಹಿಂದ.. ನಾನು ಅಹಿಂದ ಪರವಾಗಿ ದನಿ ಎತ್ತಿದರೆ ಮೇಲ್ಜಾತಿಯವರು ಉಲ್ಟಾ ಹೊಡೆಯುತ್ತಾರೆ ಎಂದು ನನಗೆ ಗೊತ್ತಿದೆ. ಆದಕ್ಕೆಲ್ಲಾ ನಾನು ಕೇರ್ ಮಾಡುವುದಿಲ್ಲ, ಎಲ್ಲಾ ವರ್ಗದವರನ್ನು ಸಮಾನವ[illegible] ಕಾಣುವ ನನ್ನ ಮನಸ್ಥಿತಿಯನ್ನು ಕ್ಷೇತ್ರದ ಎಲ್ಲಾ ವರ್ಗದ ಜನತೆ ಅರಿತಿದ್ದಾ[illegible]

–ಕೆ.ಎಚ್.ಮುನಿಯ[illegible]

"ಸಂಸದೀಯ ಮಾರ್ಗದ ಮೂಲಕ ಸಮಾಜವಾದವನ್ನು ತರುವು[illegible] ನಮ್ಮ ಸದ್ಯದ ಕಾರ್ಯಸೂಚಿ. ಆದರೆ ನಮ್ಮ ವರ್ಗಶತ್ರುಗಳು (ಕಾರ್ಪೊರೇ[illegible] ಬಂಡವಾಳಶಾಹಿಗಳು) ಇಂಥ ಶಾಂತಿಯುತ ಬದಲಾವಣೆಗೆ ಅವಕಾಶ ಕೊಡುತ[illegible] ಎಂಬ ಭರವಸೆ ನಮಗಿಲ್ಲ. ಅಂಥ ಸನ್ನಿವೇಶ ಎದುರಾದರೆ ನಮ್ಮ ದ[illegible] ಬೇರೆಯೇ ಆಗಿರುತ್ತದೆ. ಆದ್ದರಿಂದ ಮುಂಬರುವ ಸನ್ನಿವೇಶವನ್ನು ಎದುರಿಸ[illegible] ಕಾರ್ಯಕರ್ತರು ತಯಾರಾಗಿರಬೇಕು."

– ಸೀತಾರಾಂ ಯೆಚೂ[illegible]

ಹಣ್ಣು ಮುಪ್ಪಾದರೂ ಹುಳಿ ಮುಪ್ಪೇ

"ದೇವರು ಇದ್ದಾನೋ ಇಲ್ಲವೋ ಎಂಬ ಸಾವಿರ ವರ್ಷಗಳ ಹಿಂದಿ[illegible] ಜಿಜ್ಞಾಸೆ ಈಗಲೂ ಮುಂದುವರೆದಿದೆ. ಕೆಲವರು ದೇವರು ಇಲ್ಲವೆಂದು ಹಲವರು ದೇವರು ಇದ್ದಾನೆ ಎಂದೂ ನಂಬಿಕೊಂಡು ಬಂದಿದ್ದಾರೆ. ಆದ[illegible] ಬಹಳಷ್ಟು ಜನರು ದೇವರು ಇದ್ದಾನೋ ಇಲ್ಲವೋ ಎಂಬ ದ್ವಂದ್ವದ ಡೋಲಾಯಮಾನ ಬದುಕು ಬದುಕುತ್ತಿದ್ದಾರೆ. ಈ ದ್ವಂದ್ವ ನಿವಾರಣೆಯಾದಾ[illegible] ಮಾತ್ರ ಸಮಾಜ ಅಭಿವೃದ್ಧಿಯಾಗಲು ಸಾಧ್ಯ. ಪುರುಷನಿಗೆ ಸ್ತ್ರೀ ಮತ್ತು ದೇವರೆಂದ[illegible] ಅತಿ ಹೆಚ್ಚು ಪ್ರೀತಿ. ಸ್ತ್ರೀ ಮೇಲೆ ಪ್ರೀತಿ ಇರಲಿ. ಆದರೆ ದೇವರ ಮೇಲಿ[illegible] ಪ್ರೀತಿಯನ್ನು ಕಡಿಮೆ ಮಾಡಿಕೊಂಡ ವ್ಯಕ್ತಿ ಬೇಗ ಅಭಿವೃದ್ಧಿ ಹೊಂದುತ್ತಾನೆ[illegible]

– ಯು.ಆರ್ ಅನಂತಮೂರ್ತಿ

ದೀದಿಯ ದಾದಾಗಿರಿ ಮತ್ತು ಪತ್ರಿಕೆಗಳ ಚಮಚಾಗಿರಿ

...ರೋಬ್ಬರಿ ಮೂವತ್ತನಾಲ್ಕು ವರ್ಷಗಳ ಕಾಲ ಪಶ್ಚಿಮ ...ಳವನ್ನು ಆಳಿದ ಕಮ್ಯೂನಿಸ್ಟರನ್ನು ಪ್ರಥಮ ಬಾರಿಗೆ ...ಸಿದ ಮಮತಾ ಬ್ಯಾನರ್ಜಿ ಆ ರಾಜ್ಯದ ಮುಖ್ಯಮಂತ್ರಿ ...ಗಿ ಇನ್ನೂ ಒಂದು ವರ್ಷ ತುಂಬಿಲ್ಲ. ಆದರೆ ...ವಾದಷ್ಟು ಬೇಗ ಕಮ್ಯೂನಿಸ್ಟರು ಮತ್ತೆ ಆ ರಾಜ್ಯದಲ್ಲಿ ...ಾರಕ್ಕೆ ವಾಪಸ್ಸು ಬರುವಂತೆ ಸ್ವತಃ ಮಮತಾ ...'ಯೇ ಪ್ರಯತ್ನಿಸುತ್ತಿರುವಂತೆ ಕಾಣಿಸುತ್ತಿದೆ.

...ತ್ತೀಚೆಗೆ ಮಮತಾ ಬ್ಯಾನರ್ಜಿಯನ್ನು ವ್ಯಂಗ್ಯ ಮಾಡುವ ...ರ್ಟೂನ್ ಒಂದನ್ನು ತನ್ನ ಮಿತ್ರರಿಗೆ ಫಾರ್ವರ್ಡ್ ...ದ್ದಕ್ಕೆ ಜಾಧವ್‌ಪುರ್ ವಿಶ್ವವಿದ್ಯಾಲಯದ ಪ್ರೊಫೆಸರ್ ...ಷೇಕ್ ಮಹಾಪಾತ್ರ ಎಂಬುವವರ ಮೇಲೆ ಮಮತಾರ ...ಮೂಲ್ ಕಾಂಗ್ರೆಸ್ ಪಕ್ಷದ ಗೂಂಡಾಗಳು ದೈಹಿಕ ... ಮಾಡಿದರಲ್ಲದೆ, ಮಮತಾ ಅವರ ಸರ್ಕಾರ ...ಹಾಪಾತ್ರ ಅವರನ್ನು ಬಂಧಿಸಿತು. ಇದಕ್ಕೂ ಕೆಲ ವಾರಗಳ ...ಕ್ಕೆ ತನ್ನನ್ನು ಮತ್ತು ತನ್ನ ಸರ್ಕಾರವನ್ನು ಟೀಕಿಸುವ ...ಕೆಗಳನ್ನು ಸಾರ್ವಜನಿಕ ಗ್ರಂಥಾಲಯಗಳು ...ಂಧಿಸಕೂಡದೆಂದು ಮಮತಾ ಸರ್ಕಾರಿ ಆದೇಶವನ್ನು ...ರಡಿಸಿದ್ದು ಇನ್ನಷ್ಟು ಗೇಲಿಗೆ, ಕಟುಟೀಕೆಗೆ ಗುರಿಯಾಗಿತ್ತು, ...ಲ್ಲ 'ದೀದಿ'ಯ 'ದಾದಾಗಿರಿ'ಯಲ್ಲದೆ ಬೇರೇನೂ


...ಪ್ರಜಾಪ್ರಭುತ್ವವೊಂದರಲ್ಲಿ ಟೀಕೆ, ವಿಮರ್ಶೆ, ವ್ಯಂಗ್ಯ ...ವೂ ಸಾಮಾನ್ಯ. ಅದನ್ನು ಅರಿಯದ ಮಮತಾ ...ೂರ್ವ ಸರ್ವಾಧಿಕಾರಿಣಿಯಂತೆ ವರ್ತಿಸುವುದು ...ಕ್ಯ ಎಂದೂ, ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ...ೂ ಈಗ ಎಲ್ಲೆಡೆ ಚರ್ಚೆ ಮತ್ತು ಪ್ರತಿಭಟನೆಗಳು ...ಯುತ್ತಿವೆ. ಆದರೆ ತನ್ನ ಟೀಕಾಕಾರರ ಮೇಲೆ - ...ದಲ್ಲೂ ಮಾಧ್ಯಮಗಳ ಮೇಲೆ - ಹೀಗೆ ಮುಗಿ...ಯುವ ರಾಜಕಾರಣಿಗಳಲ್ಲಿ ಮಮತಾ ಬ್ಯಾನರ್ಜಿ ...ದಲನೆಯವರೂ ಅಲ್ಲ, ಕೊನೆಯವರೂ ಖಂಡಿತಾ ...ಸುವುದಿಲ್ಲ.

...ಪಕ್ಕದ ತಮಿಳುನಾಡಿನ ಮುಖ್ಯಮಂತ್ರಿಯಾಗಿರುವ ...ಲಲಿತಾ ಮೊದಲೇ ದುರಹಂಕಾರಿ. ಆಕೆ ದನದ ...ಾಸವನ್ನು ಒಮ್ಮೆ ತಿಂದಿದ್ದರು ಎಂದು ಉದ್ಘಟ...ಿಕೆ 'ನಕ್ಕೀರನ್' ಆರೋಪಿಸಿದಾಗ 'ಅಮ್ಮಾ' ಜಯ...ಹಾರ 'ಮಕ್ಕಳಿಗೆ' ಅದೆಷ್ಟು ಕೋಪಬಂದಿತೆಂದರೆ ...ಮು ನಕ್ಕೀರನ್ ಆಫೀಸನ್ನೇ ಧ್ವಂಸ ಮಾಡಿದರು. ಈ ...ಿ ಕೃತ್ಯವನ್ನು ವರದಿ ಮಾಡಿದ 'ದಿ ಹಿಂದೂ' ...ಕೆ ಸಹಜವಾಗಿಯೆ ಅದಕ್ಕೆ ಕಾರಣವಾದ ಅಂಶವನ್ನೂ ... ವರದಿಯಲ್ಲಿ ಕಾಣಿಸಿತ್ತು. ಇದರಿಂದ ಕುಪಿತಳಾದ ...ಯಲಲಿತಾ 'ದಿ ಹಿಂದೂ' ಪತ್ರಿಕೆಯ ಮೇಲೆ ಈಗ ...ನನಷ್ಟು ಮೊಕದ್ದಮೆಯನ್ನು ಹಾಕುವಷ್ಟು ಅಸಹನೆಯನ್ನು ...ೆರಿದ್ದಾರೆ.

...ಅದೇ ತಮಿಳುನಾಡಿನಲ್ಲಿ ಈ ಹಿಂದೆ ಮಾರನ್ ...ಹೋದರರಿಗೆ ಸೇರಿರುವ ಪತ್ರಿಕೆಯೊಂದು ಕರುಣಾನಿಧಿ ...ವರ ಹಿರಿಯ ಪುತ್ರ ಅಳಗಿರಿಗಿಂತಲೂ ಇನ್ನೊಬ್ಬ ...ಗ ಕಿರಿಯವ ಸ್ಟಾಲಿನ್ ಎಂಬಾತನೇ ಹೆಚ್ಚು ಜನಪ್ರಿಯ...ನಾಗಿದ್ದಾನೆ ಎಂಬ 'ಸಮೀಕ್ಷೆ'ಯನ್ನು ಪ್ರಕಟಿಸಿದ್ದಕ್ಕೆ ಅಳಗಿರಿಯ ...ಬಾಲಕರು ಆ ಪತ್ರಿಕೆಯ ಕಚೇರಿಗೆ ಬೆಂಕಿ ಇಟ್ಟು ...ರ ಸಾವಿಗೆ ಕಾರಣರಾಗಿದ್ದರು.

...ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಓರ್ವ ...ಸ್ಕೃತ ವ್ಯಕ್ತಿ ಎಂದೇ ಬಿಂಬಿತರಾಗಿದ್ದಾರೆ. ಆದರೆ 'ಫರ್ಸ್ಟ್ ...ೋಸ್ಟ್' ಎಂಬ ವೆಬ್‌ಸೈಟ್ ವರದಿಮಾಡಿರುವ ಪ್ರಕಾರ ...ಟ್ನಾಯಕ್ ಆಡಳಿತದಡಿ ಒಡಿಶಾದಲ್ಲಿ ಪತ್ರಕರ್ತರ ಮೇಲೆ ...ಂತರವಾಗಿ ದಾಳಿಗಳು ನಡೆಯುತ್ತಲೇ ಬಂದಿದೆ. ...ದಾಹರಣೆಗೆ, ಕಳೆದ ಫೆಬ್ರವರಿ ತಿಂಗಳಲ್ಲಿ ಒಡಿಶಾದಲ್ಲಿ ಅತಿಹೆಚ್ಚು ಪ್ರಸಾರ ಸಂಖ್ಯೆಯನ್ನು ಹೊಂದಿರುವ 'ಸಂಬಂದ್' ಎಂಬ ಪತ್ರಿಕೆಯ ವರದಿಗಾರರಾದ ರಜತ್ ರಂಜನ್ ದಾಸ್ ಎಂಬುವವರ ಮೇಲೆ ಮುಖ್ಯಮಂತ್ರಿ ಪಟ್ನಾಯಕ್ ಅವರ ಆಪ್ತನಾದ ಎಸ್.ಕೆ.ಬಾಬು ಮತ್ತಾತನ ಗ್ಯಾಂಗ್ ಮಾರಕವಾಗಿ ದಾಳಿ ಮಾಡಿದ್ದರು. ಅಷ್ಟೇ ಅಲ್ಲ, ತಲೆಗೆ ಪೆಟ್ಟು ಬಿದ್ದಿದ್ದ ದಾಸ್ ಅವರನ್ನು ಬಾಬು ಮತ್ತು ಗ್ಯಾಂಗ್ ಚರಂಡಿ ಒಂದರಲ್ಲಿ ಬಿಸಾಡಿ ಹೋಗಿತ್ತು. ಈ ದಾಳಿಗೆ ಕಾರಣ ರಜತ್ ದಾಸ್ ಅವರು ತಮ್ಮ ವರದಿಗಳಲ್ಲಿ ಪಟ್ನಾಯಕ್ ಅವರ ಆಡಳಿತದ ವೈಖರಿಯನ್ನು ಟೀಕಿಸಿದ್ದು.

ಕಾಂಗ್ರೆಸ್ ಪಕ್ಷದ ಸರ್ಕಾರವಿರುದ ಮಹಾರಾಷ್ಟ್ರದಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರಾಗಿರುವ ನ್ಯಾ. ಕಾಟ್ಜು ಅವರ ಪ್ರಕಾರ ಆ ರಾಜ್ಯದಲ್ಲೂ ಪತ್ರಕರ್ತರ ಮೇಲೆ ದಾಳಿಗಳಾಗುತ್ತಿದ್ದು ಆ ರಾಜ್ಯದ ಮುಖ್ಯಮಂತ್ರಿ ಪೃಥ್ವಿರಾಜ್ ಚೌಹಾನ್ ಅವರನ್ನು ಯಾರೂ ಟೀಕಿಸದಂತೆ ನೋಡಿಕೊಳ್ಳಲಾಗುತ್ತಿದೆ. ಕಾಟ್ಜು ಅವರ ಪ್ರಕಾರ ಕಳೆದ ಎರಡೂವರೆ ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ 213 ಪತ್ರಕರ್ತರ ಮೇಲೆ ರಾಜಕೀಯ



ಪಕ್ಷಗಳಿಗೆ ಸೇರಿದ ಗೂಂಡಾಗಳಿಂದ ಅಥವಾ ಸಮಾಜ ಘಾತುಕ ಶಕ್ತಿಗಳಿಂದ ದಾಳಿಗಳಾಗಿವೆ.

ಇದೆಲ್ಲಕ್ಕಿಂತ ನನಗೆ ಅಚ್ಚರಿ ಮೂಡಿಸಿದ್ದು ಬಿಹಾರದ ಮುಖ್ಯಮಂತ್ರಿ ಆಗಿರುವ ನಿತೀಶ್ ಕುಮಾರ್ ಅವರ ಸರ್ಕಾರದಲ್ಲಿ ಆಗುತ್ತಿರುವ ಪ್ರಜಾಪ್ರಭುತ್ವದ ದಮನ. ಸಭ್ಯನಂತೆ, ಸ್ವಚ್ಛಹಸ್ತನಂತೆ ಕಾಣುವ ನಿತೀಶ್ ಕುಮಾರ್ ಹೇಗೆ ತಮ್ಮ ರಾಜ್ಯದ ಮಾಧ್ಯಮಗಳನ್ನು ನಿಯಂತ್ರಿಸುತ್ತಿದ್ದಾರೆ ಎಂಬುದನ್ನು ಕುರಿತು 'ಓಪನ್' ಪತ್ರಿಕೆಯಲ್ಲಿ ಒಂದು ಸುದೀರ್ಘವಾದ ವರದಿ ಪ್ರಕಟಗೊಂಡಿದೆ. ಅದನ್ನು ಓದಿದ ನಂತರ ನಿತೀಶ್ ಕುಮಾರ್ ಅವರ ಬಗ್ಗೆ ಅಚ್ಚರಿ ಆಯಿತು.

'ಓಪನ್' ಪತ್ರಿಕೆಯಲ್ಲಿ ಧೀರೇಂದ್ರ ಕೆ. ಝಾ ಎಂಬುವವರು ಬರೆದಿರುವ ವರದಿಯ ಸಾರಂಶ ಹೀಗಿದೆ:

ಇತ್ತೀಚೆಗೆ ಬಿಹಾರದ ರಾಜಧಾನಿ ಪಟ್ನಾದಲ್ಲಿರುವ ಒಂದು ಮನೆಯ ಮೇಲೆ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ಮಾಡಿದರು. ಆ ದಾಳಿಯಲ್ಲಿ ಅವರಿಗೆ ಐದು ಕೋಟಿ ರೂಪಾಯಿಗಳು ಸಿಕ್ಕವಲ್ಲದೆ, ಪಟ್ನಾದಲ್ಲಿರುವ ಸುಮಾರು ಐವತ್ತು ಮನೆಗಳ ಖರೀದಿ ಪತ್ರಗಳೂ ಸಿಕ್ಕವು. ಐದು ಕೋಟಿಯಷ್ಟು ದೊಡ್ಡಮೊತ್ತ ಮತ್ತು ಐವತ್ತು ಮನೆಗಳ ದಾಖಲೆಗಳು ಸಿಕ್ಕಿದ್ದರೂ ಬಿಹಾರದ ಯಾವ ಪತ್ರಿಕೆಯೂ ಈ ದಾಳಿಯ ಬಗ್ಗೆ ವರದಿ ಮಾಡಲಿಲ್ಲ. ಅದಕ್ಕೆ ಕಾರಣ ಆ ಮನೆಯಲ್ಲಿ ವಾಸಿಸುತ್ತಿರುವಾತ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಆಪ್ತನಾಗಿರುವ ಮತ್ತು ನಿತೀಶ್ ಕುಮಾರ್ ಅವರ ಸಂಯುಕ್ತ ಜನತಾದಳದ ಖಜಾಂಜಿ ಆಗಿರುವ ವಿನಯ್ ಕುಮಾರ್ ಸಿನ್ಹಾ! ಅಂದಹಾಗೆ ನಿತೀಶ್ ಕುಮಾರ್ ಅವರು ಮುಖ್ಯಮಂತ್ರಿ ಆಗುವ ತನಕ ಇದೇ ಮನೆಯಲ್ಲಿ ವಾಸಿಸುತ್ತಿದ್ದರು ಮತ್ತು ಈಗ ಅದನ್ನು ತಮ್ಮ ಆಪ್ತನಿಗೆ ಬಿಟ್ಟುಕೊಟ್ಟಿದ್ದಾರೆ.

ಭ್ರಷ್ಟಾಚಾರ ಮತ್ತು ರಾಜಕೀಯ ವಾಸನೆ ಇರುವ ಈ ದಾಳಿಯ ಬಗ್ಗೆ ಯಾಕೆ ಬಿಹಾರದ ಪತ್ರಿಕೆಗಳು ವರದಿ ಮಾಡಲಿಲ್ಲ ಎಂದು ನೋಡಿದಾಗ ಇದು ಒಂದು ವಿಶೇಷ ಸಂಗತಿ ಅಲ್ಲವೆಂದೂ, ಇಂತಹ 'ಮರೆಮಾಚುವ' ಕೆಲಸದಲ್ಲಿ ಆ ರಾಜ್ಯದ ಪತ್ರಿಕೆಗಳು ದಿನನಿತ್ಯ ತೊಡಗಿವೆ ಎಂದೂ ಗೊತ್ತಾಯಿತು.

ನಿತೀಶ್ ಕುಮಾರ್ ಬಿಹಾರದ ಮುಖ್ಯಮಂತ್ರಿ ಆದಾಗಿನಿಂದಲೂ ಅವರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅಲ್ಲಿನ ಮಾಧ್ಯಮಗಳನ್ನು ನಿಯಂತ್ರಿಸುತ್ತಿದ್ದಾರೆ. ಅವರನ್ನು ಟೀಕೆ ಮಾಡುವ ಪತ್ರಿಕೆಗಳ ಆದಾಯ ಮೂಲಗಳನ್ನು ಕಡಿದು ಹಾಕುವ ಮೂಲಕ ಅಂತಹ 'ದಾರಿ ತಪ್ಪಿದ' ಮಾಧ್ಯಮಗಳನ್ನು 'ಸರಿ ದಾರಿಗೆ' ತರುತ್ತಿದ್ದಾರೆ. ಹಾಗೆ 'ಸರಿ ದಾರಿಗೆ' ಎಳೆಯಲ್ಪಟ್ಟ ಪತ್ರಿಕೆಗಳಲ್ಲಿ 'ಪಿಂಡಾರ್' ಎಂಬ ಉರ್ದು ಪತ್ರಿಕೆಯೂ ಒಂದು.

ಈ 'ಪಿಂಡಾರ್' ಪತ್ರಿಕೆಗೆ ಡಾ. ರೈಹಾನ್ ಘಾಣಿ ಎಂಬುವವರು ಸಂಪಾದಕರಾಗಿದ್ದರು. 2007ರಲ್ಲಿ ನಿತೀಶ್ ಕುಮಾರ್ ಅವರ ಪತ್ನಿ ಮಡಿದಾಗ ಆಕೆಯ ಅಂತ್ಯಸಂಸ್ಕಾರವನ್ನು ಒಂದು ರಾಜಕೀಯ ಸಭೆಯಾಗಿ ಮುಖ್ಯಮಂತ್ರಿ ಪರಿವರ್ತಿಸಿದ್ದರು. ಇದನ್ನು ಟೀಕಿಸಿ ಘಾಣಿ ತಮ್ಮ ಪತ್ರಿಕೆಯಲ್ಲಿ ಸಂಪಾದಕೀಯವನ್ನು ಬರೆದರು. ಘಾಣಿ ಅವರು ಮಾಡಿದ ಈ 'ಪ್ರಮಾದ'ಕ್ಕೆ ಮಾರನೆ ದಿನವೇ ಅವರಿಗೆ ಬಿಸಿಮುಟ್ಟಿಸಿದ್ದರು ನಿತೀಶ್ ಕುಮಾರ್ 'ಪಿಂಡಾರ್' ಪತ್ರಿಕೆಯ ಮಾಲೀಕರ ಮೇಲೆ ಒತ್ತಡ ತಂದು ಘಾಣಿ ಅವರನ್ನು ಸಂಪಾದಕ ಹುದ್ದೆಯಿಂದ ಓಡಿಸಲಾಯಿತು, ಅವರು ಹಲವಾರು ವರ್ಷಗಳಿಂದ ಬರೆಯುತ್ತಿದ್ದ ಅಂಕಣಕ್ಕೆ ಕತ್ತರಿ ಬಿತ್ತು, ಇಂತಹ ಅವಮಾನವನ್ನು ಸಹಿಸದೆ ಘಾಣಿ ಅವರು ರಾಜೀನಾಮೆ ಕೊಟ್ಟು ಆ ಪತ್ರಿಕೆಯಿಂದ ಹೊರಬಿದ್ದರು.

ಈ ಕತೆ ಅಲ್ಲಿಗೇ ಮುಗಿಯುವುದಿಲ್ಲ. ನಿತೀಶ್ ಕುಮಾರ್ ಅವರ ಆಶೆಗೆ ತಕ್ಕಂತೆ 'ಪಿಂಡಾರ್' ಪತ್ರಿಕೆಯ ಮಾಲೀಕ ಎ.ಕೆ.ಎಹಸಾನಿ ಅವರು ನಡೆದುಕೊಂಡಿದ್ದರಿಂದ ಆ ಪತ್ರಿಕೆಗೆ ಬಿಹಾರ ಸರ್ಕಾರದಿಂದ ಸಾಕಷ್ಟು ಲಾಭ ಸಿಕ್ಕಿತು. ಘಾಣಿ ಅವರು ಸಂಪಾದಕರಾಗಿದ್ದಾಗ 2007ರಲ್ಲಿ 'ಪಿಂಡಾರ್' ಪತ್ರಿಕೆಗೆ ಬಿಹಾರದ ಸರ್ಕಾರದಿಂದ ಕೇವಲ ಒಂದು ಲಕ್ಷ ರೂಪಾಯಿಗಳಷ್ಟು ಜಾಹೀರಾತುಗಳು ಸಿಕ್ಕಿದ್ದವು. ಆದರೆ ಘಾಣಿ ಅವರು ಹೊರನಡೆದ ನಂತರ ಮಾಲೀಕ ಎಹಸಾನಿ ಅವರೇ ಸಂಪಾದಕರಾದ ನಂತರ ಅದೇ ಪತ್ರಿಕೆಗೆ 2008ರಲ್ಲಿ 24 ಲಕ್ಷ ರೂಪಾಯಿಗಳಷ್ಟು ಜಾಹೀರಾತುಗಳು ಹರಿದು ಬಂದವು. ಅದರ ಮುಂದಿನ ವರ್ಷವೂ 'ಪಿಂಡಾರ್' ಪತ್ರಿಕೆ ನಿತೀಶ್ ಕುಮಾರ್ ಅವರ ತಾಳಕ್ಕೆ ಕುಣಿದಿದ್ದರಿಂದ 2009ರಲ್ಲಿ ಬರೋಬ್ಬರಿ 40 ಲಕ್ಷದ ಸರ್ಕಾರಿ ಜಾಹೀರಾತುಗಳು ಸಿಕ್ಕಿದವು. 2010ರಲ್ಲಿ ಅದು 48 ಲಕ್ಷಕ್ಕೆ ಏರಿತು! ಸಹಜವಾಗಿಯೇ 'ಪಿಂಡಾರ್' ಪತ್ರಿಕೆ ಇವತ್ತು ನಿತೀಶ್ ಕುಮಾರರ ಭಟ್ಟಂಗಿ ಪತ್ರಿಕೆಯಾಗಿದೆ.

ಅಂದಹಾಗಿ ಈ ವಿದ್ಯಾಮಾನ ಕೇವಲ 'ಪಿಂಡಾರ್' ಪತ್ರಿಕೆಗೆ ಸೀಮಿತವಾಗಿಲ್ಲ. ಬಿಹಾರ ರಾಜ್ಯದಲ್ಲಿ ಹೇಳಿಕೊಳ್ಳುವಂತಹ ಖಾಸಗಿ ಉದ್ಯಮ, ಕಾರ್ಖಾನೆ, ಸಂಸ್ಥೆಗಳು


ಕಂಡಹಾಗೆ



• ಗೌರಿ ಲಂಕೇಶ್

ಇಲ್ಲ. ಆದ್ದರಿಂದ ಅಲ್ಲಿನ ಪತ್ರಿಕೆಗಳು ತಮ್ಮ ಉಳಿವಿಗಾಗಿ ಸರ್ಕಾರಿ ಜಾಹೀರಾತುಗಳನ್ನೇ ಅವಲಂಬಿಸಲೇಕಿದೆ. ಇದನ್ನೇ ತನ್ನ ಅಸ್ತ್ರವಾಗಿಸಿಕೊಂಡಿರುವ ನಿತೀಶ್ ಕುಮಾರ್ ಅಲ್ಲಿನ ಪತ್ರಿಕೆಗಳನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ. ಅದನ್ನು ಅವರು ಅದೆಷ್ಟು ಚಾಕಚಕ್ಯತೆಯಿಂದ ಮಾಡಿದ್ದಾರೆಂಬುದು ಅಚ್ಚರಿ ಮೂಡಿಸುತ್ತದೆ.

ನಿತೀಶ್ ಕುಮಾರ್ ಬಿಹಾರದ ಮುಖ್ಯಮಂತ್ರಿ ಆಗುವ ತನಕ ಆ ರಾಜ್ಯದ ಬಡ್ಜೆಟ್ಟಿನಲ್ಲಿ ಸರ್ಕಾರಿ ಜಾಹೀರಾತುಗಳಿಗೆ ಕಡಿಮೆ ಹಣವನ್ನು ಎತ್ತಿಡಲಾಗುತ್ತಿತ್ತು. ಉದಾಹರಣೆಗೆ, ಲಾಲೂ ಪ್ರಸಾದ್ ಯಾದವ್ ಅವರ ಆರ್‌ಜೆಡಿ ಪಕ್ಷ ಬಿಹಾರದಲ್ಲಿ ಅಧಿಕಾರದಲ್ಲಿದ್ದ 2005-06ರಲ್ಲಿ ಇಂತಹ ಜಾಹೀರಾತುಗಳಿಗೆ 4.5 ಕೋಟಿ ರೂಪಾಯಿಗಳನ್ನು ಸರ್ಕಾರಿ




ಖಜಾನೆಯಿಂದ ವೆಚ್ಚ ಮಾಡಲಾಗಿತ್ತು. ಆದರೆ ನಿತೀಶ್ ಕುಮಾರ್ ಅಧಿಕಾರ ವಹಿಸಿಕೊಂಡ ನಂತರ ಮರುವರ್ಷವೇ (2006-07ರಲ್ಲಿ) ಆ ಮೊತ್ತವನ್ನು 5.4 ಕೋಟಿಗಳಿಗೆ ಏರಿಸಲಾಯಿತು. 2007-08ರಲ್ಲಿ ಅದು ದುಪ್ಪಟಗೊಂಡು 9.65 ಕೋಟಿಯಾಯಿತು. 2008-09ರಲ್ಲಿ ಅದು ಮೂರುಪಟ್ಟು ಹೆಚ್ಚಾಗಿ 27.5 ಕೋಟಿಗೆ ಏರಿತು. 2009-10ರಲ್ಲಿ ಮತ್ತಷ್ಟು ಹೆಚ್ಚಾಗಿ 34.5 ಕೋಟಿ ರೂ.ಗೆ ಮುಟ್ಟಿತು.

ಇಷ್ಟು ದೊಡ್ಡ ಮೊತ್ತದಲ್ಲಿ ಯಾವ ಪತ್ರಿಕೆಗೆ ಎಷ್ಟು ಕೊಡಬೇಕೆಂಬ ನಿರ್ಧಾರವನ್ನು ಸ್ವತಃ ನಿತೀಶ್ ಕುಮಾರ್ ಅವರೇ ತೆಗೆದುಕೊಳ್ಳುವುದರಿಂದ ಇವತ್ತು ಅಲ್ಲಿಯ ಬಹಳಷ್ಟು ಪತ್ರಿಕೆಗಳು ಅವರ ಹೊಗಳುಭಟ್ಟ ಪತ್ರಿಕೆಗಳಾಗಿ ಮಾರ್ಪಾಟುಗೊಂಡಿವೆ. ಇದರ ಬಗ್ಗೆ 'ಪಿಂಡಾರ್' ಪತ್ರಿಕೆಯ ಮಾಜಿ ಸಂಪಾದಕ ಘಾಣಿ ಅವರು ಹೇಳುವುದೇನೆಂದರೆ "ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದೇಶದಾದ್ಯಂತ ಘೋಷಿತ ಪತ್ರಿಕಾ ಸೆನ್ಸಾರ್‌ಶಿಪ್ ಇತ್ತು. ಆದರೆ ನಿತೀಶ್ ಕುಮಾರ್ ಆಡಳಿತದಡಿ ಬಿಹಾರದಲ್ಲಿ ಅಘೋಷಿತ ಸೆನ್ಸಾರ್‌ಶಿಪ್ ಜಾರಿಯಲ್ಲಿದೆ. ಇದು ಪ್ರಜಾಪ್ರಭುತ್ವಕ್ಕೆ ಬಹಳಷ್ಟು ಅಪಾಯಕಾರಿ" ಎಂದು.


-ನಿತೀಶ್ ಕುಮಾರ್ ಅವರನ್ನು ಸಭ್ಯ, ಸ್ವಚ್ಛಹಸ್ತ, ದಕ್ಷ, ಜಾತ್ಯಾತೀತವಾದಿ, ಪ್ರಗತಿಪರ ಎಂದೆಲ್ಲ ಬಿಹಾರ ಮಾಧ್ಯಮಗಳು ಬಣ್ಣಿಸುವುದರ ಹಿಂದಿರುವ ಮರ್ಮ ಈ ಜಾಹೀರಾತು ಹಣ. ಅಂದಹಾಗೆ ಅಲ್ಲಿನ ಮಾಧ್ಯಮದವರು ನಿತೀಶ್ ಕುಮಾರ್ ಅವರಿಗೆ ಈಗ ಒಂದು ಬಿರುದನ್ನು ಕೊಟ್ಟಿದ್ದಾರೆ. ಅದೇನೆಂದರೆ 'ಬಿಹಾರದ ಮುಖ್ಯ ಸಂಪಾದಕ ನಿತೀಶ್ ಕುಮಾರ್' ಎಂದು! ಈ ತಮಾಷೆಯ ಹಿಂದೆ ಬಿಹಾರದ ಮಾಧ್ಯಮಗಳ ಅಸಹಾಯಕ ಸ್ಥಿತಿ ಮತ್ತು ಹಾಸ್ಯ ಪ್ರಜ್ಞೆ, ಎರಡೂ ಅಡಗಿದೆಯಲ್ಲವೆ?

ಸರಳ-ಆಡಂಬರ

ಈ ವಾರ ನಮ್ಮ ಪತ್ರಿಕಾ ...ಚೇರಿಗೆ ಎರಡು ವಿವಿಧ ಕಾರ್ಯ...ಕ್ರಮಗಳಿಗೆ ವಿಭಿನ್ನ ರೀತಿಯ ಆಹ್ವಾನ ಪತ್ರಿಕೆಗಳು ಬಂದವು.



ಒಂದು ಡಾ. ರಾಜ್‌ಕುಮಾರ್ ...ಕುಟುಂಬದವರು ಕಳುಹಿಸಿರುವ ...ಆಹ್ವಾನ ಪತ್ರ. ರಾಜ್ ಅವರ ಪತ್ನಿ ಪಾರ್ವತಮ್ಮನವರು ತಮ್ಮ ಮಕ್ಕಳಾದ ...ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ...ನೀತ್ ರಾಜ್‌ಕುಮಾರ್ ಹಾಗು ಸೊಸೆಯರ ಪರವಾಗಿ ತಮ್ಮ ಹೊಸ ಮನೆಯ ಗೃಹಪ್ರವೇಶಕ್ಕೆ ...ಕರೆಕೊಡುವ ಆಹ್ವಾನಿಸಿರುವ ಆ ಪತ್ರ ತುಂಬಾ ಸರಳವಾಗಿದೆ. ಗಣೇಶನ ರೇಖಾಚಿತ್ರ ಮತ್ತು ...ರಾಜ್ ಅವರ ಭಾವಚಿತ್ರವನ್ನು ಹೊಂದಿರುವ ಕವರ್ ಮತ್ತು ಸರಳ ಭಾಷೆಯಲ್ಲಿ ಆಹ್ವಾನವನ್ನು ...ನೀಡಿರುವ ಪತ್ರಿಕೆಯು ಸಾಮಾನ್ಯ ಕಾಗದದ ಮೇಲೆ ಪ್ರಕಟಗೊಂಡಿದೆ. ಈ ಆಹ್ವಾನಪತ್ರದ ...ಕ್ಕೆ ಹೆಚ್ಚೆಂದರೆ ಇಷ್ಟತ್ತು ರೂಪಾಯಿಗಳು ಖರ್ಚಾಗಿರಬಹುದು. ನಮ್ಮ ಕಚೇರಿಗೆ ಬಂದ ಇನ್ನೊಂದು ಪತ್ರಿಕೆ ನಟ ಯಶ್ ತಮ್ಮ ಸಹೋದರಿ ನಂದಿನಿ ಅವರ ಮದುವೆಗೆ ಕಳುಹಿಸಿರುವ ಆಹ್ವಾನ. ಒಡವೆಗಳನ್ನು ಇಡುವಂತಹ ಡಬ್ಬದ ಆಕಾರದಂತೆ ರೂಪಿಸಲಾಗಿರುವ ಈ ಆಹ್ವಾನ 'ಪತ್ರಿಕೆ'ಯೊಳಗೆ ಮತ್ತೊಂದು ಪತ್ರಿಕೆ. ಅದರಲ್ಲಿ ವಧುವರರ ಹೆಸರು ಮತ್ತು ಅವರ ಹೆತ್ತವರ ಹೆಸರುಗಳನ್ನೊಳಗೊಂಡಿರುವ ಒಂದು ಪ್ರತ್ಯೇಕ ಪತ್ರ. ಅದರ ಜೊತೆಗೆ ಮದುವೆ ನಡೆಯಲಿರುವ ಸ್ಥಳದ ವಿವರಗಳನ್ನು ಹೊಂದಿರುವ ಮತ್ತೊಂದು ಪತ್ರ. ಅದಾದ ನಂತರ ಮದುವೆ ಮಂಟಪಕ್ಕೆ ಹೋಗುವ ದಾರಿಯ ನಕ್ಷೆಯನ್ನು ಹೊಂದಿರುವ ಇನ್ನೊಂದು ಪತ್ರ. ಇದೆಲ್ಲವನ್ನು ತೆರೆದರೆ ಸಿಗುವುದೇ ಗೋಡಂಬಿ ಮತ್ತು ಒಣ ದ್ರಾಕ್ಷಿಗಳ ಪೊಟ್ಟಣ! ಈ ಆಹ್ವಾನಪತ್ರಿಕೆಯ ಒಂದೊಂದರ ಖರ್ಚು ಏನಿಲ್ಲವೆಂದರೂ ಐನೂರು ರೂಪಾಯಿಗಳಾಗಿರಬಹುದು. ಹಲವಾರು ದಶಕಗಳಿಂದ ಚಿತ್ರರಂಗದಲ್ಲಿರುವ, ಅಪಾರ ಜನ ಪ್ರಿಯತೆಯನ್ನು ಗಳಿಸಿರುವ ರಾಜ್ ಕುಟುಂಬದವರ ಸರಳತೆಯನ್ನು, ಮೊನ್ನೆ ಮೊನ್ನೆ ಚಿತ್ರರಂಗಕ್ಕೆ ಕಾಲಿಟ್ಟಿರುವ ನಟ ಯಶ್‌ನ ಆಡಂಬರವನ್ನು ಈ ಆಹ್ವಾನ ಪತ್ರಗಳು ತೋರುತ್ತವೆ.




ಬಿಬಿಎಂಪಿ: ತೋಟದಲ್ಲಿ ತಿಂದವರಿಗೂ 'ಕಮಲ'ದ ಕಟಾಕ್ಷ!

ಬರೋಬ್ಬರಿ 113.58 ಕೋಟಿ ರೂ. ಲೂಟಿ!



ಬಿ.ಬಿ.ಎಂ.ಪಿಯ ತೋಟಗಾರಿಕೆ ಇಲಾಖೆಯನ್ನು ಹೊಕ್ಕಿದ್ದ ಅಧಿಕಾರಿಗಳು ಬೋಗಸ್ ಕಾಮಗಾರಿ ಹೆಸರಲ್ಲಿ ಮುಕ್ಕಿರುವ ಭಾರೀ ಅಮೌಂಟ್ ಇದು. ದುರಂತವೆಂದರೆ ಪಾಲಿಕೆಯ ಬಾಬ್ತಿಗೆ ಸಾವಿರಾರು ಕೋಟಿಯ ನಷ್ಟದ ನೋಟಿಸ್ ಅಂಟಿಸುತ್ತಿರುವ ಬಿಜೆಪಿ ಆಡಳಿತ ಈ ಹಗರಣಕ್ಕೆ ಸಂಬಂಧಿಸಿ ದಂತೆ ತಗಲಿಕೊಂಡಿರುವ 12 ಅಧಿಕಾರಿಗಳ ಬೆನ್ನಿಗೆ ನಿಂತಿರೋದು.



ತೋಟಗಾರಿಕೆಯ ಜಂಟಿ ನಿರ್ದೇಶಕರಾಗಿದ್ದ ಎ. ನಾರಾಯಣ ಸ್ವಾಮಿ ಹಾಗೂ 11 ತೋಟಗಾರಿಕಾ ಅಧೀಕ್ಷಕರುಗಳಾದ ಶಿವಣ್ಣ, ಆಂಜಿನಪ್ಪ, ದೊಡ್ಡಕೆಂಡೇಗೌಡ, ಮೊಹಮದ್ ಆಸಿಫ್ ನಯಾಜ್, ಎಸ್. ಚಂದ್ರಶೇಖರ್, ಡಿ.ಎಂ. ಸುಬ್ಬಣ್ಣ ಕೆ.ಎಸ್. ಶಿವಪ್ರಸಾದ್ ರೆಡ್ಡಿ ಮಹಮದ್ ಅಲಿ ಪಿಂಜಾರ್, ಕೆ. ಓಂ ಪ್ರಕಾಶ್, ಬಿ.ಸಿ. ಆನಂದ, ನಾಗಪ್ಪ ಅಟ್ಟೂರ್‌ಕರ್ ಮುಂತಾದ ಖೂಳರ ಗುಂಪೇ ಈ ಪರಿ ಪಾಲಿಕೆಯ ಹಣವನ್ನು ನುಂಗಿದ್ದಾರೆ.

ಇವರ ಅಂಧಾದುಂಧಿ ಅವಾಂತರಗಳ ಬಗ್ಗೆ ಪಿ.ಪಿ.ಇ.ಡಿ ಮತ್ತು ಟಿ.ವಿ.ಸಿ.ಸಿ ಮುಖ್ಯ ಮತ್ತು ಅಧೀಕ್ಷಕ ಇಂಜಿನಿಯರು ಗಳ ಟೀಮು ಸಮಗ್ರವಾದ ತನಿಖೆ ನಡೆಸಿ ಎಲ್ಲೆಲ್ಲಿ ಮತ್ತು ಹೇಗೇಗೆ ಮುಕ್ಕಿದ್ದಾರೆ ಎಂಬ ವರದಿಯನ್ನು ಪಾಲಿಕೆಯ ಆಯುಕ್ತರಿಗೆ ಒಪ್ಪಿಸಿ ದಿನಗಳುರುಳುತ್ತಿವೆಯೇ ಹೊರತು ಕ್ರಮ ಜರುಗಿಸುವ ಲಕ್ಷಣಗಳೇ ಗೋಚರಿಸುತ್ತಿಲ್ಲ. ಈ ವಿಚಾರವಾಗಿ ತಪ್ಪಿತಸ್ಥರ ಮೇಲೆ ಕೂಡಲೇ ಕ್ರಮ ಕೈಗೊಳ್ಳು ವಂತೆ ರಾಜ್ಯ ಸರ್ಕಾರಕ್ಕೆ ವಿಶೇಷ ಆಯುಕ್ತರ ಕಚೇರಿಯಿಂದ (ಪತ್ರ ಸಂಖ್ಯೆ: ಬ12 (5ಎಚ್) ಪಿಆರ್/141) ಮತ್ತು ಉಪ ಆಯುಕ್ತರ ಕಚೇರಿಯಿಂದ (ಪತ್ರ ಸಂಖ್ಯೆ: ಬ.12 (5ಎಚ್) ಪಿಆರ್/141) ಶಿಫಾರಸ್ಸು ಪತ್ರಗಳೂ ರವಾನೆ ಯಾಗಿವೆ. ಆದರೆ ಭ್ರಷ್ಟರನ್ನು ಒದ್ದೋಡಿಸುವ ಇರಾದೆ ಬಿಜೆಪಿ ಸರ್ಕಾರಕ್ಕಿದ್ದಂತೆ ಕಾಣುತ್ತಿಲ್ಲ. ಹಾಗಾಗಿ ಹಗರಣದ ಪ್ರಮುಖರಾದ ನಾರಾಯಣಸ್ವಾಮಿ, ಶಿವಣ್ಣ ಆಂಜಿನಪ್ಪ ದೊಡ್ಡಕೆಂಡೇಗೌಡ, ಆಸೀಫ್ ನಯಾಜ್‌ರನ್ನು ಪಾಲಿಕೆಯಿಂದ ಬಿಡುಗಡೆ ಮಾಡಿ ಅವರವರ ಮಾತೃ ಸಂಸ್ಥೆಗಳಿಗೆ ಕಳುಹಿಸಿದೆ. ಈ ಮೂಲಕ ಇವರ ಮೇಲೆ ಪಾಲಿಕೆ ಕ್ರಮಕೈಗೊಳ್ಳಲು ಇದ್ದ ಅವಕಾಶ ವನ್ನೂ ವ್ಯವಸ್ಥಿತವಾಗಿ ಬಂದ್ ಮಾಡಲಾಗಿದೆ.

ಬಿಬಿಎಂಪಿಗೆ ಚುನಾಯಿತ ಆಡಳಿತವೇ ಇಲ್ಲದ ಕಾಲದಲ್ಲಿ ಎರವಲು ಸೇವೆಯಡಿ ಒಳ ಹೊಕ್ಕ ಅಧಿಕಾರಿಗಳು ಕೆದಕಿ ಕೆದಕಿ ನುಂಗಿದ್ದೇನು ಗೊತ್ತಿರದ ಸಂಗತಿಯಲ್ಲ. 2010ರ ಚುನಾವಣೆಯಲ್ಲಿ ಗೆದ್ದು ಬಿಬಿಎಂಪಿ ಗದ್ದುಗೆ ಏರಿದ ಬಿಜೆಪಿಗೆ ಕಿಂಚಿತ್ತಾದರು ಕಾಳಜಿ ಇದ್ದಿದ್ದರೆ ಮೊದಲು ಅಂತವರನ್ನು ಹುಡುಕಿ ಶಿಕ್ಷಿಸಬೇಕಿತ್ತು, ಕಡೇ ಪಕ್ಷ ಇಂತಹ ಭ್ರಷ್ಟ ಅಧಿಕಾರಿಗಳನ್ನು ಮಾತೃ ಸಂಸ್ಥೆಗೆ ವಾಪಸ್ಸು ಕಳುಹಿಸುವ ಕೆಲಸಕ್ಕಾದರೂ ಕೈ ಹಾಕಬೇಕಿತ್ತು, ಆದರೆ ಹಗರಣಗಳನ್ನೇ ಅಜೆಂಡಾವಾಗಿಸಿಕೊಂಡಿರುವ ಬಿಜೆಪಿ ಇದ್ಯಾವುದನ್ನೂ ಲೆಕ್ಕಿಸದೆ ಅಂತವರ ಜೊತೆ ಡೀಲ್ ಕುದುರಿಸಿಕೊಂಡು ಅವರ ಬೆನ್ನಿಗೆ ನಿಂತಿರುವುದು ಈ ಹಗರಣದಿಂದ ಮತ್ತೊಮ್ಮೆ ಸಾಬೀತಾದಂತಾಗಿದೆ. ಪಾಲಿಕೆಯ ತಾಂತ್ರಿಕ ಹಾಗೂ ಜಾಗೃತ ಕೋಶವೇ ವರದಿ ತಯಾರಿಸಿ ಒಪ್ಪಿಸಿದ್ದರೂ ಬಿಜೆಪಿ ಅದಕ್ಕೆ ನಯಾಪೈಸೆಯ ಬೆಲೆ ಕೊಡುತ್ತಿಲ್ಲ, ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡುವ ವ್ಯವಸ್ಥೆ ಯೊಂದಿಗೆ ಒಂದು ಕಾಂಪ್ರಮೈಸ್ ಮಾಡಿಕೊಂಡಂತಿದೆ ಸರ್ಕಾರ ಮತ್ತು ಬಿಬಿಎಂಪಿಗಳ ನಡವಳಿಕೆ.

ಅಸಲಿಗೆ ನಡೆದಿರುವುದೇನು?


ನಗರದ ಪಾರ್ಕುಗಳ ಅಭಿವೃದ್ಧಿ ಮತ್ತು ರಸ್ತೆ ಮಧ್ಯದ ಸಸಿ, ಹುಲ್ಲು ಹಾಸಿನ ನಿರ್ವಹಣೆಗಾಗಿ ಬಿ.ಬಿ.ಎಂ.ಪಿ ಯ ಎಂಟೂ ವಲಯಗಳಿಗೆ 2010 -11ನೇ ಸಾಲಿನಲ್ಲಿ ಸುಮಾರು 1685 ವಿವಿಧ ಕಾಮಗಾರಿಗಳಿಗೆಂದು ಬರೋಬ್ಬರಿ 113.58 ಕೋಟಿಯನ್ನು ಮಂಜೂರು ಮಾಡಲಾಗಿತ್ತು, ಆದರೆ ಅಲ್ಲಿಂದಾಚೆಗೆ ಭ್ರಷ್ಟ ಅಧಿಕಾರಿಗಳು ನಡೆಸಿರುವುದೆಲ್ಲ ಬರೀ ಬೋಗಸ್ ವ್ಯವಹಾರ.

ಕಾಮಗಾರಿಯನ್ನು ಟೆಂಡರ್ ಮೂಲಕ ಬಿಬಿಎಂಪಿಯ ನೋಂದಾಯಿತ ಗುತ್ತಿಗೆದಾರರಿಗೆ ನೀಡಬೇಕೆನ್ನುವುದು ನಿಯಮ. ಹಾಗೆ ಕರೆದ ಟೆಂಡರ್ ವಿವರವನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ದಾಖಲಿಸ ಬೇಕಿರುತ್ತದೆ. ಇವೆಲ್ಲವನ್ನೂ ಗಾಳಿಗೆ ತೂರಿ ಅಲ್ಪಾವಧಿ ಟೆಂಡರ್ ಮೂಲಕ ಕಾಮಗಾರಿಯ ಗುತ್ತಿಗೆ ನೀಡಲಾಗಿದೆ. ಹೀಗೆ ಕರೆಯಲಾದ ಅಲ್ಪಾವಧಿ ಟೆಂಡರ್ ಆಹ್ವಾನಿಸಲೂ ಸೂಕ್ತ ಪ್ರಾಧಿಕಾರದಿಂದ ಅನುಮತಿ ಪಡೆದಿಲ್ಲ.

ಇನ್ನು ಪ್ರತಿ ಗುತ್ತಿಗೆ ಸಮಯದಲ್ಲೂ ಕೇವಲ ಇಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್ ಸಲ್ಲಿಸಿರುವುದು ನಡೆದಿರುವ ಅವ್ಯವಹಾರಕ್ಕೆ ಸ್ಪಷ್ಟ ಸಾಕ್ಷಿ. ಅಸಲಿಗೆ ಇಂತಹ ಟೆಂಡರ್‌ಗಳನ್ನು collusive tender ಎಂದು ಪರಿಗಣಿಸಬೇಕು. ಅಂತವನ್ನೂ ಮಾನ್ಯ ಮಾಡಲಾಗಿದೆ ಮಾತ್ರವಲ್ಲ ಟೆಂಡರ್ ಸಲ್ಲಿಸಿದವರು ಬಿಬಿಎಂಪಿಯ ನೋಂದಾಯಿತ ಕಂಟ್ರ್ಯಾಕ್ಟುದಾರರೇ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಅನುಮೋದನೆಗೊಂಡ ಟೆಂಡರ್ ಪಟ್ಟಿಗೆ ಮಂಜೂರಾತಿ ನೀಡುವಾಗ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯ ಸೀಲ್ ಹಾಕಬೇಕಿರುತ್ತದೆ. ಆದರೆ ಸಾಕಷ್ಟು ಮಂಜೂರಾತಿಗೆ ಅಂತಹ ಸೀಲುಗಳನ್ನೇ ಹಾಕಲಾಗಿಲ್ಲ. ಅದೂ ಅಲ್ಲದೆ ಇಂತಹ ಟೆಂಡರ್‌ಗಳಿಗೆ ಮಂಜೂರಾತಿ ನೀಡುವಾಗ ಕರಾರು ಮಾಡಿಕೊಳ್ಳಲು Standard Tender Document ಉಪಯೋಗಿಸಬೇಕೆಂಬ ಸ್ಪಷ್ಟ ನಿರ್ದೇಶನವಿದ್ದರೂ ಅದನ್ನೂ ಬಳಸಿಲ್ಲ, ಕಾನೂನುಬದ್ಧವಾಗಿ ಟೆಂಡರ್ ಪ್ರಕ್ರಿಯೆ ನಡೆದ ನಂತರ ಅಂಗೀಕಾರವಾದ ಗುತ್ತಿಗೆದಾರರಿಗೆ Letter Of Acceptance ಅನ್ನು ನೀಡಬೇಕಿರುತ್ತದೆ. ಆದರೆ ಈ ಹಗರಣದಲ್ಲಿ ಪಾಲ್ಗೊಂಡ ಯಾವೊಬ್ಬ ಗುತ್ತಿಗೆದಾರನಿಗೂ ಅಂತಹ ಪ್ರಮಾಣ ಪತ್ರವನ್ನು ನೀಡೇ ಇಲ್ಲ.

ಇನ್ನು ಕೊಟೇಶನ್ ದರಗಳಲ್ಲಿಯೂ ಭರ್ಜರಿ ಗೋಲ್ ಮಾಲ್ ನಡೆದಿರುವುದು ಬೆಳಕಿಗೆ ಬಂದಿದೆ. ಕೊಟೇಶನ್ ಸಂದಾಯವಾದ ನಂತರ ಕಡಿಮೆ ದರ ನಮೂದಿಸಿರುವ ಟೆಂಡರ್‌ಅನ್ನು ಆಯಾ ಆಡಳಿತಾತ್ಮಕ ಪ್ರಾಧಿಕಾರದ ಮುಂದೆ ಮಂಡಿಸಿ ಒಪ್ಪಿಗೆ ಪಡೆದುಕೊಳ್ಳಬೇಕಿರುತ್ತದೆ. ಆದರೆ ಪಾರ್ಕಿನ ಮಕ್ಕಳ ಆಟದ ಸಾಮಾನುಗಳ ಖರೀದಿ ವಿಷಯದಲ್ಲಿ ಸಂದಾಯವಾದ ಇಂತಹ ದರಗಳನ್ನು ಖುದ್ದು ತೋಟಗಾರಿಕಾ ನಿರ್ದೇಶಕ ಎ. ನಾರಾಯಣ ಸ್ವಾಮಿಯೇ ಅನುಮೋದಿಸಿಕೊಂಡಿದ್ದಾರೆ. ಹೀಗೆ ಸ್ವತಃ ತಾನೇ ಅನುಮೋದಿಸಿಕೊಳ್ಳಲು ಅನುಮತಿ ನೀಡಿದ ಯಾವ ಪುರಾವೆಯೂ ಆತನ ಬಳಿ ಇಲ್ಲ, ಕೆಲವೊಂದು ಟೆಂಡರ್‌ಗಳಲ್ಲಿ ದರಗಳನ್ನು ಡಾಟಾ ರೇಟ್ ಅನ್ವಯವೇ ಅನುಮೋದಿಸಿದೆ ಎನ್ನಲಾಗಿದೆಯಾದರೂ ಆ ದರವನ್ನು ಅನುಮೋದಿಸಿಕೊಂಡ ಯಾವ ದಾಖಲೆಯೂ ಇಲ್ಲ.



ಸಾಕಷ್ಟು ಕಾಮಗಾರಿಗಳು ಉದ್ದೇಶಿತ ಸಮಯದಲ್ಲಿ ಪೂರ್ಣವಾಗಿಲ್ಲ, ಅಂತಹ ಸಮಯದಲ್ಲಿ ವಿಳಂಬಕ್ಕೆ ಅನುಮತಿ ಪಡೆದಿರಬೇಕು ಮತ್ತು ಅಂತಹ ಗುತ್ತಿಗೆದಾರರಿಗೆ ಪಾಲಿಕೆ ಅಧಿಕಾರಿಗಳು ದಂಡ ಹಾಕಬೇಕಿರುತ್ತದೆ. ಆದರೆ ಈ ಅಧಿಕಾರಿಗಳ್ಯಾರು ಅಂತಹ ಕ್ರಮ ಜರುಗಿಸಿದ ನಿದರ್ಶನವೇ ಇಲ್ಲ, ಇಡಿಯಾಗಿ ಕಾಮಗಾರಿಗಳನ್ನೆ ಡಮ್ಮಿಯಾಗಿಸಿ ಸಾರ್ವಜನಿಕರ ಗಮನಕ್ಕೂ ತರದಂತೆ ಒಳಗೊಳಗೇ ಡೀಲಿಂಗ್ ಕುದುರಿಸಿಕೊಂಡಿರುವುದು ಈ ಕ್ರಮಗಳಿಂದಲೇ ಬಯಲಾಗಿದೆ.

ಈ ಕಾಮಗಾರಿಗಳ ಬಿಲ್ಲಿಂಗ್ ಪುರಾಣ ಮತ್ತಷ್ಟೂ ಗೊಂದಲ. ಇಂತಹ ಬೃಹತ್ ಪ್ರಮಾಣದ ಸಿವಿಲ್ ಕಾಮಗಾರಿಗಳ ಬಿಲ್‌ಅನ್ನು ಡಿ.ಸಿ ಬಿಲ್ ಮೂಲಕ ಪಾವತಿಸುವಂತಿಲ್ಲ. ಅದು ಕಾನೂನು ಬಾಹಿರ. ಆದರೆ ಇಲ್ಲಿನ ಬಹುತೇಕ ಮೊತ್ತವನ್ನು ಡಿ.ಸಿ ಬಿಲ್‌ಗಳ ಮೂಲಕವೇ ಗುತ್ತಿಗೆದಾರರಿಗೆ ಸಂದಾಯ ಮಾಡಲಾಗಿದೆ. ಈ ಬಿಲ್‌ಗಳ... ಕಾಮಗಾರಿಯ ಯೋಜಿತ ಕೆಲಸ ಮತ್ತು ವೆಚ್ಚ ಹಾಗು... ಪೂರೈಕೆಯ ನೈಜ ಪರಿಮಾಣಗಳ ಉಲ್ಲೇಖ ಇರುವುದಿ... ವಾದ್ದರಿಂದ ಗುತ್ತಿಗೆ ಆಸಾಮಿಗಳಿಗೆ ಕಾಮಗಾರಿ ನಡೆದಿ... ಕ್ಕಿಂತಲೂ ಹೆಚ್ಚು ಹಣ ಸಂದಾಯ ಮಾಡುವ ಸಾಧ... ಇರುತ್ತೆ ಹೀಗೆ ಡಿಸಿ ಬಿಲ್ ಪಾವತಿಸಲು ಈ ಅಧಿಕಾರಿಗ... ಶಿಫಾರಸ್ಸು ಮಾಡುವ ಮುನ್ನ ಸೂಕ್ತ ಅನುಮತಿಯ... ಪಡೆದುಕೊಳ್ಳದೆ ಅವ್ಯವಹಾರ ನಡೆಸಿರುವುದು ಸ್ಪಷ್ಟವಾಗಿ...

ವಿಚಾರಣೆಯ ವೇಳೆ ಪಶ್ಚಿಮ ವಲಯದ ತೋಟಗಾರಿ... ಅಧೀಕ್ಷಕ ಕೆ.ಎಸ್. ಶಿವಪ್ರಸಾದ ರೆಡ್ಡಿ ಅಷ್ಟೂ ಜ... ಅವ್ಯವಹಾರಗಳ ಪ್ರತಿನಿಧಿಯಂತೆ ಸಿಕ್ಕಿ ಬಿದ್ದಿದ್ದಾನೆ. ಈತ... ವ್ಯಾಪ್ತಿಯಲ್ಲಿ 59 ಕಾಮಗಾರಿಗಳಿಗಾಗಿ 565.05 ಲ... ಮಂಜೂರಾಗಿತ್ತು, ಆ ಎಲ್ಲಾ ಕಾಮಗಾರಿಗಳ ಫೈಲ್ ತಂದ... ಒಪ್ಪಿಸುವಂತೆ ಕೇಳಿದಾಗ 59 ರಲ್ಲಿ ಕೇವಲ 14ನ್ನು ಮಾ... ಒಪ್ಪಿಸಿ ಬಾಕಿ ಕಡತಗಳಿಗೆ ಗುತ್ತಿಗೆದಾರರತ್ತ ಬೊಟ್ಟು ಮಾಡಿ... ತನಿಖೆಯ ಬಿಸಿ ತಟ್ಟಿದ ನಂತರ ಮತ್ತೆ 3... ಕಾಮಗಾರಿಗಳ ಕಡತ ತಂದಿಟ್ಟಾಗಲೇ ಆತ ನಡೆಸಿರು... ಭಾರೀ ಅವ್ಯವಹಾರ, ನಿಯಮ ಉಲ್ಲಂಘನೆಗಳ ಸುಳಿ... ಸಿಕ್ಕದ್ದು, ವರದಿಯಲ್ಲಿ ಈತ ಉದ್ದೇಶಪೂರ್ವಕವಾಗಿಯೆ... ಮಾಹಿತಿ ಮರೆಮಾಚಲು ಈ ರೀತಿ ಮಾಡಿದ್ದಾನೆಂ... ಖಾರದ ಷರಾ ಬರೆಯಲಾಗಿದೆ. ಇನ್ನುಳಿದವರ ಕತೆಯ... ಇದಕ್ಕಿಂತ ವಿಭಿನ್ನವಾಗೇನು ಇಲ್ಲ,

ಮೌನಂ ಸಮ್ಮತಿ ಲಕ್ಷಣಂ

ಇಷ್ಟೆಲ್ಲ ಗೋಲ್‌ಮಾಲ್ ನಡೆದಿರೋದು ಬಿಜೆ... ಬಿಬಿಎಂಪಿಯ ಚುಕ್ಕಾಣಿ ಹಿಡಿದ ನಂತರ ನಡೆ... ಕಾಮಗಾರಿಗಳಲ್ಲೆ, ಹಗರಣ ಸ್ಪಷ್ಟವಾಗಿದೆ, ತಪ... ಸಾಬೀತಾಗಿದೆ, ಸಾಕ್ಷ್ಯಗಳು ವರದಿ ರೂಪದಲ್ಲಿ... ಇಷ್ಟಿದ್ದರೂ ಕ್ರಮಕೈಗೊಳ್ಳಬೇಕಾದ ಬಿಜೆಪಿ ಸರ್ಕಾ... ಹಗರಣವನ್ನೆ ನಿರ್ಲಕ್ಷಿಸುವ ಮೂಲಕ ಭ್ರಷ್ಟಾಚಾರ... ಮೌನಸಮ್ಮತಿ ನೀಡುತ್ತಿದೆ. ಮುಖ್ಯವಾಗಿ ಬಿಬಿಎಂ... ಆಡಳಿತದ ಗುತ್ತಿಗೆ ಹಿಡಿದಿರುವ ಮಂತ್ರಿ ಆಶೋಕ್ ಮತ್ತಿ... ಬಿಜೆಪಿ ನಾಯಕರ ನೆರಳು ಇಲ್ಲಿ ಕೆಲಸ ಮಾಡಿರಬಹು... ಎಂಬ ಅನುಮಾನಕ್ಕೆ ಅರ್ಥವಿಲ್ಲದಿಲ್ಲ, ಜೆ.ಡಿ.ಎ... ಕಾರ್ಪೋರೇಟರ್ ಪದ್ಮನಾಭರೆಡ್ಡಿ ಹಗರಣದ ಕುರಿತ... ಆಡಳಿತ ವರ್ಗದ ಹೊಣೆಗೇಡಿತನದ ಕುರಿತು ಆಯು... ಶಂಕರಲಿಂಗೇ ಗೌಡರಿಗೆ ಪತ್ರ ಬರೆದಿದ್ದಾದರು ಅಷ್ಟಕ್ಕೆ... ಜಗ್ಗುವ ಜಾಯಮಾನ ಬಿಜೆಪಿಯದ್ದಲ್ಲ,

• ಗಿರೀಶ್ ತಾಳಿಕಟ್ಟೆ

ಮಂಗಳೂರು: ಉಪನ್ಯಾಸಕರ ಕಿರುಕುಳಕ್ಕೆ ಮೆಹನಾಜ್ ಬಲಿ

ಮಂಗಳೂರು ಹೊರವಲಯದ ಕೊಣಾಜೆ ನಡುಪದವಿನಲ್ಲಿರುವ ಪಿ.ಎ.ಎಂಜಿನಿಯರಿಂಗ್ ಕಾಲೇಜು ಮುಗ್ಧ ವಿದ್ಯಾರ್ಥಿನಿಯೊಬ್ಬಳನ್ನು ಬಲಿ ತೆಗೆದುಕೊಳ್ಳುವ ಮೂಲಕ ಹೊಸ ವಿವಾದದ ಕೇಂದ್ರಬಿಂದುವಾಗಿದೆ. ಇದು ಉದ್ಯಮಿ ಪಿ.ಎ. ಇಬ್ರಾಹಿಂರಿಗೆ ಸೇರಿದ ಕಾಲೇಜು. ಒಂದು ರೀತಿಯಲ್ಲಿ ದುಬಾರಿ ಸಂಸ್ಥೆ!

ಎರಡು ವರ್ಷಗಳ ಹಿಂದೆ 'ರ್‍ಯಾಗಿಂಗ್' ಪ್ರಕರಣದ ಮೂಲಕ ರಾಜ್ಯದಲ್ಲೆಡೆ ಸುದ್ದಿ ಮಾಡಿದ್ದ ಈ 'ಪ್ರತಿಷ್ಠಿತ' ಕಾಲೇಜು ಈಗ ಮೆಹನಾಜ್ ಎಂಬ ವಿದ್ಯಾರ್ಥಿನಿಯ ಆತ್ಮಹತ್ಯೆಯಿಂದಾಗಿ ಮತ್ತೆ ಸುದ್ದಿಯಲ್ಲಿದೆ. ಅದೂ ಪಿಎ ಕಾಲೇಜಿನ ಆಡಳಿತ ವರ್ಗ ತಲೆತಗ್ಗಿಸುವಂತಹ ರೀತಿಯಲ್ಲಿ, ಅಂದಿನ ರ್‍ಯಾಗಿಂಗ್ ಪ್ರಕರಣ ಇನ್ನೂ ವಿದ್ಯಾರ್ಥಿಗಳು ಮನಸಲ್ಲಿ ಹಸಿಹಸಿಯಾಗಿರುವಾಗಲೇ ಮೆಹನಾಜ್‌ಳ ಆತ್ಮಹತ್ಯೆ ಸಂಭವಿಸಿ ವಿದ್ಯಾರ್ಥಿಗಳಲ್ಲಿ ಆತಂಕವನ್ನು ಸೃಷ್ಟಿಸಿದೆ.

ಬ್ಲೂ ಫಿಲ್ಮ್, ರ್‍ಯಾಗಿಂಗ್, ಮಾದಕ ದ್ರವ್ಯ ಸೇರಿದಂತೆ ವಿವಿಧ ಅಪರಾಧ ಪ್ರಕರಣಗಳಲ್ಲಿ ಐಷಾರಾಮಿ ಮನೋಭಾವದ ವಿದ್ಯಾರ್ಥಿಗಳು ಬಲಿಯಾಗುವುದರ ಬಗ್ಗೆ ನಾವು ಕೇಳಿದ್ದೇವೆ. ಆದರೆ ಅದಕ್ಕೆ ತದ್ವಿರುದ್ಧವಾದ ಘಟನೆ ಮೊನ್ನೆ ನಡೆದಿದೆ. ಪಿಎ ಕಾಲೇಜಿನ ಸಿಬ್ಬಂದಿ ಕ್ಷುಲ್ಲಕ ಕಾರಣಕ್ಕೆ ವಿದ್ಯಾರ್ಥಿನಿ ಮೆಹನಾಜಳನ್ನು ತನಿಖೆ ಒಳಪಡಿಸಿ, ಲೈಂಗಿಕ ಪೀಡನೆ ಸಮಾನವಾದಂತಹ ಪ್ರಶ್ನೆಗಳನ್ನು ಕೇಳಿ ಆಕೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದಾರೆ.


ವಿದ್ಯಾರ್ಥಿಗಳಿಂದ ಪ್ರತಿಭಟನೆ...

ಪಿ.ಎ. ಎಂಜಿನಿಯರಿಂಗ್ ಕಾಲೇಜಿನ ದ್ವಿತೀಯ ವರ್ಷದ ಬಯೋಟೆಕ್ನಾಲಜಿ ವಿದ್ಯಾರ್ಥಿನಿ ಮೆಹ್‌ನಾಜ್ ಪರೀಕ್ಷೆಯಲ್ಲಿ ಶೇ. 90 ರಷ್ಟು ಅಂಕಗಳನ್ನು ಗಳಿಸುತ್ತಿದ್ದ ಪ್ರತಿಭಾವಂತೆ. ಕಳೆದ ರಜೆಯಲ್ಲಿ ಮೆಹನಾಜ್ ತನ್ನ ಸಹ ವಿದ್ಯಾರ್ಥಿನಿಯರೊಂದಿಗೆ ಗೋವಾ ಪ್ರವಾಸ ಮಾಡಿದ್ದಳು. ವಿದೇಶದಲ್ಲಿರುವ ತನ್ನ ತಂದೆ-ತಾಯಿಗೆ ಇದರ ಬಗ್ಗೆ ಮಾಹಿತಿ ನೀಡಿಯೇ ಆಕೆ ಗೋವಾಕ್ಕೆ ಹೋಗಿದ್ದಳು. ಆದರೆ ಆಕೆ ಗೋವಾಕ್ಕೆ ಹೋಗಿದ್ದರ ಬಗ್ಗೆ ಆ ಕಾಲೇಜಿನ ಇಬ್ಬರು ಪುರುಷ ಅಧಿಕಾರಿಗಳಿಗೆ ಅದೇನೆನ್ನಿಸಿತೋ. ಅವರಿಬ್ಬರು ಮಹಿಳಾ ತನಿಖಾಧಿಕಾರಿಯ ಅನುಪಸ್ಥಿತಿಯಲ್ಲಿ ಮೆಹಜಾನ್‌ಳ ವಿಚಾರಣೆ ನಡೆಸಿ, ಆಕೆಗೆ ಅಶ್ಲೀಲವಾದ ಪ್ರಶ್ನೆಗಳನ್ನು ಹಾಕಿ ಚಿತ್ರಹಿಂಸೆ ನೀಡಿದ್ದಾರೆ. ಆ ಕ್ರೂರಿಗಳು ಯಾರೆಂದರೆ ಕ್ಯಾಂಪಸ್ ಡೈರೆಕ್ಟರ್ ಉದಯನ್ ಮತ್ತು ಸ್ಟೂಡೆಂಟ್ ವೆಲ್‌ಫೇರ್ ಆಫೀಸರ್ ಫಾರೂಕ್.


ಮೆಹನಾಜ್

"ನೀನು ಪ್ರವಾಸ ಹೋಗಿದ್ದೇ ತಪ್ಪು... ಅದರ ಜೊತೆಗೆ ನೀನು ಕಾಲೇಜಿನಲ್ಲಿರೋದೇ ತಪ್ಪು" ಎಂಬಂತೆ ಈ ಇಬ್ಬರು ಕ್ರೂರಿಗಳು ಮೆಹನಾಜ್‌ಳಿಗೆ ಹೇಳಿದ್ದಾರೆ. ಅಷ್ಟೇ ಅಲ್ಲದೆ "ನಾನು ಪುರುಷರೊಂದಿಗೆ ತಿರುಗಾಟ ಮಾಡಿದ್ದೇನೆ" ಎಂದು ಆಕೆಯಿಂದ ಬಲವಂತವಾಗಿ ತಪ್ಪೊಪ್ಪಿಗೆಯನ್ನು ಬರೆಯಿಸಿಕೊಂಡಿದ್ದಾರೆ. ಇದೆಲ್ಲದರಿಂದ ಮನನೊಂದ ಮೆಹನಾಜ್ ನೇಣಿಗೆ ಶರಣಾಗಿದ್ದಾಳೆ.

ಈ ಘಟನೆ ನಡೆದು ಒಂದು ವಾರ ಕಳೆದಿದೆ. ಆದರೆ ಪೊಲೀಸರು ಇನ್ನೂ ನಿದ್ದೆಗಣ್ಣಿನಲ್ಲಿದ್ದಾರೆ. ಮೆಹನಾಜ್‌ಳ ಆತ್ಮಹತ್ಯೆಗೆ ಸಂಬಂಧಿಸಿದಂತೆ ಆಕೆಯ ಲ್ಯಾಪ್‌ಟಾಪ್, ಡೈರಿ ಮತ್ತು ಮೊಬೈಲನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಕುರಿತು ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ಮೆಹನಾಜ್‌ಳ ಸಾವಿಗೆ ಕಾರಣರಾದ ಆರೋಪಿಗಳ ಫೋಟೋಗಳನ್ನು ಸಂಗ್ರಹಿಸಲು ಹಿಂದೇಟು ಹಾಕಿದ್ದಾರೆ. ಇದರ ಬಗ್ಗೆ ಕೇಳಿದರೆ ಪೊಲೀಸರು ಹೇಳುವುದೇನು ಗೊತ್ತಾ? "ಮೆಹಜಾನ್‌ಳ ಮೊಬೈಲಿನ ಕಾಲ್ ಡೀಟೇಲ್ಸ್ ಇನ್ನೂ ಬಂದಿಲ್ಲ" ಎಂದು! ಇದೆಲ್ಲದಕ್ಕೆ ಕಾರಣ ಆರೋಪಿಗಳ ಹಣದ ಬಲ ಇರಬಹುದು.

ಇತ್ತ ವಿದ್ಯಾರ್ಥಿಗಳು ಮತ್ತು ಮೆಹಜಾನ್‌ಳ ಪೋಷಕರು ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದ್ದರೆ ಅತ್ತ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ವಿಪರ್ಯಾಸವೆಂದರೆ ಈ ಪ್ರಕರಣದ ಬಗ್ಗೆ ಪಿಎ ಕಾಲೇಜಿನ ಆಡಳಿತ ಮಂಡಳಿ ಒಂದೆಡೆ ಕ್ಯಾಂಪಸ್ ಡೈರೆಕ್ಟರ್ ಉದಯನ್‌ನನ್ನು ವಜಾ ಮಾಡಿದ್ದರೆ ಇನ್ನೊಂದೆಡೆ ಮೆಹಜಾನ್‌ಳ ತಂದೆ ಜೊತೆ ರಾಜಿಯಾಗುವ ಪ್ರಯತ್ನಗಳನ್ನೂ ಮಾಡುತ್ತಿದೆ. ಈ ಮಧ್ಯೆ ವಿದ್ಯಾರ್ಥಿಗಳ ಪ್ರತಿಭಟನೆಯ ಕಾವು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಸದ್ಯ ಕಾಲೇಜಿಗೆ ರಜೆ ಘೋಷಿಸಲಾಗಿದೆ.


ಒರ್ವ ವಿದ್ಯಾರ್ಥಿನಿಯಿಂದ ಬಲವಂತವಾಗಿ "ನಾನು ಪುರುಷನೊಂದಿಗೆ ಗೋವಾ ಪ್ರವಾಸಕ್ಕೆ ಹೋಗಿದ್ದೆ" ಎಂದು ಸುಳ್ಳು ಪತ್ರ ಬರೆಯಿಸಿಕೊಂಡು ಆಕೆಯ ಸಾವಿಗೆ ಪ್ರಚೋದನೆ ನೀಡಿದ ಕ್ರೂರಿಗಳನ್ನು ತನ್ನ ಕಾಲೇಜಿನ ಸಿಬ್ಬಂದಿಯನ್ನಾಗಿ ಪಿಎ ಕಾಲೇಜು ಇನ್ನೂ ಉಳಿಸಿ ಕೊಂಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.





ಗೋವಾದಲ್ಲಿ ಗೆಳತಿಯರೊಂದಿಗೆ...

ಮೆಹನಾಜ್‌ಳ ಸಾವಿಗೆ ಕಾರಣರಾದ ಆರೋಪಿಗಳಿಗೆ ಆದಷ್ಟು ಬೇಗ ಸೂಕ್ತ ಶಿಕ್ಷೆ ಆಗುವಂತೆ ಎಲ್ಲರೂ ನೋಡಿಕೊಳ್ಳಬೇಕಿದೆ.

• ಬಿಎಸ್


ಡಾ.ಕೆ.ವಿ.ರೇಣುಕಾ ಪ್ರಸಾದ್


ಕುರುಂಜಿ ವೆಂಕಟರಮಣ ಗೌಡ


ಡಾ.ಕೆ.ವಿ. ಚಿದಾನಂದ

ಸುಳ್ಯ:ಕುರುಂಜಿ ಫ್ಯಾಮಿಲಿಯ ತ್ರಿಕೋನ ರಾಜಿ!!

ಸುಳ್ಯದ ಕುಖ್ಯಾತ ಕುರುಂಜಿ ಫ್ಯಾಮಿಲಿ ... ಮಕ್ಕಳ ಆಸ್ತಿ ಕಿತ್ತಾಟಕ್ಕೆ ಈಗೊಂದು ...ದನ ವಿರಾಮ ಘೋಷಣೆಯಾಗಿದೆ.


ಇದೊಂತರ ತ್ರಿಕೋನ ರಾಜಿ!

ಕುರುಂಜಿ ವೆಂಕಟರಮಣ ಗೌಡರು ಕಟ್ಟಿ ...ಸಿದ ನೂರಾರು ಕೋಟಿ ಮೌಲ್ಯದ ಶಿಕ್ಷಣ ...ಸ್ಥೆಗಳ ಆಸ್ತಿ ಹಂಚಿಕೆಯಾದಾಗ ಗೌಡರ ...ಡು ಮಕ್ಕಳಾದ ಚಿದಾನಂದ ಹಾಗೂ ...ಣುಕಾ ಕಿತ್ತಾಡಿಕೊಂಡಿದ್ದರು.

ಒಂದು ಹಂತದಲ್ಲಿ ಈ ಕದನ ...ತಿಮೀರಿ ಸಂಸ್ಥೆಯ ಆಯಕಟ್ಟಿನ ಸ್ಥಾನ ...ಲ್ಲಿದ್ದ ಗೌಡರ ನೆಚ್ಚಿನ ಮನುಷ್ಯ ರಾಮಕೃಷ್ಣನ ...ಲೆಯೂ ಆಯಿತು. ಈ ಕೊಲೆ ...ಮಾಡಿಸಿದ್ದು ಡಾ. ರೇಣುಕಾನೆಂಬುದು ...ಲೀಸರ ತನಿಖೆ ಸಾಬೀತು ಮಾಡಿತ್ತು.

ಸುಳ್ಯದ 'ಸುಪ್ರಸಿದ್ಧ' ಶಿಕ್ಷಣ ದಂಧೆ ದೊರೆ ಕುರುಂಜಿ ...ಂಕಟರಮಣ ಗೌಡರ ಆಸ್ಥಾನದಲ್ಲಿ ಕಗ್ಗೊಲೆಯೊಂದು ...ದು ಹೆಚ್ಚು-ಕಮ್ಮಿ ವರ್ಷ ಒಂದು ಕಳೆದಿದೆ! ತರಹೇವಾರಿ ...ದಿನಾರು ಶಿಕ್ಷಣ ಅಂಗಡಿಗಳ 'ಅಕಾಡೆಮಿ ಆಫ್ ಲಿಬರಲ್ ...ಜುಕೇಷನ್' ಅಂಗಳದಲ್ಲಿ ಮೂಡಿದ ರಕ್ತದ ಕಲೆಗಳು ...ಾತ್ರ ಇವತ್ತಿಗೂ ಹಾಗೆ ಹಸಿ-ಹಸಿಯಾಗೇ ...ಳಿದುಕೊಂಡಿದೆ.

ಕುರುಂಜಿ ಗೌಡರ ಕ್ರಿಮಿನಲ್ ಕಿರಿಯ ಕುಮಾರ ...ಾ. ರೇಣುಕಾ ಪ್ರಸಾದ್ ಅಪ್ಪ ಕೂಡಿಹಾಕಿದ್ದ ಕೋಟ್ಯಂತರ ...ಪಾಯಿ ಆಸ್ತಿಯ ದೊಡ್ಡ ಪಾಲಿಗಾಗಿ ಅಣ್ಣ ಚಿದಾನಂದನ ...ಡಿಕಲ್ ಕಾಲೇಜು ಉಸ್ತುವಾರಿ ರಾಮಕೃಷ್ಣ ಎಂಬ ...ಬ್ರಾಹ್ಮಣನನ್ನು ಸುಪಾರಿ ಕೊಟ್ಟು ಕೊಲ್ಲಿಸಿರುವುದೀಗ ಇಡೀ ...ಗತ್ತಿಗೇ ಗೊತ್ತಾಗಿ ಹೋಗಿದೆ! ಕ್ಯಾಪಿಟೇಷನ್ ಶಿಕ್ಷಣ ...ಾರುಕಟ್ಟೆಯಲ್ಲಿ ಸುಳ್ಯ ಮತ್ತು ದಕ್ಷಿಣ ...ನ್ನಡದ ಶೈಕ್ಷಣಿಕ-ಸಾಮಾಜಿಕ ...ಲಯದಲ್ಲಿ ಪ್ರತಿಷ್ಠಿತನಂತೆ-ಸಜ್ಜನನಂತೆ ...ೋಗು ಹಾಕಿಕೊಂಡು ಓಡಾಡುತ್ತಿದ್ದ ...ೇಣುಕಾ ಪ್ರಸಾದ್ ಇದ್ದಕ್ಕಿದ್ದಂತೆಯೇ ... ಪಾತಕಕ್ಕೆ ಕೈ ಹಾಕಿದ್ದು ಕುರುಂಜಿ ...ೌಡರ ಶಿಕ್ಷಣ ಸಾಮ್ರಾಜ್ಯದ ಕ್ರೌರ್ಯ, ...ಾಣಿಜ್ಯೀಕೃತಗೊಂಡಿರುವ ಕರುಳುಬಳ್ಳಿ ...ಬಂಧ ಮತ್ತು ಶಿಕ್ಷಣವನ್ನೇ ಬಂಡವಾಳ ...ಮಾಡಿಕೊಂಡು ನಡೆಸಿರುವ ಭೀಕರ ...ಸಿನೆಸ್‌ನ ಅಸಲೀ ಅವತಾರವನ್ನು ...ನಾವರಣ ಮಾಡಿಬಿಟ್ಟಿದೆ.


ಕಲ್ಲಡ್ಕ ಭಟ್ಟ

ಯಾವಾಗ ಕುರುಂಜಿ ಗೌಡರು ಪಾರ್ಕಿನ್‌ಸನ್ ...ಯಿಲೆಯಿಂದ ಹಾಸಿಗೆ ಹಿಡಿದರೋ ಅಂದೇ ಆತನ ...ಕ್ಕಳಿಬ್ಬರ ಮಧ್ಯೆ ಆಸ್ತಿಗಾಗಿ ಕಾಳಗವೂ ಶುರುವಾಗಿತ್ತು. ... ಆಸ್ತಿ ಯುದ್ಧದಲ್ಲಿ ರಾಮಕೃಷ್ಣಯ್ಯ ಸೋಮಯಾಜಿ ...ನೆ ಕೆ.ಎಸ್. ರಾಮಕೃಷ್ಣನೆಂಬ ಶಿವಳ್ಳಿ ಬ್ರಾಹ್ಮಣ ...ಕುನಿ ಮಾಮನ ಪಾತ್ರ ವಹಿಸಿದ್ದು ಸಹೋದರರ ನಡುವಿನ ...ಯಾಸೂಯೆ ಮರ್ಡರ್ ಮಟ್ಟಕ್ಕೆ ತಲುಪುವಂತೆ ಮಾಡಿತ್ತು. ... ರಾಮಕೃಷ್ಣ ಕುರುಂಜಿ ಗೌಡರ ದರ್ಬಾರಿನಲ್ಲಿ ಆತನ ...ತ್ಯಾಪ್ತ ಬಂಟನಾಗಿದ್ದ: ಕುರುಂಜಿಯ ಸಕಲ ...ಪ್ಪು-ಬಿಳಿ' ವ್ಯವಹಾರವೆಲ್ಲ ಈತನಿಗೆ ಗೊತ್ತಿತ್ತು. ...ುರುಂಜಿ ಗೌಡರು ಅನಾರೋಗ್ಯ-ವೃದ್ಧಾಪ್ಯದಿಂದ ...ಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ...ಳೆದುಕೊಂಡಾಗ 'ಚಾಲಾಕಿ' ರಾಮಕೃಷ್ಣರ ...ಟಾಟೋಪ-ಆಸ್ತಿ ಶೇಖರಣೆ ಜೋರಾಗಿಹೋಯ್ತು.

ಇದು ಅಪ್ಪನ ಶಿಕ್ಷಣ ಸಂಸ್ಥಾನದ ರಾಜನಾಗುವ ...ನಸು ಕಾಣುತ್ತಿದ್ದ ರೇಣುಕಾ ಪ್ರಸಾದ್‌ನನ್ನು ...ರಳಿಸಿಬಿಟ್ಟಿತ್ತು. ಆದರೆ ಕುರುಂಜಿ ಗೌಡರಿಗೆ ಹುಂಬ ...ುಗನ ಕೈಗೆ ಆಡಳಿತ ವಹಿಸಲು ಮನಸ್ಸಿರಲಿಲ್ಲ. ...ಾಜೂಕಯ್ಯನಂಥ ರಾಮಕೃಷ್ಣನೇ ಬೆಟರ್ ಅನ್ನಿಸಿತ್ತು ...ನುಭವಿ ಕುರುಂಜಿ ಗೌಡರಿಗೆ. ಆದರೆ ಮಗ ಮಹಾರಾಯ ...ಷ್ಟಾಗಿ ರಾಮಕೃಷ್ಣನನ್ನು ಅಕಾಡೆಮಿಯ ಉಸ್ತುವಾರಿಯಿಂದ ...ಚ್ಚಾಟಿಸಿ ತನ್ನನ್ನು ಪ್ರತಿಷ್ಠಾಪಿಸುವಂತೆ ವರಾತ ಶುರುಹಚ್ಚಿದ್ದ. ...ೀರಿಗಿಂತ ರಕ್ತ ದಪ್ಪ ಅಲ್ಲವಾ? ಒಂದು ದಿನ ಕುರುಂಜಿ ...ೌಡರು ತಮ್ಮ ಸಂಸ್ಥೆಗಳ ಜನರಲ್ ಸೆಕ್ರೆಟರಿ ಎಂದು ...ಮ್ಮ ಮಗ ರೇಣುಕಾ ಪ್ರಸಾದ್‌ನನ್ನೇ ನೇಮಿಸಿದರು. ...ುರುಂಜಿಯ ಪುತ್ರ ವ್ಯಾಮೋಹ ಕಂಡು ಅನಧಿಕೃತ ...ಾಸ್‌ನಂತೆ ಮೆರೆಯುತ್ತಿದ್ದ ರಾಮಕೃಷ್ಣರ ಕಣ್ಣು ಕೆಂಪಾಗಿಸಿತ್ತು.

ಜನರಲ್ ಸೆಕ್ರೆಟರಿ ರೇಣುಕಾ ಪ್ರಸಾದ್ ಮತ್ತು ...ಡಳಿತಾಧಿಕಾರಿ ರಾಮಕೃಷ್ಣರ ನಡುವೆ ಸಂಘರ್ಷ ಶುರು ...ಯ್ತು. ಹೆಚ್ಚು ರೇಣುಕಾ ಪ್ರಸಾದ್‌ನನ್ನು ಕೇರ್ ಮಾಡದೆ ...ಾಮಕೃಷ್ಣ ಏಕಪಕ್ಷೀಯ ನಿರ್ಧಾರ ಮಾಡತೊಡಗಿದ. ...ಂಸ್ಥೆಯ ಖರೀದಿ, ನೇಮಕಾತಿ, ಹೊಸ ಶಿಕ್ಷಣ ...ೋರ್ಸ್-ಕಟ್ಟಡ ಸ್ಥಾಪನೆ, ಮೆಡಿಕಲ್ ಕೌನ್ಸಿಲ್ ಜತೆ ...ೀಲ್ ಮುಂತಾದ ಮಹತ್ವದ ಸಂಗತಿಗಳಲ್ಲೆಲ್ಲ ರಾಮಕೃಷ್ಣ ...ಡಿದ್ದೇ ಆಟ, ಮಾಡಿದ್ದೇ ಕಾನೂನಾಗಿ ಹೋಯ್ತು. ...ಡಳಿತ ಅನುಭವ ಇಲ್ಲದ ಒಣ ದುರಾಬಿನ ರೇಣುಕಾ ಕಂತ್ರಿ ರಾಮಕೃಷ್ಣರ ತಂತ್ರಗಳೆದುರು ಅಸಹಾಯಕನಾಗಿ ಹೋದ. ಕೆಲವೊಮ್ಮೆ ಆತನಿಗೇ ಶರಣಾಗುವ ಪರಿಸ್ಥಿತಿಯೂ ಬಂತು.


ಇದರಿಂದ ಕುದ್ದುಹೋದ ರೇಣುಕಾ ಅಪ್ಪ ಕುರುಂಜಿ ಗೌಡರಿಗೆ ರಾಮಕೃಷ್ಣನ ಉಪಟಳದ ಬಗ್ಗೆ ವಿವರಿಸಿದರು. ಆತನನ್ನು ಸಂಸ್ಥೆಯಿಂದ ಉಚ್ಚಾಟಿಸಲು ಒತ್ತಡ ತಂದರು. ಒಂದು ಹಂತದಲ್ಲಿ ಮಗನ ಮಾತು ಕೇಳಬೇಕಾಗಿಬಂತು ಕುರುಂಜಿ ಗೌಡರಿಗೆ. ರಾಮಕೃಷ್ಣನನ್ನು ಆಡಳಿತಾಧಿಕಾರಿ ಸ್ಥಾನದಿಂದ ಕಿತ್ತು ಹಾಕಿದರು. ಆದರೆ ರಾಮಕೃಷ್ಣ ಸುಮ್ಮನೆ ಕೂರಲಿಲ್ಲ. ಕೆವಿಜಿ ಫ್ಯಾಮಿಲಿ ಮತ್ತು ಕೆವಿಜಿ ಅಕಾಡೆಮಿ ಎರಡರಲ್ಲೂ ಕಿತಾಪತಿ ಆರಂಭಿಸಿದ. ಅಣ್ಣ ಚಿದಾನಂದ ಮತ್ತು ತಮ್ಮ ರೇಣುಕಾ ನಡುವಿನ ಆಸ್ತಿ-ಶಿಕ್ಷಣ ಸಂಸ್ಥೆ-ಹಣ ಪಾಲು ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ನಾಜೂಕಾಗಿ ನುಸುಳಿಕೊಂಡ. ಅಣ್ಣನಿಗೆ ಭರ್ಜರಿ ಹಣ ತರುವ ಮೆಡಿಕಲ್, ನರ್ಸಿಂಗ್‌ನಂಥ ಕಾಲೇಜು ಸಿಗುವಂತೆ ಮಾಡಿದ. ರೇಣುಕಾಗೆ ಬರೋಬ್ಬರಿ 11 ಶಿಕ್ಷಣ ಸಂಸ್ಥೆ ಸಿಕ್ಕಿತ್ತು. ಚಿದಾನಂದ್‌ಗೆ ಬರೀ ಐದೇ ಶಿಕ್ಷಣ ಅಂಗಡಿಗಳು ದಕ್ಕಿತ್ತು. ಆದರೆ ರೇಣುಕಾಗೆ ತನಗೆ ಕೆಲಸಕ್ಕೆ ಬಾರದ ಶಿಕ್ಷಣ ಸಂಸ್ಥೆ ಸಿಕ್ಕಿದೆ; ಇದಕ್ಕೆ ಮೂಲ ಕಾರಣ ರಾಮಕೃಷ್ಣನ ಕಾರಸ್ಥಾನ ಎಂಬ ಅಸಮಾಧಾನ ಶುರುವಾಯ್ತು.

ಈ ಪಾಲು-ಪಟ್ಟಿ, ಸಂಸ್ಥೆಯ ಆಗು-ಹೋಗುಗಳ ಬಗ್ಗೆ ರೇಣುಕಾ ಮತ್ತು ರಾಮಕೃಷ್ಣರ ಮಧ್ಯೆ ಆಗಾಗ ಮಾತಿಗೆ ಮಾತೂ ಬೆಳೆಯುತ್ತಿತ್ತು. ಆಸ್ತಿ ಹಂಚಿಕೆ ನಂತರವಂತೂ


ಮನೋಜ್, ನಾಗೇಶ್ ಹಾಗೂ ರೇಣುಕಾಪ್ರಸಾದ್

ಅಣ್ಣ ಚಿದಾನಂದ ರಾಮಕೃಷ್ಣನನ್ನು ತನ್ನ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿ ನೇಮಿಸಿಕೊಂಡಿದ್ದು ರೇಣುಕಾನ ಹೊಟ್ಟೆಯುರಿ ಹೆಚ್ಚಿಸಿತ್ತು. ರಾಮಕೃಷ್ಣನ ನಡೆ-ನುಡಿ, ರೀತಿ-ನೀತಿಗಳೆಲ್ಲವೂ ಎದುರಾಳಿ ರೇಣುಕಾನನ್ನು ಕಿಚಾಯಿಸುವಂತಿರುತ್ತಿತ್ತು. ಲಾಗಾಯ್ತಿನಿಂದ ಕುರುಂಜಿಯ ಸಕಲ ಹಣಕಾಸಿನ ವ್ಯವಹಾರ ನಿಭಾಯಿಸುತ್ತ ಬಂದಿದ್ದ ರಾಮಕೃಷ್ಣ ಬೆಲೆಬಾಳುವ ಬಂಗಲೆ-ತೋಟ ಮಾಡಿಕೊಂಡಿದ್ದ. ರೇಣುಕಾನ ಐಷಾರಾಮಿ ಕಾರಿನಷ್ಟೇ ದುಬಾರಿ ವಾಹನದಲ್ಲಿ ಆತ ಓಡಾಡುತ್ತಿದ್ದ. ಸೌಮ್ಯ ವ್ಯಕ್ತಿತ್ವ, ಕ್ಯಾನ್ಸರ್‌ನಂಥ ರೋಗದಿಂದ ಹೈರಾಣಾಗಿದ್ದ ಚಿದಾನಂದರ ಸಮಸ್ತ ಆಸ್ತಿಗೂ ಅನಧಿಕೃತವಾಗಿ ರಾಮಕೃಷ್ಣನೇ ಯಜಮಾನನಂತಾಗಿ ಹೋಗಿದ್ದ. ಚಿದಾನಂದರ ಹೆಂಡತಿ ಶೋಭಾ ಆಗಾಗ ಸಂಸ್ಥೆಗೆ ಬರುತ್ತಿದ್ದರಾದರೂ ಕುಟಿಲ ಕಾರಸ್ಥಾನಿ ರಾಮಕೃಷ್ಣನದೇ ಅಂತಿಮ ನಿರ್ಧಾರವಾಗಿತ್ತು. ಕುರುಂಜಿ ಗೌಡರ ಬ್ರೈನ್ ಆಗಿದ್ದ ರಾಮಕೃಷ್ಣ ಬಲುಬೇಗ ಚಿದಾನಂದರ ಮಾಸ್ಟರ್ ಮೈಂಡ್ ಆಗಿಹೋದ.

ಅಷ್ಟೇ ಅಲ್ಲ; ಚಿದಾನಂದರ ವಕೀಲನಂತೆ ಪೋಸು ಕೊಡುತ್ತ ಕುರುಂಜಿಯ ಆರ್ಥಿಕ ವಹಿವಾಟಿನಲ್ಲೂ ಕೈಚಳಕ ತೋರಿಸ ತೊಡಗಿದ್ದ. ಇದೆಲ್ಲ ರೇಣುಕಾನ ತಲೆ ಕೆಡಿಸಿಬಿಟ್ಟಿತ್ತು! ತನ್ನ ಅಧೋಗತಿಗೆಲ್ಲ ರಾಮಕೃಷ್ಣನೇ ಕಾರಣನೆಂಬ ಸೇಡು ಹೊಗೆಯಾಡತೊಡಗಿತ್ತು. ಈ ರಾಮಕೃಷ್ಣನ ರಗಳೆಯಿಂದಾಗಿಯೇ ಆಸ್ತಿ ಪಾಲು ಮಾಡುವಾಗ ತನಗೆ ಘೋರ ಅನ್ಯಾಯವಾಯ್ತೆಂಬ ಸಿಟ್ಟು ರೇಣುಕಾಗೆ ಬಂದಿತ್ತು. ಇದರಿಂದ ಆತ ರಾಮಕೃಷ್ಣನನ್ನು ಕೊಲೆ ಮಾಡಿಸುವ ನಿರ್ಧಾರಕ್ಕೆ ಬಂದುಬಿಟ್ಟಿದ್ದ. ರೇಣುಕಾನ ಕಾಲೇಜು, ತೋಟದಲ್ಲಿ ಚಾಕರಿ ಮಾಡುತ್ತಿದ್ದ ಮನೋಜ್ ರೈ ನಾಗೇಶ್ ಮತ್ತು ವಾಮನ ಎಂಬುವವರು ತಮ್ಮ ಬಾಸ್‌ನ ನಿರ್ದೇಶನದಂತೆ ರಾಮಕೃಷ್ಣನ ಕೊಲೆಗೆ ಸಂಚು ರೂಪಿಸಿದರು!


ರಾಮಕೃಷ್ಣ

ನಾಗೇಶ್ ವೃತ್ತಿ ಕೊಲೆಗಡುಕರಾದ ಮಂಗಳೂರಿನ ಭವಾನಿ ಶಂಕರ್ ಮತ್ತು ಶರಣ್‌ರನ್ನು ಕರೆದುಕೊಂಡು ರೇಣುಕಾ ಬಳಿ ಹೋಗಿದ್ದಾನೆ. ಅಲ್ಲಿ 15 ಲಕ್ಷಕ್ಕೆ ಈ ಇಬ್ಬರು ಪಾತಕಿಗಳು ಸುಪಾರಿ ಪಡೆದಿದ್ದಾರೆ. ರಾಮಕೃಷ್ಣ ತನ್ನ ಮಗನೊಂದಿಗೆ ಸಂಜೆಗತ್ತಲಲ್ಲಿ ವಾಕ್ ಹೋಗಿದ್ದಾಗ ಆತನನ್ನು ಕೊಚ್ಚಿ ಕೊಂದು ಹಾಕಿ ಪರಾರಿಯಾಗಿದ್ದಾರೆ. ತನ್ನ ಹಣದ ಬಲ, ಅಧಿಕಾರಸ್ಥ ರಾಜಕಾರಣಿಗಳೊಂದಿಗಿನ ಸಖ್ಯ, ಜಾತಿ ಲಾಬಿಗಳಿಂದ ರಾಮಕೃಷ್ಣನ ಕೊಲೆ ದಕ್ಕಿಸಿಕೊಳ್ಳುವೆನೆಂಬ ಭಂಡ ಧೈರ್ಯ ರೇಣುಕಾಗಿತ್ತು. ಆದರೆ ಬಿಜೆಪಿ ಸರ್ಕಾರದ ಸೂತ್ರಧಾರ-ಚೆಡ್ಡಿ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟ ಜಾತಿ ಪ್ರೀತಿಯಿಂದ ಈ ಕೇಸ್‌ನಲ್ಲಿ ಎಂಟ್ರಿ ಪಡೆದುಕೊಂಡು ಬಿಟ್ಟಿದ್ದು ರೇಣುಕಾ ಜೈಲು ಪಾಲಾಗುವಂತೆ ಮಾಡಿತ್ತು. ಕೊಲೆಯಾದ ರಾಮಕೃಷ್ಣ ತನ್ನ ಬ್ರಾಹ್ಮಣ ಸಮುದಾಯದವನೆಂಬ ಕಾರಣಕ್ಕೆ ಕಲ್ಲಡ್ಕ ಭಟ್ಟ ಸರ್ಕಾರದ ಮೇಲೆ ಒತ್ತಡ ಹಾಕಿ ರೇಣುಕಾನ ಧನಬಲದ 'ಆಟ' ನಡೆಯದಂತೆ ಮಾಡಿಬಿಟ್ಟರು.

ಕೊಲೆಯಾದ ಹತ್ತೇ ದಿನದಲ್ಲಿ ಸುಪಾರಿ ಕಿಲ್ಲರ್ ಸಮೇತ ಮರ್ಡರ್ ಸೂತ್ರಧಾರ ರೇಣುಕಾನನ್ನು ಪೊಲೀಸರು ಬಂಧಿಸಿದರು. ಕೋಟ್ಯಾಧಿಪತಿ ರೇಣುಕಾನ ಬಂಧನ ಸಾಧ್ಯವೇ ಇಲ್ಲವೆಂದು ಜನ ಭಾವಿಸಿದ್ದರು. ಆದರೆ ಕಲ್ಲಡ್ಕ ಭಟ್ಟನ 'ಪವಾಡ'ದಿಂದ ರೇಣುಕಾ ಬರೋಬ್ಬರಿ ಆರು ತಿಂಗಳು ಜೈಲಲ್ಲಿ ಕೊಳೆಯುವಂತಾಯ್ತು. ಈ ನಡುವೆ ಆತ ಹೃದಯ ಆಪರೇಷನ್, ಬೆನ್ನುನೋವಿಗೆಲ್ಲ ಚಿಕಿತ್ಸೆಯೂ ಪಡೆದುಕೊಂಡಿದ್ದಾನೆ. ಲಕ್ಷ-ಲಕ್ಷದ ರೂಪಾಯಿಗಳನ್ನು ಕೇಸಿಗೆ-ಕಾಯಿಲೆಗೆ ಖರ್ಚು ಮಾಡಿ ರೇಣುಕಾ ಈಗ ಹೈರಾಣಾಗಿ ಹೋಗಿದ್ದಾನೆ.

ರೇಣುಕಾನ ಮರ್ಡರ್ ಕೇಸ್‌ನಲ್ಲಿ ಪ್ರಥಮ ಆರೋಪಿ. ಈತನೆ ಕೊಲೆಗೆ ಸ್ಕೆಚ್ ಹಾಕಿದ್ದು. ಆದರೆ ತನ್ನ ಹಣಬಲ, ಜಾತಿ ಬಲದಿಂದ ಆರೋಪಿ ನಂಬರ್ 5 ಆಗಿದ್ದಾನೆ. ಈಗ ಜಾಮೀನಲ್ಲಿ ಹೊರಗೆ ಬಂದಿರುವ ರೇಣುಕಾ ಆರು ತಿಂಗಳಿಂದ ಮನೆಬಿಟ್ಟು ಹೊರಗೇಬಂದಿಲ್ಲ. ಆತನ ಸಾಮಾಜಿಕ ಒಣಪ್ರತಿಷ್ಠೆ ಸಂಪೂರ್ಣ ಮಣ್ಣು ಪಾಲಾಗಿಹೋಗಿದೆ. ತನ್ನ ಶಿಕ್ಷಣ ಸಂಸ್ಥೆಗಳಿಗೆ, ಊರವರಿಗೆ ಮುಖ ತೋರಿಸದಷ್ಟು ಮಾನಸಿಕ ಒತ್ತಡದಲ್ಲಾತ ಇದ್ದಾನೆ. ಕ್ಲೋಸ್ ಸರ್ಕ್ಯೂಟ್ ಟಿವಿ ಮನೆಯಲ್ಲಿಟ್ಟುಕೊಂಡು ಕಾಲೇಜುಗಳ ಆಡಳಿತವನ್ನು ಈತ ನಿಭಾಯಿಸುತ್ತಿದ್ದಾನೆ. ಕುಗ್ಗಿ ಹೋಗಿರುವ ರೇಣುಕಾನನ್ನು ಕೊಲೆಗಡುಕನೆಂದೇ ಸುಳ್ಯಾದಲ್ಲಿ ಜನ ಅಡ್ಡ ಹೆಸರಿಟ್ಟು ಗುರುತಿಸುವಂತಾಗಿದೆ.


ಇಷ್ಟಾದರೂ ಆತನ ಮತ್ತು ಆತನ ಅಣ್ಣನ ವ್ಯಾಪಾರ ಕೇಂದ್ರಗಳ ಬ್ಯುಸಿನೆಸ್‌ಗೇನೂ ಕುಂದುಬಂದಿಲ್ಲ. ಮೊದಲಿನಂತೆಯೇ ಜೋರಾಗಿ ಧನಾಧಾರಿತ ಶಿಕ್ಷಣ ಬಿಕರಿ ದಂಧೆ ನಡೆಯುತ್ತಿದೆ. ಅಣ್ಣ ಚಿದಾನಂದ ಮತ್ತು ತಮ್ಮ ರೇಣುಕಾ ನಡುವೆ ಜಾತಿಯ-ಕುಟುಂಬದ ಹಿರಿಯರು ಒಂದು ರಾಜಿ ಮಾಡಿದ್ದಾರೆ. ಜಿದ್ದಾಜಿದ್ದಿ ಬಿಟ್ಟು ಅವರವರ ಪಾಡಿಗೆ ಅವರವರು ಇರುವಂಥ ಸೂತ್ರ ಸಿದ್ಧ ಮಾಡಿ 'ಹಿರಿಯರು' ಸಂಧಾನ ಮಾಡಿದ್ದಾರೆ. ರೇಣುಕನೂ ಈಗ ಹಗೆ ಸಾಧಿಸುವ ಸ್ಥಿತಿಯಲ್ಲಿಲ್ಲ. ಆತನ ಅಣ್ಣ ಮೊದಲಿಂದಲೂ ಮೃದು ಸ್ವಭಾವದವರು. ಚಿದಾನಂದ ದಾರಿ ತಪ್ಪಿದಿದ್ದರೆ, ಅದು ಆತನ ಸಲಹೆಗಾರನಾಗಿದ್ದ ನರಿಬುದ್ಧಿ ವಿಪ್ರೋತ್ತಮ ರಾಮಕೃಷ್ಣನಿಂದಾಗಿತ್ತು.

ರೇಣುಕಾಗೆ ತನ್ನ ಜಾಮೀನು ತಾತ್ಕಾಲಿಕವೆಂಬ ಭಯವಿದೆ. ಆರೋಗ್ಯ ಕೈಕೊಟ್ಟಿದೆ. ದೊಡ್ಡ-ದೊಡ್ಡ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ಆತ ಸಾಮಾಜಿಕವಾಗೂ ಮಾನ-ಮರ್ಯಾದೆ ಕಳೆದುಕೊಂಡಿದ್ದಾನೆ. ರೇಣುಕಾ ಜೈಲಲ್ಲಿ ಇದ್ದಾಗ ಅಣ್ಣ ಚಿದಾನಂದನ ಕಡೆಯವರೇ ಖುದ್ದು ನಿಂತು ಆತನ ಶೈಕ್ಷಣಿಕ ಸಂಸ್ಥೆಗಳ ಸಮಸ್ಯೆ ಪರಿಹರಿಸಿದ್ದಾರೆ. ಆಗಾಗ ನೆರವು ನೀಡಿದ್ದಾರೆ. ಹಾಗೆಯೇ ರಾಮಕೃಷ್ಣನ ಕಡೆಯ ಬ್ರಾಹ್ಮಣರಿಗೂ ಜಾತಿ ಬಲ-ಹಣಬಲದ ರೇಣುಕಾ ಪರಿವಾರ ಎದುರುಹಾಕಿಕೊಳ್ಳುವುದು ಬೇಡವಾಗಿದೆ. ಹೋದವನು (ರಾಮಕೃಷ್ಣ) ಹೋದ; ಇರುವ ಆತನ ಮಗ ಮಲ್ಲೀಶನನ್ನು ಸಂರಕ್ಷಿಕೊಂಡರೆ ಸಾಕೆಂಬ ನಿಲುವು ರಾಮಕೃಷ್ಣನ ಬಳಗದ್ದು! ಒಟ್ಟಿನಲ್ಲಿ ಒಂಥರಾ ತ್ರಿಕೋನ 'ರಾಜಿ' ತನ್ನಷ್ಟೇ ನಡೆದು ಹೋಗಿದೆ. ಕುರುಂಜಿಯ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್ ಸೆಂಟರ್ ರಕ್ತ ರಂಜಿತವಾಗಿ ನಿಂತಿದೆ. ರಾಮಕೃಷ್ಣರ 'ಪ್ರೇತ' ಈ ಅಕಾಡೆಮಿಕ್ ವರ್ಷದಲ್ಲಿ ಕುರುಂಜಿಯ ಶಿಕ್ಷಣ ಅಡ್ಡೆಗಳ ದಂಧೆಗೆ ದೋಖಾ ಕೊಡಲಿದೆ ಎಂಬ ಚರ್ಚೆ ಕ್ಯಾಪಿಟೇಷನ್ ಕಿಂಗ್‌ಗಳ ವಲಯದಲ್ಲಿ ನಡೆದಿದೆ. ಶಿಕ್ಷಣವನ್ನು ಬಂಡವಾಳ ಮಾಡಿಕೊಂಡು ಅಡ್ಡ ದಾರಿಯಲ್ಲಿ ಹಣ ಕೂಡಿಹಾಕಿದ ಕುರುಂಜಿ ವೆಂಕಟರಮಣ ಗೌಡರ ಮಕ್ಕಳಿಗೆ ಆ ದುಡ್ಡೇ ಇವತ್ತು ಉರುಳಾಗಿದೆ! ಮಾಡಬಾರದ್ದು ಮಾಡಿದರೆ ಆಗಬಾರದ್ದೇ ಆಗುತ್ತದೆ, ಅಲ್ಲವಾ?

ಸಿರಿಯ ಗರದ ಮಹಿಮೆ ಇದು. 85 ರ ಇಳಿ ವಯಸ್ಸಿನ ಕುರುಂಜಿ ಗೌಡರು ಮಕ್ಕಳ ನಖರಾಗಳಿಗೆಲ್ಲ ಪ್ರತಿಕ್ರಿಯೆ ನೀಡಲಾಗದಷ್ಟು ಹೈರಾಣಾಗಿ ಹಾಸಿಗೆ ಹಿಡಿದಿದ್ದಾರೆ. ಅವರಿಗೆ ತನ್ನ ಕುಲಪುತ್ರ ರೇಣುಕಾನ ಕ್ರಿಮಿನಲ್ ಪಾತಕವಾಗಲಿ, ಆತ ನರ ರಕ್ತ ಹೀರಿ ಜೈಲಿಗೆ ಹೋಗಿ ಬಂದಿರುವುದಾಗಲಿ, ಪಾಪಪ್ರಜ್ಞೆಯಿಂದ ಕ್ಷಣ-ಕ್ಷಣವೂ ಒದ್ದಾಡುತ್ತ ಮನೆಯೊಳಗೆ ಬಚ್ಚಿಟ್ಟುಕೊಂಡಿರುವುದಾಗಲಿ, ತಾನು 'ಕಷ್ಟಪಟ್ಟು' ಬೆಳೆಸಿದ ಶಿಕ್ಷಣ ಅಂಗಡಿಗಳ ಪ್ರತಿಷ್ಠೆ ನೆಲ ಕಚ್ಚಿರುವುದಾಗಲಿ ಯಾವುದೂ ಅರಿವಾಗುತ್ತಿಲ್ಲ!

-ನಹುಷ


ಕುರುಂಜಿ ಶಿಕ್ಷಣ ಸಂಸ್ಥೆ


ರಾಮಕೃಷ್ಣ ಕೊಲೆಯಾದ ಸ್ಥಳ..

ಚಿತ್ರದುರ್ಗ

ಹೊಳಲ್ಕೆರೆ ಶಾಸಕನ ಸೀರೆ ಸಮಾವೇಶದ ರಾದ್ಧಾಂತ






ಹೊಳಲ್ಕೆರೆ ಶಾಸಕ ಚಂದ್ರಪ್ಪನಿಗೆ ಒಂದು ವರ್ಷ ಮೊದಲೇ ಚುನಾವಣೆಯ ಜ್ವರ ಶುರುವಾದಂತಿದೆ. ತಾಲ್ಲೂಕಿನ ಮಹಿಳೆಯರಿಗೆ ಪುಕ್ಕಟೆ ಸೀರೆ ಹಂಚುವ ಮಹಾಸಮಾರಂಭವನ್ನೆ ಇತ್ತೀಚೆಗೆ ಮಾಡಿದ್ದಾನೆ. ಸೀರೆ ಸಮಾರಂಭದಲ್ಲಿ ನೂಕುನುಗ್ಗಲಿನ ಗದ್ದಲವೆದ್ದು ಅದ್ವಾನ ಮಾಡಿದನೆನ್ನುವ ಆಪಾದನೆ ಹೊತ್ತಿದ್ದಾನೆ. ಅಷ್ಟೇ ಅಲ್ಲ ತಾಲ್ಲೂಕಿನ ಮಹಿಳೆಯರ ಅಸಹಾಯಕತೆಯನ್ನು ಹರಾಜಾಕಿದ್ದಾನೆ. ಇದಿಷ್ಟೇ ಆಗಿದ್ದರೆ ಸರಿಬಿಡಿ, ರಾಜಕೀಯ ಗಿಮಿಕ್ಕು ಎನ್ನಬಹುದಾಗಿತ್ತು, ಆದರೆ ಚಂದ್ರಪ್ಪನ ಸೀರೆ ಸಮಾರಂಭದ ದಿನ ಹಸುಳೆ ಕಂದಮ್ಮನ ಸಾವಿಗೂ ಕಾರಣನಾದನಲ್ಲ ಅದೇ ಅವನ ಮೇಲೆ ಕ್ಷೇತ್ರದ ಪ್ರಜ್ಞಾವಂತರು ಮುನಿಸಿಕೊಳ್ಳಲು ಕಾರಣವಾಗಿದೆ. ಇಂಥಾ ಘಟನೆ ನಡೆದರೂ ಪೊಲೀಸು ಇಲಾಖೆ ಚಂದ್ರಪ್ಪನ ವಿರುದ್ಧ ಕ್ಯಾರೆ ಅಂದಿಲ್ಲ. ಚಂದ್ರಪ್ಪ ಸೀರೆ ಸಮಾರಂಭವನ್ನು ಮಾಡಿದ್ದು ಯಾವುದೇ ಖಾಸಗಿ ಮೈದಾನದಲ್ಲಲ್ಲ, ಖುದ್ದು ತಹಶೀಲ್ದಾರರ ಎದುರು, ತಾಲ್ಲೂಕು ಆಫೀಸಿನ ಕಾಂಪೌಂಡಿನೊಳಗೆ. ರೂಪಾ ಎಂಬ ತಹಶೀಲ್ದಾರಿಣಿ ಕೂಡ ಚಂದ್ರಪ್ಪನ ಅತಿಕ್ರಮದ ಬಗ್ಗೆ ಕಾನೂನು ಕ್ರಮ ಜರುಗಿಸಲು ತಯಾರಿಲ್ಲ.

ಭರಮಸಾಗರ ವಿಧಾನ ಸಭಾಕ್ಷೇತ್ರ ರದ್ದಾಗಿ ಜಗಳೂರು-ಚಿತ್ರದುರ್ಗ-ಹೊಳಲ್ಕೆರೆ ವಿಧಾನ ಸಭಾ ಕ್ಷೇತ್ರಗಳಲ್ಲಿ ಹಂಚಿಹೋಗಿ ಹೊಳಲ್ಕೆರೆ ಎಸ್.ಸಿ. ಮೀಸಲಾತಿ ಕ್ಷೇತ್ರವಾದದ್ದೇ ತಡ ಈ ಚಂದ್ರಪ್ಪ ಭರಮಸಾಗರದಿಂದ ನೆಗೆದದ್ದೇ ಹೊಳಲ್ಕೆರೆಗೆ. ಹಾಗೆ ಬಂದವನಿಗೆ ಬಿ.ಜೆ.ಪಿ.ಯ ಪರ ಗಾಳಿ ಮತ್ತು ಯಡ್ಡಿಯ ವೀರಶೈವ ಪ್ರಭಾವ ಚಂದ್ರಪ್ಪನನ್ನು ಕೈಹಿಡಿದು ಬಿಟ್ಟಿತು. ಕಾಂಗ್ರೆಸ್ಸಿನ ಆಂಜನೇಯ ಚಂದ್ರಪ್ಪನ ದುಡ್ಡು-ದುಗ್ಗಾಣಿ-ಜಾತಿ ರಾಜಕಾರಣದ ಮುಂದೆ ವೀಕೆನಿಸಿದರು. ದೇವೇಗೌಡ-ಮಗ ಕುಮಾರಸ್ವಾಮಿ ಯಡ್ಡಿಗೆ ಕೈಕೊಟ್ಟರೆಂಬ ಮಹಾದ್ರೋಹದ ಗಾಳಿ ಅದು ಈ ಭಾಗದ ವೀರಶೈವರ ಮೇಲೆ ಪರಿಣಾಮ ಬೀರಿತ್ತು. ಈ ಭಾಗದಲ್ಲಿ ವೀರಶೈವ ಒಳ ಪಂಗಡಗಳಲ್ಲೆ ಸಾಧು ಸದ್ಧರ್ಮ ಲಿಂಗಾಯತರ ಪ್ರಭಾವ ಹೆಚ್ಚು ಆದರೆ ಈ ಪ್ರದೇಶ ಸ್ವಯಂ ಘೋಷಿತ ಜಗದ್ಗುರುಗಳ ಕೇಂದ್ರ ಸ್ಥಾನವಾದುದರಿಂದ ಯಡಿಯೂರಪ್ಪ ಬಣಜಿಗ ಲಿಂಗವಂತನಾದರೂ ಅವರಿಗಾದ ಅನ್ಯಾಯ ಒಟ್ಟಾರೆ ಸಮೂದಾಯಕ್ಕಾದ ಮಹಾದ್ರೋಹವೆಂದೇ ಪರಿಗಣಿಸಿದ ಇಲ್ಲಿನ ಜನತೆ ಚಂದ್ರಪ್ಪನೆಂಬ ಕಲ್ಲುಬಂಡೆಯ ಪರವಾಗಿ ನಿಂತು ಬಿಟ್ಟಿತು. ಚಂದ್ರಪ್ಪ ಗೆದ್ದೂ ಬಿಟ್ಟ.

ಈಗ ಚಂದ್ರಪ್ಪನ ಶಾಸಕತ್ವಕ್ಕೆ ನಾಲ್ಕು ವರ್ಷ ಭರ್ತಿಯಾಗಿದೆ. ಮುಂದೂ ಶಾಸಕನಾಗುವ ಧಾವಂತ ಅವನೆದೆಯೊಳಗೆ ಥಕಥಕಸುತ್ತಿರುವ ಪರಿಣಾಮದಿಂದಲೇ ಇತ್ತೀಚೆಗೆ ಎರಡು ಸಾರ್ವಜನಿಕ ದಾನ ಸಮಾರಂಭಗಳನ್ನು ಮಾಡಿದ. ಒಂದು ಸೀರೆ ಸಮಾರಂಭ. ಅಲ್ಲಿ ಅನಾಹುತವಾದದ್ದರಿಂದ ಸದ್ದಿಲ್ಲದೆ ಮತ್ತೊಂದು ಸಮಾರಂಭ ಪ್ರಾರಂಭಿಸಿದ. ಅದು ನಾಯಕ ಸಮೂದಾಯದ ಮನೆ ಬಾಗಿಲಿಗೆ ವಾಲ್ಮೀಕಿ ಮಹಾಋಷಿಯ ಭಾವಚಿತ್ರವಿರುವ, ಅವರ ಪಾದತಳದಲ್ಲಿ ತನ್ನ ಭಾವ ಚಿತ್ರವಿರುವ ಜೊತೆಗೆ ಪೋಟೋ ತಲುಪಿಸುವ ಬೃಹತ್ ಯೋಜನೆ. ತನ್ನ ಸ್ವಜಾತಿಯ ಬಂಧುಗಳಿಗೆ ಸುತ್ತಿಗೆ, ಚಾಣಾ, ಸಾಧು ವೀರಶೈವರಿಗೆ ಮರುಳುಸಿದ್ಧನ ಭಾವಚಿತ್ರ, ಬಣಜಿಗಲಿಂಗದವರಿಗೆ ಯಡ್ಡಿಯ ವೀರಾವೇಶದ ಭಾವಚಿತ್ರ, ಮಾದಿಗ ಸಮುದಾಯಕ್ಕೆ ಬಾಬು ಜಗಜೀವನ ರಾಮ್ ಭಾವಚಿತ್ರ, ಗೊಲ್ಲರಿಗೆ ಶ್ರೀಕೃಷ್ಣ ಪರಮಾತ್ಮ, ಕುರುಬರಿಗೆ ಕನಕದಾಸರ ಭಾವಚಿತ್ರ.... ಹೀಗೇ ಆಯಾ ಜಾತಿಗನುಗುಣವಾಗಿ ಏನು ಬೇಕೋ ಅದನ್ನು ಹಂಚುವ ಹೊಸ ಯೋಜನೆಯೂ ಸಿದ್ಧವಾಗಿದೆ.



ಹೊಳಲ್ಕೆರೆ ವಿಧಾನ ಸಭಾ ಕ್ಷೇತ್ರವೇ ವಿಚಿತ್ರ ಕೆಟಗರಿಯ ಕ್ಷೇತ್ರ. ಒಮ್ಮೆ ಗೆದ್ದವರನ್ನು ಎಂದೂ ಎರಡನೇ ಬಾರಿಗೆ ಗೆಲ್ಲಿಸಿದ ಜಾಯಮಾನ ಇಲ್ಲಿನ ಜನರದ್ದಲ್ಲ, ಒಮ್ಮೆ ಗೆದ್ದವನು ಯೋಗ್ಯನೋ ಅಯೋಗ್ಯನೋ ಏನೇ ಆಗಿದ್ದರೂ ಮತ್ತೊಂದು ಚುನಾವಣೆಯಲ್ಲಿ ಆತನಿಗೆ ಸೋಲು ಖಚಿತ. ಹಾಗಂತ ಚಂದ್ರಪ್ಪನಿಗೂ ಅಂಥದೊಂದು ಭೀತಿ ಕಾಡಿದೆಯೋ ಅಥವಾ ಮತ್ತೊಮ್ಮೆ ಗೆದ್ದು ಕ್ಷೇತ್ರದ ಮತದಾರನ ನಂಬಿಕೆಯನ್ನು ಸುಳ್ಳು ಮಾಡುವ ದುರುದ್ದೇಶವೋ ಗೊತ್ತಿಲ್ಲ, ಹಾಗೆ ನೋಡಿದರೆ ಚಂದ್ರಪ್ಪ ಯಡ್ಡಿಯ ಗುಂಪಿನಲ್ಲಿ ಎಂದೂ ತನ್ನ ವಕ್ರಮಾರಿ ಪ್ರದರ್ಶಿಸದಿದ್ದರೂ ಯಡ್ಡಿಯ ಚಿಡ್ಡಿಯೊಳಗೇ ತನ್ನದೆಲ್ಲವನ್ನು ಬಚ್ಚಿಟ್ಟುಕೊಂಡವನು.

ಇತ್ತೀಚೆಗೆ ಹೊಳಲ್ಕೆರೆಯ ಮತದಾರ ಚಂದ್ರಪ್ಪನ ವರ್ತನೆಗೆ ಮೂಗು ಮುರಿದಾಗಿದೆ. ಕ್ಷೇತ್ರದಲ್ಲಿರುವ ಮೂರು ಪ್ರಮುಖ ಜಾತಿಗಳು ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ. ಇಲ್ಲಿ ದಲಿತವರ್ಗ, (ಲಂಬಾಣಿ-ಮಾದಿಗ-ಭೋವಿ) ಪ್ರಧಾನವಾದರೆ ಎರಡನೆಯದು ಸಾಧುಲಿಂಗಾಯತರು, ಮೂರನೆಯದೇ ನಾಯಕ-ಗೊಲ್ಲರು-ಕುರುಬರು. ಈ ಮೂರು ಕೆಟಗರಿಯ ಸಮುದಾಯದಲ್ಲಿ ಒಂದು ಸಮುದ್ಾಯ ಕೈಕೊಟ್ಟರೂ ಗೆಲ್ಲಬಹುದಾದ ವೀರ ಘಟಾರ ಸೇರುವುದು ಗ್ಯಾರಂಟಿ. ಹಾಗಾಗಿಯೇ ಚಂದ್ರಪ್ಪ ಈ ಬಾರಿ ಸೀರೆ ಸಮಾರಂಭ-ಫೋಟೋ ವಿತರಣೆಯಂತಹ ತಂತ್ರಗಳನ್ನು ಜಾರಿಗೊಳಿಸುವ ಕುತಂತ್ರಕ್ಕೆ ಕೈಹಾಕಿರುವುದು.

ಚಂದ್ರಪ್ಪ ನಂಬಿರುವುದು ಕ್ಷೇತ್ರದ ಮತದಾರರನ್ನಲ್ಲ, ಬಹುಸಂಖ್ಯಾ ಬಲ ಹೊಂದಿರುವ ಸಿರಿಗೆರೆಯ ಸಾಧು ಸದ್ಧರ್ಮಮಠದ ಜಗದ್ಗುರುಗಳ ಪಾದಾರವಿಂದಗಳನ್ನು. ಅವರದೊಂದು ಫರ್ಮಾನಿಗಾಗಿಯೇ ಚಂದ್ರಪ್ಪ ಈ ಬಾರಿಯೂ ಜಾತಕಪಕ್ಷಿಯಂತೆ ಕಾಯುವ ಮತ್ತು ಮಂಗಾಟಗಳ ಮೊರೆಹೋಗಿರುವುದು. ಇಷ್ಟಾದರೂ ಚಂದ್ರಪ್ಪನಿಗೆ ಮುಂದೆ ಶಾಸಕನಾಗುವ ಧೈರ್ಯ ಸಾಲದಾಗಿದೆ. ಒಂದು ಮತದಾರನ ಪಾರಂಪಾರಿಕ ತೀರ್ಮಾನ, ಎರಡು ಯಡಿಯೂರಪ್ಪ ತನಗಾದ ಅನ್ಯಾಯ ವೀರಶೈವ ಸಮೂದಾಯಕ್ಕಾದ ಅನ್ಯಾಯ ಎಂದು ಬಂಬಡಾ ಬಜಾಯಿಸುವ ಅಸಹ್ಯ ವರಸೆಯೇ ಕ್ಷೇತ್ರದ ಲಿಂಗವಂತರನ್ನೂ ಮುಜುಗರಕ್ಕೀಡುಮಾಡಿದೆ. ಪ್ರಜ್ಞಾವಂತ ಲಿಂಗಾಯತರು ಬಿ.ಜೆ.ಪಿ.ಯನ್ನು ಕ್ಷೇತ್ರದಿಂದಲೇ ಒದ್ದೋಡಿಸುವ ತವಕದಲ್ಲಿದ್ದಾರೆಂಬುದು ಬಚ್ಚಿಟ್ಟುಕೊಳ್ಳುವ ಸಂಗತಿ ಏನಲ್ಲ ಬಿಡಿ.



ಮತ್ತೊಂದು ಸಂಗತಿಯೆಂದರೆ ದಲಿತರು ಮತ್ತು ಹಿಂದುಳಿದ ಜಾತಿಗಳೂ ಈ ಬಾರಿ ಚಂದ್ರಪ್ಪನ ಸೋಲಿಗೆ ಕಂಕಣ ಧರಿಸಿ ನಿಂತಿವೆ. ಇವೆಲ್ಲ ಸಂಗತಿಗಳು ಚಂದ್ರಪ್ಪನ ಚಿತ್ತ ಕೆಡಿಸಿಬಿಟ್ಟಿವೆ. ಹಾಗಾಗಿಯೇ ಚಂದ್ರಪ್ಪ ವಿಚಿತ್ರ ಗಿಮಿಕ್ಕುಗಳಿಗೆ ಕೈ ಹಾಕಿದ್ದಾನೆ.

ಚಂದ್ರಪ್ಪ ಹೊಳಲ್ಕೆರೆ ಕ್ಷೇತ್ರದ ಶಾಸಕನಾದ ನಂತರ ಮತದಾರನ ನಿರೀಕ್ಷೆ ಹುಸಿಯಾಗಿದೆ. ಯಡಿಯೂರಪ್ಪನ ನಿಶೆಯಲ್ಲೇ ಗೆದ್ದುಬಂದ ಚಂದ್ರಪ್ಪ ಬರಪೂರ ಮೆರೆದುಬಿಟ್ಟ. ಕ್ಷೇತ್ರದ ಹಳ್ಳಿಗಳು ಜಾತಿಕಲಹದಿಂದ ಕಂಗೆಟ್ಟವು. ಸ್ವಜಾತಿ ವ್ಯಾಮೋಹ ಮಿತಿಮೀರಿತು. ಲಿಂಗಾಯತರನ್ನು ಒಟ್ ಬ್ಯಾಂಕ್ ಮಾಡಿಕೊಂಡನೆಂಬ ಆಪಾದನೆ ವೀರಶೈ ವಲಯದಲ್ಲೆ ಭುಗಿಲೆದ್ದಿದೆ. ದಲಿತರಿಗೆ ಕೊಳವೆ ಬಾವಿಯ ತಾರತಮ್ಯ, ಗ್ರಾಮಗಳ ಅಭಿವೃದ್ಧಿಗೆ ಮನಸ್ಸು ಮಾಡ ಕೆರೆ ಕಂಡರೆ ಇವನಿಗೆ ಅದೇನು ಖುಷಿಯೋ ಅದ ಮಣ್ಣಲ್ಲೇ ಹೊರಳಾಡಿ ಹೂಳು ತೆಗೆಸಿ ಕೋ ಲೂಟಿಮಾಡುವ ಭರ್ಜರಿ ಪ್ಲಾನು. ಕೆರೆ ಏರಿಗಳನ್ನ ಅಗಲೀಕರಣ ಹಾಕುತ್ತಾನೆ. ಇವನ ನಾಲ್ಕು ವರ್ಷ ಶಾಸಕತ್ವದಲ್ಲಿ ಕ್ರಿಯಾ ಯೋಜನೆಯೆಂದಾಗಿದ್ದು, ಗ್ರಾಮಾಂತ ಪ್ರದೇಶಗಳ ರಸ್ತೆಗಳು ಅಧ್ವಾನವಾಗಿದ್ದರೂ ಸಿರಿಗೆರೆಯ ಜಗದ್ಗುರುಗಳು ಕಡೂರಿನಲ್ಲಿ ನಡೆಸುವ ತರಳಬಾಳ ಹುಣ್ಣಿಮೆಯ ನೆಪದಲ್ಲಿ ಅವರ ಮೆರವಣಿಗೆ ಹೊರಡು ಕಾರಿನ ಮಾರ್ಗ ರಾತ್ರೋರಾತ್ರಿ ಡಾಂಬರೀಕರಣವಾದದ್ದ ದಲಿತ-ಹಿಂದುಳಿದ ವರ್ಗಗಳಲ್ಲಿ ಸಿಟ್ಟುತರಿಸಿವೆ.

ಒಂದು ತಮಾಶೆಯ ಸಂಗತಿ ಎಂದರೆ, ಸಿರಿಗೆರೆಯ ಜಗದ್ಗುರುಗಳು ಉಪಸ್ಥಿತಿಯಿರುವ ಯಾವುದೇ ತಿಥಿ-ಮತಿ ಸಮಾರಂಭಗಳಿಗೆ ಯಾವುದೇ ಜನಪ್ರತಿನಿಧಿಗಳು ಹಾಜರಾದರೂ ಅವರು ಮೊದಲು ಸಾರ್ವಜನಿಕರಿಗಾಗಿ ಏನು ಕೆಲ ಮಾಡಿದೆನೆನ್ನುವ ವರದಿ ಸಲ್ಲಿಸಬೇಕು ಇದು ಪದ್ಧತಿ ಜನಪ್ರತಿನಿಧಿಗಳು ಜಗದ್ಗುರುಗಳ ಫರ್ಮಾನನ್ನು ಚಾಚೂತಪ್ಪದೆ ಪಾಲಿಸುತ್ತಾರೆ. ಚಂದ್ರಪ್ಪನೆಂಬ ಗಮಾರ ಗ್ರಾಮವೊಂದರಲ್ಲಿ ಜಗದ್ಗುರುಗಳ ಉಪಸ್ಥಿತಿಯಲ್ಲಿ ನಡೆದ ಶಿವಗಣಾರಾಧನೆಯ ಸಮಾರಂಭಕ್ಕೆ ಬಿಜಯಂಗೈದ. ಅಲ್ಲಿ ತನ್ನ ಕ್ಷೇತ್ರದ ಸಾಧನೆಯ ಪಟ್ಟಿ ಸಲ್ಲಿಸಿದ. ಅಲ್ಲಿ ಅದರಲ್ಲಿ ಒಂದು ಪ್ರಮುಖವಾದ ವರದಿಯಿತ್ತು, ಅದೇನೆಂದರೆ ಕ್ಷೇತ್ರದ ಪ್ರಮುಖ ರಸ್ತೆಯ ಡಾಂಬರೀಕರಣಕ್ಕೆ ನೂರು ಕೋಟಿ ಮಂಜೂರಾತಿ ಅರ್ಜಿಯನ್ನು ಸರಕಾರಕ್ಕೆ ಕಳುಹಿಸಲಾಗಿದೆ, ಈ ರಸ್ತೆಯಲ್ಲಿ ಸಾಧು ಸದುದ್ಧರ್ಮ ಜಗದ್ಗುರುಗಳ ಮತ್ತು ಗಣ್ಯರುಗಳ ಕಾರು ಅಡ್ಡಾಡುವುದರಿಂದ ಈ ರಸ್ತೆ ತುರ್ತಾಗಿ ನವೀಕರಣಗೊಳ್ಳಬೇಕು ಎನ್ನುವ ಅಂಶವಿದ್ದ ಯೋಜನೆ, ಇಂಥಾ ಭಟ್ಟಂಗಿ ವರದಿಗೆ ಖುದ್ದು ಜಗದ್ಗುರುಗಳೇ ಥಂಗು ಹೊಡೆದು ಹೋದರೆನ್ನಿ.

ಇಂಥಾ ಗುಲಾಮ ಶಾಸಕನ ಇಂಥಾ ಓಲೈ ರಾಜಕಾರಣವೇ ಕ್ಷೇತ್ರದ ಮತದಾರನನ ಅಸಹ್ಯಕ್ಕೀಡುಮಾಡಿದೆ. ಖುದ್ದು ವೀರಶೈವ ಲಿಂಗಾಯತರ ಚಂದ್ರಪ್ಪನ ವರ್ತನೆಗೆ ಬೇಸತ್ತು ಹೋಗಿದ್ದಾರೆ.

ನಾಲ್ಕು ವರ್ಷಗಳಲ್ಲಿ ಕೋಟ್ಯಂತರ ರೂಪಾಯಿ ಜೇಬಿಗಿಳಿಸಿದ ಚಂದ್ರಪ್ಪ ಜಗದ್ಗುರುಗಳ ನಂಬುಗೆಯ ಪಟ್ಟಿಯಿಂದ ಈಗ ಕಪ್ಪು ಪಟ್ಟಿಗೆ ಸೇರ್ಪಡೆಯಾ ದ್ದಾನೆಂಬುದು ಮಠದ ಮೂಲಗಳ ವರದಿ.

• ವರದಿಗಾರ

SSLC ನಂತರ

ಮುಂದೇನು...?

ಲೇಖಕ: ಗಿರೀಶ್ ತಾಳೀಕಟ್ಟೆ

ಈ ಟಿಪಿಕಲ್ ಪ್ರಶ್ನೆಗೆ ಗೈಡ್ ಪ್ರಕಾಶನದ ನೂತನ ಪುಸ್ತಕ ಸಮಗ್ರ ಉತ್ತರವಾಗಲಿದೆ.

ಬಿಡುಗಡೆಗೆ ಸಜ್ಜಾಗಿದೆ

ವಿದ್ಯಾರ್ಥಿಗಳಿಗೆ ಉಪಯುಕ್ತ...

ಪೋಷಕರಿಗೆ ಅತ್ಯುಪಯುಕ್ತ...

ಸಮಾಜದ ಕಟ್ಟಕಡೆಯ ವೃತ್ತಿಯವರ ಜೊತೆ ನಿಂತಾಗ

ಇವೆಲ್ಲ ಯಾತನಾಮಯ ಅನುಭವಗಳು.

ಳೆದ ಏಪ್ರಿಲ್ 13 ರಂದು ಬೃಹತ್ ಬೆಂಗಳೂರು ಹಾನಗರ ಪಾಲಿಕೆ ಆವರಣದಲ್ಲಿ ಜನಪರ ಟನೆಗಳಿಗೆ ಸೇರಿದ ನೂರಿನ್ನೂರು ಜನರ ಒಂದು ಟನಾ ಧರಣಿ ನಡೆಯಿತು. ಅದರ ಮರುದಿನ ೇಡ್ಕರ್ ಜಯಂತಿಯ ದಿನ ಪುನಃ ಅದೇ ಸ್ಥಳದಲ್ಲಿ ಒಂದು ಸಾವಿರ ಜನರು- ಅವರಲ್ಲಿ ಬಹುತೇಕ ತ ಜನರು- ಅಲ್ಲಿ ಸೇರಿ ಪ್ರತಿಭಟನಾ ಯೊಂದನ್ನು ನಡೆಸಿದರು.

ಎರಡೂ ಪ್ರತಿಭಟನೆಗಳು ಬೆಂಗಳೂರಿನ ಕಸ ಎತ್ತಿರುವ ಪೌರ ಕಾರ್ಮಿಕರ ಬದುಕಿನ ಹಕ್ಕಿಗಾಗಿ ದ್ದು.

ಲಂಕೇಶ್ ಪತ್ರಿಕಾ ಬಳಗದೊಂದಿಗೆ ನಾವೂ ಅವತ್ತು ಈ ಕಾರ್ಮಿಕರ ಜೊತೆ ನಿಂತು ಕೂಡಿಸಿದೆವು. ಸುಮಾರು ಒಂದು ಕೋಟಿ ಸಂಖ್ಯೆಯಿರುವ ಬೆಂಗಳೂರು ನಗರದ ಪರಿಸರ ರಲ್ಯ ಕಾಪಾಡುವ, ಆ ಮೂಲಕ ನಗರವನ್ನು ನಗರವಾಸಿಗಳನ್ನು ರಕ್ಷಿಸುತ್ತಿರುವ ಈ 'ಪರಿಸರ ರ್'ಗಳ ಜೀವನ ಅತ್ಯಂತ ಹೀನಾಯ ಎಲ್ಲಿದೆ.

ಇವರ ಸಂಖ್ಯೆ ಅಂದಾಜು ಹನ್ನೆರಡು ಸಾವಿರ ಹದಿನೈದು ಸಾವಿರದ ತನಕ ಇರಬಹುದು. ತಿಸಲು ಇವರಿಗೆಲ್ಲ ಒಂದು ಹೆಸರು ಅಂತ ಎನ್ನುವುದನ್ನು ಬಿಟ್ಟರೆ ಕೆಲಸ ಮಾಡುವ ಲ್ಲಿ ಅಟೆಂಡನ್ಸ್ ಆಗಲಿ, ಸೇವಾ ದಾಖಲೆಗಳಾ ಸಂಬಳ ಪಡೆಯುವುದಕ್ಕೆ ರಸೀದಿ, ಕೊನೆ ದು ಸಹಿಯಾಗಲಿ ಯಾವುದೂ ಇಲ್ಲ. ಅಂದರೆ ತ್ತಿ ನಾಗರೀಕರಿಗೂ ನಿತ್ಯ ಕಾಣಿಸುವ ಈ ಪೌರ ರ್ಮಿಕರು ಸರ್ಕಾರದ ಪಾಲಿಗೆ invisible ಗಿದ್ದಾರೆ. ಅಂದ ಹಾಗೆ ಇವರ ತಿಂಗಳ ಸಂಬಳ ೨ ಸಾವಿರ ರೂ. ನಿಂದ ಎರಡು ಸಾವಿರದ ನೂರರ ತನಕ ಇದೆ! ಇದೊಂದು ನಗಣ್ಯ ತ್ತ ಎಂಬುದು ನಿಜ. ಆದರೆ ಇದನ್ನು ಸರ್ಕಾರ ವಾಗಿ ಕೊಡುವುದಿಲ್ಲ. ಆಯಾ ಪ್ರದೇಶಗಳ ಸಾಗಣಿಕೆಯ ಗುತ್ತಿಗೆ ಪಡೆದಿರುವ ಖಾಸಗಿ ಟ್ರಾಕ್ಟರ್‌ಗಳು ಬೀದಿ ಕಸ ಗುಡಿಸುವ, ಮನೆ ಮನೆಗೆ ಕಸ ಸಂಗ್ರಹಿಸಿ ಹೊತ್ತೊಯ್ಯುವ ಈ ಕಾರ್ಮಿಕರಿಗೆ ನೀಡುತ್ತಿದ್ದಾರೆ. ಖಾಸಗೀಕರಣದ ಭಯಾನಕ ಪಣೆ ಹೇಗಿರುತ್ತದೆಂದು ಅರ್ಥ ಮಾಡಿಕೊಳ್ಳಲು ಳೂರಿನ ಈ ಕಸ ಸಾಗಾಣಿಕೆಯ ಪೌರ ಕಾರ್ಮಿಕರ ಕೇ ಜೀವಂತ ಸಾಕ್ಷಿಯಾಗಿದೆ.

ಬೆಂಗಳೂರನ್ನು ಹಲವು ವಿಭಾಗಗಳಾಗಿ ವಿಭಾಗಿಸಿ ಸಾಗಿಸುವ ಗುತ್ತಿಗೆಯನ್ನು ಮಹಾನಗರ ಪಾಲಿಕೆಯು ಖಾಸಗಿ ವ್ಯಕ್ತಿಗಳಿಗೆ ಕಾಂಟ್ರ್ಯಾಕ್ಟ್ ನೀಡಿದೆ. ಈ ಯ ಮೊತ್ತ ನೂರಾರು ಕೋಟಿ ರೂಪಾಯಿಗಳಷ್ಟಿದೆ.

ಅಂದ ಹಾಗೆ ಈ ಕಸ ನಿರ್ವಹಣೆ ಬಾಬ್ತಿನ ಹೆಸರಿನಲ್ಲೇ ನಗರದ ಪ್ರತಿ ಮನೆಯಿಂದಲೂ ಬಿಬಿಎಂಪಿಯು ವಾರ್ಷಿಕ ಒಂದು ನೂರಾ ಇಪ್ಪತ್ತು ರೂಪಾಯಿ ತೆರಿಗೆಯನ್ನು ವಸೂಲಿ ಮಾಡುತ್ತಿದೆ. ಆ ಹಣದಿಂದಲೇ ಬಿಬಿಎಂಪಿ ತನ್ನ ಗುತ್ತಿಗೆದಾರರಿಗೆ ಹಣ ಪಾವತಿಸುತ್ತಿದೆ. ಈ ಕಾರ್ಮಿಕರು ತಮ್ಮ ವಾಸಸ್ಥಳವಿರುವ ಎಲ್ಲೆಲ್ಲಿಂದಲೋ ಹೊರಟು ಕೆಲಸದ ಸ್ಥಳ ತಲುಪಿ ಬೀದಿಗಳ ಕಸ ಗುಡಿಸಿ, ತಳ್ಳುವ ಗಾಡಿ ಹೊರಡಿಸಿ ಮನೆ ಮನೆಗೂ ಹೋಗಿ ಕಸ ಎತ್ತಿಕೊಂಡು ಬರುತ್ತಿದ್ದಾರೆ.

ಗುತ್ತಿಗೆದಾರರು ಹೀಗೆ ಸಂಗ್ರಹವಾಗುವ ಕಸವನ್ನು ಲಾರಿಗಳಲ್ಲಿ ತುಂಬಿಸಿ ನಗರದಾಚೆಗೆ ಸಾಗಿಸುತ್ತಾರೆ. ಈ ಕಸದ ರಾಶಿ ಅದೆಲ್ಲಿ ಮಾಯವಾಗುತ್ತಿದೆ, ಕಸ ಎಸೆಯುತ್ತಿರುವ ಪ್ರದೇಶವನ್ನು ರಾಜ್ಯ ಮಾಲಿನ್ಯ ನಿಯಂತ್ರಣ



ಪೌರ ಕಾರ್ಮಿಕರೊಂದಿಗೆ ಚರ್ಚೆಯಲ್ಲಿ ಕಾರ್ಯಕರ್ತೆ ಗೌರಿ ಮತ್ತು ರೇಣುಕಾ

ಮಂಡಳಿಯ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರಾ ಎಂಬುದೆಲ್ಲಾ ಯಾರಿಗೂ ಗೊತ್ತಿಲ್ಲ

ಅದೊಂದೆಡೆ ಇರಲಿ,

ಕಸ ಸಾಗಾಣಿಕೆಯ ಜವಾಬ್ದಾರಿಯನ್ನು ಟೆಂಡರ್ ಮೂಲಕ ಕಂಟ್ರಾಕ್ಟರ್‌ಗಳಿಗೆ ಒಪ್ಪಿಸಿದ ನಂತರ ಹಣ ಪಾವತಿ ಬಿಟ್ಟರೆ ಸರ್ಕಾರ ಬೇರೆ ಹೊಣೆಗಾರಿಕೆಯೇ ಇಲ್ಲವೆಂಬಂತೆ ವರ್ತಿಸುತ್ತದೆ. ಕಸ ಸಂಗ್ರಹಣೆಗೆ, ಸಾಗಾಣಿಕೆಗೆ ಗುತ್ತಿಗೆದಾರರು ಅನುಸರಿಸುವ ವಿಧಾನವೇನು... ಕೆಲಸ ಮಾಡುವ ಪೌರ ಕಾರ್ಮಿಕರ ಸಂಬಳ, ಸವಲತ್ತು ಸ್ಥಿತಿಗಳೇನೆಂದು ಬಿಬಿಎಂಪಿ ಕೇಳುತ್ತಿಲ್ಲ. ರಾಜ್ಯ ಕಾರ್ಮಿಕ ಇಲಾಖೆ ನಿಗಧಿಪಡಿಸಿರುವ ಕಾರ್ಮಿಕ ಹಿತರಕ್ಷಣೆಯ ನಿಯಮಗಳು ಇಲ್ಲಿ ಕಾಣುವುದೇ ಇಲ್ಲ, ಬಹಳ ಮುಖ್ಯವಾಗಿ ಸರ್ಕಾರವೇ ಆದೇಶಿಸಿರುವ ಕನಿಷ್ಠ ವೇತನ ರೂ. 7300 ಎಂಬುದಕ್ಕೆ ಗುತ್ತಿಗೆದಾರರು ಕವಡೆ ಕಾಸಿನ ಬೆಲೆಯನ್ನು ನೀಡುವುದಿಲ್ಲ, ಈಗ ಕನಿಷ್ಠ ವೇತನ ಜಾರಿಗಾಗಿ ಪೌರ ಕಾರ್ಮಿಕರು ಸಂಘಟಿತ ಹೋರಾಟ ಆರಂಭಿಸಿದ್ದಾರೆ. ಹಿರಿಯ ವಕೀಲ ಬಾಲನ್ ಹಾಗೂ ಸಾಮಾಜಿಕ ಕಾರ್ಯಕರ್ತೆ ಗೌರಿ ಪೌರ ಕಾರ್ಮಿಕರ ಜೊತೆ ನಿಂತಿದ್ದಾರೆ.

ಬೆಂಗಳೂರಿನ ಕಸ ಸಾಗಿಸುವ ಗುತ್ತಿಗೆಯು ಒಂದೇ ರಕ್ತ ಸಂಬಂಧಿ ಕುಟುಂಬಕ್ಕೆ ಸೇರಿದ ಸುಮಾರು ಮೂವತ್ತೈದು ಜನರ ಕೈಲಿದೆ. ಪೌರ ಕಾರ್ಮಿಕರ ಸಂಬಳದ ಹಣ ತಿಂದು ಇವರೆಷ್ಟು ಕೊಬ್ಬಿದ್ದಾರೆಂದರೆ ಸರ್ಕಾರದ ಕಾಯ್ದೆ ಕಾನೂನುಗಳೆಲ್ಲ ಇವರಿಗೆ ಕಾಲಕಸದಂತಾಗಿ ಹೋಗಿದೆ. ಸ್ವತಃ ಕಾರ್ಪೋರೇಟರ್‌ಗಳ ಬಿಬಿಎಂಪಿಯ ಆದೇಶಗಳಿಗೂ ಇವರು ಬೆಲೆ ಕೊಡುತ್ತಿಲ್ಲ. ಹೊರನೋಟಕ್ಕೆ ಈ ಕಸ ಸಾಗಾಣಿಕೆಯ ದಂಧೆ ಅಷ್ಟು ಆಕರ್ಷಕವಾಗಿ ಕಾಣುವುದಿಲ್ಲ ನಿಜ ಆದರೆ ಇದರಲ್ಲಿ ವಿಪರೀತ ಲಾಭವಿದೆ.


ಉದಾಹರಣೆಗೆ ಬಿಬಿಎಂಪಿಯು ಪ್ರತಿ ವರ್ಷ ಕಸ ಸಾಗಾಣಿಕೆ ಬಾಬ್ತಿಗೆಂತಲೇ ಸುಮಾರು ಇನ್ನೂರೈವತ್ತು ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ಇದು ಗುತ್ತಿಗೆದಾರರಿಗೆ ಪಾವತಿಸಲಾಗುತ್ತಿರುವ ಬೃಹತ್ ಮೊತ್ತ, ಬೆಂಗಳೂರಿನ ಒಟ್ಟಾರೆ ಪೌರ ಕಾರ್ಮಿಕರ ಸಂಖ್ಯೆ ಹನ್ನೆರಡು ಸಾವಿರ ಅಂತಿಟ್ಟುಕೊಂಡರೆ ಇವರಿಗೆ ತಿಂಗಳಿಗೆ 2100 ರೂ. ಸಂಬಳದ ಲೆಕ್ಕ ಹಾಕಿದರೆ ಅದು ತಿಂಗಳಿಗೆ 2.52 ಕೋಟಿ ರೂಪಾಯಿ ಆಗುತ್ತದೆ. ಆ ಪ್ರಕಾರ ವರ್ಷಕ್ಕೆ ಈ ಮೊತ್ತ 30.24 ಕೋಟಿ ರೂಪಾಯಿ ಆಯಿತು... ಇವರೊಂದಿಗೆ ಕಸ ಸಾಗಿಸುವ ಆಟೊ, ಲಾರಿಗಳೂ. ಈ ಗಾಡಿಗಳ ಡ್ರೈವರ್, ಕ್ಲೀನರ್‌ಗಳ, ಮೇಸ್ತ್ರಿಗಳ ಸಂಬಳವೆಂದು, ಪೆಟ್ರೋಲ್, ಡೀಸೆಲ್ ಖರ್ಚೆಂದು ಎಪ್ಪತ್ತು ಕೋಟಿ ರೂಪಾಯಿ ಆಯಿತೆಂದುಕೊಳ್ಳಿ, ಇವೆರಡು ಬಾಬ್ತಿನಿಂದ ಬರುವ ವರ್ಷದ ಖರ್ಚು ನೂರು ಕೋಟಿ ರೂಪಾಯಿ ಮಾತ್ರ. ಆದರೆ ಬಿಬಿಎಂಪಿಯ ಕಾಂಟ್ರಾಕ್ಟರ್‌ಗಳಿಗೆ ಇನ್ನೂರಾ ಐವತ್ತು ಕೋಟಿ ರೂಪಾಯಿ ಕೊಡುತ್ತಿದೆ.

ಅದರಲ್ಲಿ ನೂರು ಕೋಟಿ ಖರ್ಚು ಮಾಡಿ ನೂರಾ ಐವತ್ತು ಕೋಟಿ ರೂಪಾಯಿ ತಿಂದು ತೇಗುತ್ತಿದ್ದಾರೆ ಖಾಸಗಿ ಗುತ್ತಿಗೆದಾರರು. ಕಸ ಸಾಗಿಸುವ ದಂಧೆಯಲ್ಲಿ ಲಾಭದ ರಸ ಹಿಂಡಿ ತೆಗೆಯುತ್ತಿರುವ ಜನ ಇವರು. ಆಕಸ್ಮಾತ್ ಮುಂದಿನ ತಿಂಗಳಿನಿಂದಲೇ ಈ ಪೌರ ಕಾರ್ಮಿಕರಿಗೆ ಸಂಬಳ ಇನ್ನೊಂದು ಎರಡು ಸಾವಿರ ಜಾಸ್ತಿ ನೀಡಿದರೂ ಗುತ್ತಿಗೆದಾರರಿಗೆ ಲಾಭವೇನು ಕಡಿಮೆಯಾಗುವುದಿಲ್ಲ,

ಆದರೆ ಅವರು ಅಷ್ಟು ಸಲೀಸಾಗಿ ತಮ್ಮ ಲಾಭದ ಮೊತ್ತ ಕಡಿಮೆ ಮಾಡಿಕೊಳ್ಳಲು ಒಪ್ಪಲಾರರು... ಬಿಸಿಹಾಗದ ಹೊರತಾಗಿ.

ಮೊದಮೊದಲು ಈ ಕಸ ಸಾಗಿಸುವ ಪೌರ

ಸಂಪಾದಕೀಯ



• ಪಾರ್ವತೀಶ

ಕಾರ್ಮಿಕರೆಲ್ಲರೂ ತೆಲುಗು ಮಾತನಾಡುವ ದಲಿತ ಸಮುದಾಯದವರಿರಬಹುದು ಎನ್ನುವ ಅಂದಾಜಿತ್ತು, ಆದರೆ ಕಳೆದ ಹಲವು ತಿಂಗಳುಗಳ ಅವರೊಂದಿಗಿನ ಒಡನಾಟದಲ್ಲಿ ಗೊತ್ತಾಗಿರುವುದೇನೆಂದರೆ ಒಕ್ಕಲಿಗ, ಕುರುಬ, ಬೋವಿ, ಮುಸ್ಲಿಂ, ದೂರದ ಬಿಹಾರ, ಒಡಿಶಾಗಳಿಂದ ಬಂದಿರುವ ಬಡವರು ಕೂಡಾ ಬೆಂಗಳೂರಿನಲ್ಲಿ ಪೌರ ಕಾರ್ಮಿಕರಾಗಿ ಶೋಷಣೆಗೆ ಬಲಿಯಾಗುತ್ತಿದ್ದಾರೆ. ಇವರೆಲ್ಲಾ ತಮ್ಮ ಬದುಕಿನ ಬೇರೆಲ್ಲಾ ಸಾಧ್ಯತೆಗಳು ಕಮರಿ ಹೋದ ನಂತರ ಬೀದಿ ಕಸ ಗುಡಿಸುವ, ಕಸ ಸಾಗಿಸುವ ಕೆಲಸಕ್ಕೆ ಇಳಿಯುತ್ತಿದ್ದಾರೆ. ಕೆಲವು ದಲಿತ ಸಮುದಾಯದ ಕಾರ್ಮಿಕರಂತೂ ವಂಶಪಾರಂಪರ್ಯವಾದ ಅನಿವಾರ್ಯ ಆಯ್ಕೆ ಎಂಬಂತೆ ಈ ವೃತ್ತಿಯಲ್ಲಿದ್ದು ಯಾತನಾಮಯ ಜೀವನ ನಡೆಸುತ್ತಿದ್ದಾರೆ, ನಮ್ಮ ಸರ್ಕಾರಗಳಿಗೆ ಯಾವ ಹೊಣೆಗಾರಿಕೆಯೂ ಬೇಕಿಲ್ಲ, ಖಾಸಗಿಯವರಿಗೆ ಲಾಭ ಮಾಡುವುದನ್ನು ಬಿಟ್ಟರೆ ಬೇರೇನೂ ಯೋಚನೆಗಳಿರುವುದಿಲ್ಲ, ಮುಖ್ಯವಾಗಿ ಸರ್ಕಾರ ಹಾಗೂ ಖಾಸಗಿಯವರ ಹೊಂದಾಣಿಕೆಯಲ್ಲಿ ನಡೆಯುವ ಇಂತಾ ಕೆಲಸಗಳಲ್ಲಿ ಮೊದಲು ಮನುಷ್ಯತ್ವವನ್ನೇ ಕೊಲ್ಲಲಾಗುತ್ತಿದೆ. ನಮ್ಮದೇ ಸಮಾಜದ ಕಟ್ಟ ಕಡೆಯ ಮನುಷ್ಯರು ನಡೆಸುತ್ತಿರುವ, ಕಟ್ಟಕಡೆಯ ವೃತ್ತಿಯ ಜನರಿಂದಲೇ ತಾನೇ ನಮ್ಮ ನಗರವನ್ನಷ್ಟೇ ಅಲ್ಲದೆ ನಮ್ಮ ಮನೆಗಳನ್ನು ಸ್ವಚ್ಛವಾಗಿರಿಸಿಕೊಳ್ಳಲು ಸಾಧ್ಯವಾಗಿರುವುದು.


ಜನಸಾಮಾನ್ಯರಾದ ನಾವು, ನೀವೆಲ್ಲಾ ಈ ಕಸ ಸಾಗಿಸುವ ಪೌರ ಕಾರ್ಮಿಕರ ಕಷ್ಟದ ಬದುಕಿನತ್ತ ಕೊಂಚ ಗಮನಹರಿಸಬೇಕಿದೆ.

ಅವರಿಗೆಲ್ಲ ನಿಮ್ಮ ಬೆಂಬಲದ ಅಗತ್ಯವಿದೆ. ಜೊತೆಗೆ ಖಾಸಗೀಕರಣದ ಅಮಾನವೀಯ ಅಪಾಯಗಳ ಬಗ್ಗೆಯೂ ನಾವೆಲ್ಲಾ ಯೋಚಿಸಬೇಕಿದೆ.

ವಿಠಲನಿಗೆ ಕೈಕೋಳದ ಪರೀಕ್ಷೆ...

ಒಂದು ಪತ್ರ

ನಕ್ಸಲ್ ಬೆಂಬಲಿಗನೆಂಬ ಆರೋಪದಲ್ಲಿ ಬಂಧಿತನಾಗಿರುವ ಮಂಗಳೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿದ್ಯಾರ್ಥಿ ಕುತ್ಲೂರಿನ ವಿಠಲ ಮಲೆಕುಡಿಯನ ಕೈಗಳಿಗೆ ಕೋಳ ಹಾಕಿಕೊಂಡು ಪರೀಕ್ಷೆ ಬರೆಸಿರುವುದು ಸುಪ್ರೀಂ ಕೋರ್ಟ್ ಆದೇಶದ ಮತ್ತು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಹಿಂದೆ ಮಂಗಳೂರಿನ ಹಿರಿಯ ಪತ್ರಕರ್ತ ಬಿ.ವಿ.ಸೀತಾರಾಂ ಅವರಿಗೆ ಕೈಕೋಳ ತೊಡಿಸಿದಾಗ ಅದು ವ್ಯಾಪಕ ಖಂಡನೆಗೊಳಗಾಗಿತ್ತು. ಮಾತ್ರವಲ್ಲದೇ ರಾಜ್ಯ ಮಾನವ ಹಕ್ಕು ಆಯೋಗ, ಕೇಂದ್ರ ಮಾನವ ಹಕ್ಕು ಆಯೋಗ, ಅಂತಾರಾಷ್ಟ್ರೀಯ ಮಟ್ಟದ ಮಾನವ ಹಕ್ಕು ಸಂಘಟನೆ ಗಳಿಂದ, ನ್ಯಾಯಾಲಯ ಗಳಿಂದ ಪೊಲೀಸರು ಛೀಮಾರಿ ಹಾಕಿಸಿಕೊಂಡಿದ್ದರು. ಆದರೂ ಪುನಃ ಅಂತಹದ್ದೇ ಮಾನವ ಹಕ್ಕು ಉಲ್ಲಂಘನೆಯ ಕೃತ್ಯವನ್ನು ಎಸಗುತ್ತಿರುವುದು ಪೊಲೀಸರ ಧಾರ್ಷ್ಟ್ಯವಲ್ಲದೇ ಇನ್ನೇನು?



"ಆಪಾದಿತನ ಮೇಲೆ ಎಂತಹದ್ದೇ ಗುರುತರವಾದ ಅಪರಾಧದ ಆರೋಪವಿದ್ದರೂ ಆತನ ವಿರುದ್ಧ ಅದು ಮೊದಲ ಆರೋಪವಾಗಿದ್ದರೆ ನ್ಯಾಯಾಲಯಕ್ಕೆ ಕರೆತರುವಾಗಲೂ ಸಹ ಆತನನ್ನು ಬೇಡಿಗಳಿಂದ ಬಂಧಿಸಬಾರದು, ಕೈ ಕೋಳ ಹಾಕಬಾರದು" ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಆದೇಶಿಸಿದೆ.

ಪ್ರಸ್ತುತ ವಿಠಲನ ಮೇಲಿರುವಂತಹ ಆರೋಪವು ಅಂತಹ ಗುರುತರವಾದಂತಹ ಆರೋಪವೂ ಅಲ್ಲ, ಆತನ ವಿರುದ್ಧ ಈ ಹಿಂದೆಂದೂ ಯಾವುದೇ ಅತೀ ಸಣ್ಣ ಅಪರಾಧವೆನಿಸಿದ ಆರೋಪವೂ ದಾಖಲಾಗಿಲ್ಲ ಮಾತ್ರವಲ್ಲ ಅಂತಹ ಆರೋಪವೂ ಕೇಳಿಬಂದಿಲ್ಲ, ವಿಠಲ ಮಲೆಕುಡಿಯನ ಮೇಲೆ ನಕ್ಸಲ್ ಸಂಪರ್ಕದ ಆರೋಪಗಳಿವೆಯೇ ಹೊರತು ಅದನ್ನು ಸಾಬೀತುಪಡಿಸಬಲ್ಲಂತಹ ಯಾವುದೇ ಸ್ಪಷ್ಟ ಮತ್ತು ಬಲವಾದ ಪುರಾವೆ ಪೊಲೀಸರಿಗೆ ಈವರೆಗೂ ಸಿಕ್ಕಿಲ್ಲ.

ನಾನು 2008ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮದ ಎಂ.ಎ. ಪರೀಕ್ಷೆ ಬರೆಯುತ್ತಿದ್ದಂತಹ ಸಂದರ್ಭದಲ್ಲಿ ಕೊಲೆ ಆರೋಪ ಸಾಬೀತಾಗಿ ಶಿಕ್ಷೆ ವಿಧಿಸಲ್ಪಟ್ಟ ಇಬ್ಬರು ನಾನಿದ್ದ ಕೊಠಡಿಯಲ್ಲೇ ಕೂತು ಪರೀಕ್ಷೆ ಬರೆಯುತ್ತಿದ್ದರು. ಅವರೀರ್ವರನ್ನೂ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಪೊಲೀಸ್ ಕಾವಲಿನಲ್ಲಿ ಪರೀಕ್ಷೆ ಬರೆಯಲು ಕರೆತರಲಾಗುತ್ತಿತ್ತು, ಅವರು ಪರೀಕ್ಷಾ ಕೊಠಡಿಗೆ ಪ್ರವೇಶಿಸುವುದಕ್ಕಿಂತ ಮುಂಚೆಯೇ ಅವರ ಕೈಕೋಳಗಳನ್ನು ಬಿಚ್ಚಲಾಗುತ್ತಿತ್ತು. ಮಾತ್ರವಲ್ಲ ಅವರು ಪರೀಕ್ಷೆ ಬರೆದು ಮುಗಿಯುವ ತನಕ ಪೊಲೀಸರು ಕೊಠಡಿಯ ಹೊರಗೆ ನಿಂತು ಕಾವಲು ಕಾಯುತ್ತಿದ್ದರು.


ಆದರೆ ಇಲ್ಲಿ ವಿಠಲನ ಕೈಗಳಿಗೆ ಐದು ಕಿಲೋ ಗ್ರಾಂ ಭಾರದ ಕೈಕೋಳವನ್ನು ತೊಡಿಸಿದ್ದು ಮಾತ್ರವಲ್ಲದೇ, ಆತನನ್ನು ಅದೇ ಸ್ಥಿತಿಯಲ್ಲಿ ಪರೀಕ್ಷೆ ಬರೆಸಲಾಗಿದೆ. ಮಾತ್ರವಲ್ಲ ಆತನ ಬೆನ್ನ ಹಿಂದೆ ಇಬ್ಬರು ಬಂದೂಕುಧಾರಿ ಪೊಲೀಸರೂ ನಿಂತಿದ್ದರು. ಕನಿಷ್ಠ ಪರೀಕ್ಷೆ ಬರೆಯುವಂತಹ ಸಂದರ್ಭದಲ್ಲಿ ಆತನ ಕೈಗಳಿಂದ ಕೋಳವನ್ನು ಬಿಚ್ಚಿಸುವ ಮತ್ತು ಪರೀಕ್ಷಾ ಕೊಠಡಿಯಿಂದ ಪೊಲೀಸರನ್ನು ಹೊರಗೆ ನಿಲ್ಲಿಸುವ ಹಕ್ಕು ಖಂಡಿತವಾಗಿಯೂ ವಿಶ್ವವಿದ್ಯಾನಿಲಯಕ್ಕಿದೆ. ಯಾವುದೇ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಶಿಕ್ಷಣ ಸಂಸ್ಥೆಯೊಳಗಿರುವಷ್ಟು ಹೊತ್ತು ಆ ಸಂಸ್ಥೆಯ ಮುಖ್ಯಸ್ಥನೇ ಆತನ ಪಾಲಕನಾಗಿರು ತ್ತಾನೆ. ವಿಶ್ವವಿದ್ಯಾನಿಲಯವೊಂದರಲ್ಲಿ ಅಂತಹ ಹೊಣೆ ಉಪಕುಲಪತಿಯದ್ದಾಗಿರುತ್ತದೆ. ಆದರೆ ಮಂಗಳೂರು ವಿ.ವಿ.ಯ ಉಪಕುಲಪತಿ ಟಿ.ಸಿ.ಶಿವಶಂಕರಮೂರ್ತಿ ಅದಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂಬಂತಹ ಉಡಾಫೆ ವರ್ತನೆ ತೋರಿದ್ದು ಹೊಣೆಗೇಡಿತನದ ಪರಮಾವಧಿ.

ಈ ಹಿಂದೆ ಉಪಕುಲಪತಿಯ ಬಳಿಗೆ "ವಿಠಲನಿಗೆ ಪರೀಕ್ಷೆ ಬರೆಯಲು ಅನುಮತಿ ಕೋರಿ" ಎಂದು ಕೆಲವು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರ ನಿಯೋಗ ತೆರಳಿದ್ದಾಗ ಅದು ತನ್ನ ಕೆಲಸವೇ ಅಲ್ಲ ಎಂಬಂತೆ ವರ್ತಿಸಿದ್ದರು. ಮಾತ್ರವಲ್ಲ ಅದಕ್ಕೆಲ್ಲಾ ಕೋರ್ಟಿನಿಂದ ಆದೇಶ ತನ್ನಿ ಎಂದು ದಬಾಯಿಸಿದ್ದರು. ಇದಾದ ಮರುದಿನ ಸ್ವತಃ ವಿಠಲನ ತಾಯಿಯೇ ಉಪಕುಲಪತಿಯ ಬಳಿಗೆ ತೆರಳಿ ಮನವಿ ಮಾಡಿದಾಗಲೂ ನಕಾರಾತ್ಮಕವಾಗಿಯೇ ಪ್ರತಿಕ್ರಿಯಿಸಿದ್ದರು.

ಶಿಕ್ಷಣ ಈ ದೇಶದ ಯಾವುದೇ ಪ್ರಜೆಯ ಮೂಲಭೂತ ಹಕ್ಕು. ಆತ ಯಾವುದೇ ಸ್ಥಿತಿಯಲ್ಲಿದ್ದರೂ ಶಿಕ್ಷಣವನ್ನು ಪಡೆಯಲು ಆತನಿಗೆ ಮುಕ್ತ ಅವಕಾಶವಿದೆ. ಅದನ್ನು ಯಾರೂ ನಿರಾಕರಿಸುವಂತಿಲ್ಲ, ಸ್ವತಃ ವಿಚಾರಣಾ ನ್ಯಾಯಾಲಯಕ್ಕೂ ಆ ಹಕ್ಕಿಲ್ಲ, ಒಂದು ವೇಳೆ ವಿಠಲನಿಗೆ ಪರೀಕ್ಷೆ ಬರೆಯಲು ಮೊದಲೇ ಉಪಕುಲಪತಿಯವರು ಅನುಮತಿ ನೀಡಿದ್ದಿದ್ದರೆ, ಅಥವಾ ಪ್ರವೇಶ ಪತ್ರ ನೀಡಿದ್ದಿದ್ದರೆ, ವಿಠಲನ ಪರ ನ್ಯಾಯವಾದಿ ಗಳು ಅದನ್ನು ನ್ಯಾಯಾಧೀಶರ ಮುಂದೆ ತೋರಿಸಿದ ತಕ್ಷಣವೇ ಆತನಿಗೆ ಪರೀಕ್ಷೆ ಬರೆಯಲು ಅನುಮತಿ ಸಿಗುತ್ತಿತ್ತು, ಆದರೆ ಉಪಕುಲಪತಿಗಳು ಆತನಿಗೆ ಪ್ರವೇಶ ನಿರಾಕರಿಸಿದ್ದರಿಂದಾಗಿ ನ್ಯಾಯಾಲಯದಿಂದಲೇ ಅನುಮತಿ ಪಡೆದುಕೊಂಡು ಬರುವ ಪರಿಸ್ಥಿತಿ ನಿರ್ಮಾಣವಾಯಿತು. ಅದರಿಂದಾದ ವಿಳಂಬದ ಪರಿಣಾಮ ವಿಠಲನ ಪ್ರಥಮ ದಿನದ 'ಆಂತರಿಕ ಪರೀಕ್ಷೆ' ನಷ್ಟವಾಗಿದೆ. ಆತನಿಗೆ ಆದ ಈ ನಷ್ಟವನ್ನು ಭರಿಸುವ ಹೊಣೆ ವಿಶ್ವವಿದ್ಯಾನಿಲಯದ್ದು, ಆದುದರಿಂದ ವಿಠಲನಿಗೆ ನಷ್ಟವಾದ ಆಂತರಿಕ ಪರೀಕ್ಷೆಯನ್ನು ಪುನಃ ಬರೆಯಲು ವಿಶೇಷ ಪರೀಕ್ಷೆಯನ್ನು ಏರ್ಪಡಿಸಲೇಬೇಕು. ಮಾತು ಮಾತಿಗೂ "According to University Rules & Regulation" ಎಂದೇ ಭಯಂಕರವಾಗಿ ರೂಲ್ಸು ಮಾತನಾಡುವ ಉಪಕುಲಪತಿ ಟಿ.ಸಿ.ಶಿವಶಂಕರ ಮೂರ್ತಿಯವರು according to our Constitution and according to the Order of Supreme Court.... ಏನು ಎಂದು ತಿಳಿದುಕೊಳ್ಳಲಿ.

- ಇಸ್ಮತ್ ಫಜೀರ್, ಮಂಗಳೂರು

ಮಲ್ಲೇಶ್ವರದ ಬೆಟ್ಟಿಂಗ್ ದೊರೆ ನರಹರಿ 38 ಲಕ್ಷದ ದರೋಡೆಯಲ್ಲಿ ಯಾರ್‍ಯಾರು?


ಹಳೇ ಖದೀಮ ನರ

ದರೋಡೆಯಾಗಿರುವುದು ಕ್ರಿಕೆಟ್ ಬೆಟ್ಟಿಂಗ್‌ನ ದೊಡ್ಡೇ ಎಂಬುದರಲ್ಲಿ ಎರಡು ಮಾತಿಲ್ಲ. ಈ ಪಾಟಿ ಮೊತ್ತವನ್ನು ಕಾರಲ್ಲಿ, ಜೊತೆಗೆ ಬೆಂಗಾವಲಿಗೆಂದು ಹುಡುಗರನ್ನು ಕಳಿಸದೇ ಸಾಗಿಸುವಷ್ಟು ಮೂರ್ಖ ನರಹರಿಯಲ್ಲ. ಜೂಜುಕೋರರನ್ನು ಯಾಮಾರಿಸಿ ಪೂರ್ತಿ 38 ಲಕ್ಷವನ್ನು ನುಂಗಿ ಹಾಕುವ ನರಹರಿಯ ತಂತ್ರಕ್ಕೆ ಇದಕ್ಕಿಂತ ಪುರಾವೆ ಬೇಕಿಲ್ಲ. ಬಹುಷ: ನೌಕರ ಶಿವಣ್ಣನೇ ದರೋಡೆಯ ಕತೆ ಕಟ್ಟಿ ದುಡ್ಡು ನುಂಗಿರುವ ಸಾಧ್ಯತೆಯೂ ಇದೆ. ನರಹರಿಯಂಥ ಹಳೇ ಖದೀಮನ ದುಡ್ಡನ್ನು ಯಾರಾದರೂ ದರೋಡೆ ಮಾಡಿದರೆಂದರೆ ಅದನ್ನೂ ನಂಬುವಾತ ಮೂರ್ಖನಷ್ಟೆ.

ಕಳ್ಳನ ಮನೆಗೇ ಕನ್ನ ಹಾಕುವ ಬಲುಕಳ್ಳರುಂಟೆ?

ಮಲ್ಲೇಶ್ವರದ ಬೆಟ್ಟಿಂಗ್ ದೊರೆ ನರಹರಿಯ 38 ಲಕ್ಷ ರೂಪಾಯಿಯನ್ನು ಕೇಡಿಗ್ಯಾಂಗೊಂದು ದರೋಡೆ ಮಾಡಿದ ಸುದ್ದಿ ಕೇಳಿದ್ದೇ ಆತನ ಜಾತಕ ಗೊತ್ತಿದ್ದವರಿಗೆಲ್ಲ ಅಶರೀರವಾಣಿಯಂತೆ ಕೇಳಿಬಂದ ಪ್ರಶ್ನೆಯಿದು!

ಒಂದಾನೊಂದು ಕಾಲದ ಮಟಕಾದೊರೆ ನರಹರಿ ಬೆಳೆದು ಬಂದ ಪರಿ, ಆತನ ಹಿನ್ನೆಲೆ, ಕ್ರಿಕೆಟ್ ಬೆಟ್ಟಿಂಗ್ ಜಾಲದಲ್ಲಿ ಆತನಿಗಿರುವ ಅಗಣಿತ ಸಾಮರ್ಥ್ಯ ಮತ್ತು ಸಾವಿರ ಕೋಟಿಯ ಆತನ ಸಾಮ್ರಾಜ್ಯದ ಆಳ-ಅಗಲ ಬಲ್ಲವರಿಗಿದು ನಂಬಲಾಗದ, ಜೀರ್ಣವಾಗದ ಪ್ರಸಂಗ. ದರೋಡೆಯಾಗಿರುವುದು ಬರೋಬ್ಬರಿ 38 ಲಕ್ಷ ರೂಪಾಯಿ. ನರಹರಿಯ ಮಲ್ಲೇಶ್ವರದ ರಿಯಲ್ ಎಸ್ಟೇಟ್ ಅಡ್ಡೆಯಿಂದ ಭಾನುವಾರ ರಾತ್ರಿ ಅಂದರೆ ಏಪ್ರಿಲ್ 15ರ ರಾತ್ರಿ ಎಂಟೂವರೆಗೆ ಈ ಪಾಟಿ ಮೊತ್ತವನ್ನು ತನ್ನ ಬೈಕಿನಲ್ಲಿ ಹೊತ್ತುಕೊಂಡು ಹೋಗುತ್ತಿದ್ದ ನೌಕರ ಶಿವಣ್ಣನನ್ನು ಶಿರೂರು ಪಾರ್ಕ್ ರಸ್ತೆಯಲ್ಲಿ ಬೆನ್ನಟ್ಟಿದ ದುಷ್ಕರ್ಮಿಗಳು ಅಷ್ಟೂ ಮೊತ್ತವನ್ನು ಕಿತ್ತೊಯ್ದಿದ್ದಾರೆ. ದರೋಡೆಗೈದವರು ಮೂರು ಬೈಕುಗಳಲ್ಲಿದ್ದರಂತೆ. ಶಿವಣ್ಣನನ್ನು ನಡುರಸ್ತೆಯಲ್ಲಿ ಅಡ್ಡಗಟ್ಟಿ ಹೊಡೆದರಂತೆ. ದುಡ್ಡಿದ್ದ ಚೀಲವನ್ನು ಅಷ್ಟೇ ಚಾಕಚಕ್ಯತೆಯಿಂದ ಕಿತ್ತುಕೊಂಡು ಕ್ಷಣಾರ್ಧದಲ್ಲಿ ಪರಾರಿಯಾದರಂತೆ.


ಆಸ್ಪತ್ರೆಯಲ್ಲಿ ಶಿವಣ್ಣ

ಹೊಡೆದ ಮೂಗೇಟುಗಳ ಸಮೇತ ಮಲ್ಲೇಶ್ವರಂ ಪೊಲೀಸ್ ಠಾಣೆಗೆ ಧಾವಿಸಿ ಬಂದ ನರಹರಿಯ ನೌಕರ ಶಿವಣ್ಣನನ್ನು ಪೊಲೀಸರೇ ಆಸ್ಪತ್ರೆಗೆ ಸೇರಿಸಿದ್ದಾರೆ. ಕೇಸೂ ದಾಖಲಾಗಿದೆ. ಮಲ್ಲೇಶ್ವರಂ ಎಸಿಪಿ ಗಂಗಾಧರ್ ಮತ್ತು ಇನ್ಸ್‌ಪೆಕ್ಟರ್ ಶ್ರೀಧರ್ ತಂಡ ಅಹೋರಾತ್ರಿ ದರೋಡೆಕೋರರ ಪತ್ತೆಗೆ ಹೆಣಗಾಡುತ್ತಿದೆಯಾದರೂ 38 ಲಕ್ಷದ ಸುತ್ತ ತಲೆ ಎತ್ತಿ ನಿಲ್ಲುವ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿಲ್ಲ. ಏಕೆಂದರೆ ಬೆಟ್ಟಿಂಗ್ ದೊರೆ ನರಹರಿಯ ಮರ್ಮವಿದೆಯಲ್ಲ ಅದು ಸುಲಭಕ್ಕೆ ಅರ್ಥವಾಗುವಂಥದ್ದಲ್ಲ.

ಇಲ್ಲಿಗೆ ಇಪ್ಪತ್ತು ವರ್ಷದ ಹಿಂದೆ ಮೈಕೋ ಫ್ಯಾಕ್ಟರಿಯ ಹಿಂದೆ ಗೌಡ ಎಂಬಾತನ ಜೊತೆ ಮಟಕಾ ಬರೆದುಕೊಂಡಿದ್ದ ನರಹರಿಯನ್ನು ಮೊದಲ ಬಾರಿ ಹೊತ್ತೊಯ್ದು ರೋಲ್ ಕಾಲ್ ಮಾಡಿದ್ದು ಆಗ ಕೇಡಿಯಾಗಿದ್ದ ಶ್ರೀರಾಂಪುರದ ಚಕ್ರಿ. ಮುಂದೆ ಕಾಲಾಪತ್ಥರ್, ಮಣಿಭಾರತಿ, ಶ್ರೀರಾಂಪುರ ಕಿಟ್ಟಿಯಂಥ ರೌಡಿಗಳನ್ನು ಜೊತೆಹಾಕಿಕೊಂಡ ನರಹರಿ ಮಲ್ಲೇಶ್ವರದ ಸಂಪಿಗೆ ಟಾಕೀಸ್ ಎದುರಿನ ಪಾರ್ಕಿನಲ್ಲಿ ಮಟಕಾ ಬರೆಸುತ್ತಿದ್ದ, ಬರುಬರುತ್ತ ಸಿಂಗಲ್ ನಂಬರ್ ಲಾಟರಿ ಮಾದರಿಯಲ್ಲಿ ತಾನೇ ಪರ್ಯಾಯ ಲಾಟರಿ ಧಂದೆ ನಡೆಸಲಾರಂಭಿಸಿದ. ಒಂದೆಡೆ ಪೊಲೀಸರ ಕಾಟ ಮತ್ತೊಂದೆಡೆ ಕೇಡಿಗಳ ಉಪಟಳ ಹೆಚ್ಚಾಗುತ್ತಿದ್ದಂತೆ ತನ್ನ ಜುಗಾರಿ ಕಾಯಕವನ್ನು ಕ್ರಿಕೆಟ್ ಬೆಟ್ಟಿಂಗ್‌ಗೆ ವಿಸ್ತರಿಸಿದ. ನರಹರಿಯ ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಸಾತು ಕೊಟ್ಟವನು ಗೋಲ್ಡ್‌ಫಿಂಚ್ ಧಣಿ ಪ್ರಕಾಶ್ ಶೆಟ್ಟಿ.


ಇವತ್ತಿಗೂ ಅಷ್ಟೇ ಐಪಿಎಲ್, ವರ್ಲ್ಡ್ ಕಪ್, ಟ್ವೆಂಟಿ ಟ್ವೆಂಟಿ ಇತ್ಯಾದಿ ಕ್ರಿಕೆಟ್ ಪಂದ್ಯಾವಳಿ ಶುರುವಾಯಿತೆಂದರೆ ರೇಸ್‌ಕೋರ್ಸ್ ಸುತ್ತಮುತ್ತಲ ಐಷಾರಾಮಿ ಹೋಟೆಲುಗಳಲ್ಲಿ ನರಹರಿಯ ಕ್ರಿಕೆಟ್ ಬೆಟ್ಟಿಂಗ್ ಸಂತೆಯಂತೆ ಶುರುವಾಗುತ್ತದೆ. ಈ ರೀತಿಯ ಬೆಟ್ಟಿಂಗ್ ಸಾಮ್ರಾಜ್ಯವೊಂದನ್ನು ಮರೆಮಾಚಿ ಅದಕ್ಕೊಂದು ಕಾನೂನು ಬದ್ಧ ಮುಖವಾಡಕ್ಕೆಂದೇ ನರಹರಿ ಇತ್ತೀಚೆಗೆ ಕುದುರೆ ರೇಸಿಗೆ ಕೈಹಾಕಿದ್ದಾನೆ. ಬೆಂಗಳೂರು ಟರ್ಫ್ ಕ್ಲಬ್ಬಿನಲ್ಲಿ ತಾನೂ ಒರ್ವ ರೇಸ್ ಬುಕ್ಕಿ ಎಂದು ಅಧಿಕೃತ ಕೌಂಟರ್ ಒಂದನ್ನು ಪಡೆದು ತೆರೆದಿದ್ದಾನೆ. ಮೇಲು ನೋಟಕ್ಕೆ ರೇಸ್ ಬುಕ್ಕಿ, ಒಳಗಿನ ಮರ್ಮ ಕ್ರಿಕೆಟ್ ಬೆಟ್ಟಿಂಗ್!

ಈ ರೀತಿ ಬೆಟ್ಟಿಂಗ್ ಕಾಯಕದಲ್ಲೇ ಸಾವಿರ ಕೋಟಿಯ ಸಾಮ್ರಾಜ್ಯ ಕಟ್ಟಿದ ನರಹರಿ ತನ್ನ ಬ್ಲಾಕ್ ಮನಿಯನ್ನು ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಸಿದ್ದಾನೆ. ಬೆನಕ ಬಿಲ್ಡರ್ಸ್‌ನಲ್ಲಿ ಪ್ರಜ್ವಲ್ ಏಜೆನ್ಸಿ ಹೀಗೆ ನಾನಾ ಹೆಸರು, ನಾನಾ ಸೋಗಿನಲ್ಲಿ ವ್ಯವಹರಿಸುವ ನರಹರಿಯದ್ದು ಎತ್ತಿಂದೆತ್ತ ನೋಡಿದರೂ ಅಕ್ರಮಗಳ ಜುಗಾರಿ ಸಾಮ್ರಾಜ್ಯವೆ.

ಮಟಕಾ ಮತ್ತು ಸಿಂಗಲ್ ನಂಬರ್‌ನಿಂದ ಶುರುವಾದ ತನ್ನ ಬೆಟ್ಟಿಂಗ್ ಸಾಮ್ರಾಜ್ಯವನ್ನು ತೀರ ಇತ್ತೀಚಿಗೆ ಕುದುರೆ ರೇಸ್ ಮತ್ತು ಐಷಾರಾಮಿ ಹೋಟೆಲುಗಳಲ್ಲಿ ಕ್ರಿಕೆಟ್ ಬೆಟ್ಟಿಂಗ್ ತನಕ ವಿಸ್ತರಿಸಿದ ನರಹರಿ ತನ್ನೆಲ್ಲಾ ಕಪ್ಪು ಹಣವನ್ನು ರಿಯಲ್ ಎಸ್ಟೇಟ್ ಧಂದೆಯಲ್ಲಿ ತೊಡಗಿಸಿ ವೈಟ್ ಕಾಲರ್ ಪೋಜು ಕೊಟ್ಟ ಮೇಲೂ ತನ್ನ ಕ್ರಿಕೆಟ್ ಬೆಟ್ಟಿಂಗ್ ಖಯಾಲಿಯನ್ನು ಬಿಡಲಿಲ್ಲ. ಏಪ್ರಿಲ್ 15 ಕ್ಕೆ ಬೆಂಗಳೂರಿನಲ್ಲಿ ರಾಜಸ್ತಾನ್ ರಾಯಲ್ಸ್ ವಿರುದ್ಧ ಬೆಂಗಳೂರು ರಾಯಲ್ ಛಾಲೇಂಜರ್ಸ್ ಐಪಿಎಲ್ ಮ್ಯಾಚ್ ಇತ್ತಲ್ಲ; ಅದರ ಬೆಟ್ಟಿಂಗ್‌ಗೆಂದು ಜಮೆಯಾಗಿದ್ದು 38 ಲಕ್ಷ!

ಈ ಪಾಟಿ ಮೊತ್ತವನ್ನು ತನ್ನ ಮಲ್ಲೇಶ್ವರದ ಪ್ರಜ್ವಲ್ ಏಜೆನ್ಸಿ ಎಂಬ ಅಡ್ಡೆಯಿಂದ ಆರ್.ಟಿ. ನಗರದ ಬಂಗಲೆಗೆ ಸಾಗಿಸುವುದು ನರಹರಿಯ ಉದ್ದೇಶವಾಗಿತ್ತು, ಅದಕ್ಕೆಂದೇ ತನ್ನ ನೌಕರ ಶಿವಣ್ಣನ ಮೂಲಕ ಅಷ್ಟೂ ಮೊತ್ತವನ್ನು ನರಹರಿ ಸಾಗಿಸುತ್ತಿದ್ದ.

ಆದರೆ ಈ ರೀತಿ ಕ್ರಿಕೆಟ್ ಬೆಟ್ಟಿಂಗ್ ನಡೆಸುವ ಖದೀಮರು ಜೂಜಿನ ಅಷ್ಟೂ ಮೊತ್ತವನ್ನು ಕಬಳಿಸಲು ಇಲ್ಲೊಂದು ವಿಚಿತ್ರ ತಂತ್ರ ಬಳಸುತ್ತಾರೆ. ಲಕ್ಷವನ್ನೋ ಎರಡು ಲಕ್ಷವನ್ನೋ ಕೆಲವೊಮ್ಮೆ ಐದೋ ಹತ್ತೋ ಲಕ್ಷವನ್ನೋ ಕಟ್ಟಿದ ನಿಗೂಢ ಜೂಜುಕೋರರನ್ನು ಯಾಮಾರಿಸಲೆಂದು ಪೊಲೀಸ್ ರೇಡಿನ ಕತೆಕಟ್ಟುತ್ತಾರೆ. ಮೊದಲೇ ಆಯಾ ಪೊಲೀಸ್ ಠಾಣೆಯ ಪೊಲೀಸರನ್ನೋ ಸಿಸಿಬಿ ಪೊಲೀಸರನ್ನೋ ಸರಿಮಾಡಿಕೊಂಡು ಕಪಟ ರೇಡ್ ಆಯೋಜಿಸುತ್ತಾರೆ. ಜೂಜು ಅಡ್ಡೆಯ ಮೇಲೆ ದಾಳಿಯಿಟ್ಟ ಪೊಲೀಸರು ಮೂರ್‍ನಾಲ್ಕು ಸಿಬ್ಬಂದಿಯನ್ನು ಬಂಧಿಸಿ, ಕಾಟಾಚಾರದ ಕೇಸು ಹಾಕುತ್ತಾರೆ. ಯಾರ್‍ಯಾರು ದುಡ್ಡು ಕಟ್ಟಿರುತ್ತಾರೋ ಅವರ ಮೊಬೈಲ್ ನಂಬರಿಗೆ ಪೊಲೀಸರು ಕರೆ ಮಾಡಿದಂತೆ ಫೋನುಗಳೂ ಬರುತ್ತವೆ. ಜೂಜು ನಡೆಸಿದವನಷ್ಟೇ ಜೂಜು ಆಡುವುದೂ ಅಪರಾಧವಾದ್ದರಿಂದ ಪೊಲೀಸರು ವಿಚಾರಣೆಗೆಂದು ಪೊಲೀಸ್ ಠಾಣೆಗೆ ಬನ್ನಿ ಎಂದು ಕರೆದದ್ದೇ ತಡ ದುಡ್ಡು ಕಟ್ಟಿದವನು ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದೇ ನಾಪತ್ತೆಯಾಗುತ್ತಾನೆ.


ಸೈಲೆಂಟ್ ಸುನೀಲ

ಇದು ಆ ಕಾಲದಿಂದಲೂ ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರು ನಡೆಸಿಕೊಂಡೇ ಬಂದ ವಂಚಕ ತಂತ್ರ. ಇಲ್ಲಿ ನರಹರಿಯಂಥವರಿಗೆ ಜನ ಹೆಚ್ಚು ದುಡ್ಡು ಕಟ್ಟುವುದು ಏಕೆಂದರೆ ಮೊದಲೇ ಪೊಲೀಸರು ಬುಕ್ಕಾಗಿರುತ್ತಾರೆಂಬ ನಂಬಿಕೆಯಿಂದ. ಈ ಬಾರಿಯೂ ಮತ್ತೆ ಪೊಲೀಸ್ ರೇಡಾದರೆ ಎಲ್ಲಿ ಜನ ನಂಬುವುದಿಲ್ಲವೋ ಎಂದು ನರಹರಿ ದರೋಡೆಯ ನಾಟಕ ಆಡಿರಬಹುದೆ?

ಕಟ್ಟಿದ ದುಡ್ಡನ್ನೆಲ್ಲಾ ರೌಡಿಗಳು ಕಿತ್ತೊಯ್ದರು ಎಂದು ಬಿಟ್ಟರೆ ಜೂಜುಕೋರ ತೆಪ್ಪಗಾಗಿ ಬಿಡುತ್ತಾನೆ. ನಂಬದೇ ಇರಲು ಸಾಧ್ಯವೇ ಇಲ್ಲ. ಏಕೆಂದರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ. ಅದು ಪತ್ರಿಕೆಗಳಲ್ಲಿ ಸಿದ್ದಿಯೂ ಆಗಿರುತ್ತದೆ. ಇದೇ ಲೆಕ್ಕಹಾಕಿ ನರಹರಿ ಈ ಬಾರಿ ಅಷ್ಟೂ 38 ಲಕ್ಷವನ್ನು ಮುಂಡಾಮೋಚಿದನೆ? ಅಥವಾ ಯಾರಾದರೂ ರೌಡಿಗಳು ನರಹರಿಯನ್ನು ಹೊಂಚುಹಾಕಿ ದೋಚಿರಬಹುದೆ?

ಮಲ್ಲೇಶ್ವರಂ ಪೊಲೀಸರ ಪ್ರಕಾರ ಯಾವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ, ಸಧ್ಯ ದರೋಡೆಗೀಡಾದ ನರಹರಿಯ ನಂಬಿಕಸ್ತ ನೌಕರ ಶಿವಣ್ಣ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದಾನೆ. ರಕ್ತ ಬಂದಿಲ್ಲವಾದರೂ ಆತನಿಗೆ ಏಟುಗಳು ಬಿದ್ದಿರುವುದು ಸತ್ಯವೆ. ಪ್ರಶ್ನೆಯೆಂದರೆ ಬರೋಬ್ಬರಿ 38 ಲಕ್ಷವನ್ನು ಯಾರಾದರೂ ಒಬ್ಬನೇ ವ್ಯಕ್ತಿಯ ಕೈಗಿತ್ತು ಬೈಕಿನಲ್ಲಿ ತರುವುದುಂಟಾ? ಶಿವಣ್ಣ ಪೊಲೀಸ್ ಠಾಣೆಗೆ ಓಡಿ ಬಂದು ದುಡ್ಡು ದರೋಡೆಯಾಯಿತು ಎಂದಾಗಲೇ ಪೊಲೀಸರಿಗೆ ಅನುಮಾನ ಬಂದಿದೆ. ಅಲ್ಲಯ್ಯಾ ಯಾರಾದರೂ 38 ಲಕ್ಷವನ್ನು ಬೈಕಲ್ಲಿ ಕೊಂಡೊಯ್ಯುತ್ತಾರಾ? ಜೊತೆಗೆ ಯಾಕೆ ಇನ್ನೊಬ್ಬನನ್ನು ಕರೆದೊಯ್ಯಲಿಲ್ಲ, ಹತ್ತಾರು ಕಾರುಗಳಿರುವ ನರಹರಿ ಸಣ್ಣ ಮಗು ವೇನಲ್ಲ, ಆ ಕಾಲದಿಂದಲೂ ಬೆಟ್ಟಿಂಗ್ ಧಂದೆಯಲ್ಲಿರುವ ಪಾಖಂಡಿ. 38 ಲಕ್ಷವನ್ನು ಯಕಃಶ್ಚಿತ್ ಬೈಕ್‌ನಲ್ಲಿ ಅದೂ ಏಕಾಂಗಿಯಾಗಿ ನೌಕರನೊಬ್ಬನ ಮೂಲಕ ಸಾಗಿಸುವಷ್ಟು ಮುಠ್ಠಾಳನಲ್ಲ, ಹತ್ತೋ ಇಪ್ಪತ್ತೋ ಲಕ್ಷವನ್ನೂ ಕಾರಲ್ಲಿ ಜೊತೆಗೆ ಬೆಂಗಾವಲಿಗೆಂದು ದಾಂಡಿಗರ ತಂಡವನ್ನು ಮತ್ತೊಂದು ಕಾರಲ್ಲಿ ಕಳಿಸುವುದು ಸರ್ವೇ ಸಾಮಾನ್ಯ. ಅಂಥಾದ್ದರಲ್ಲಿ ಎಲ್ಲಾಗೊತ್ತಿದ್ದೂ ನರಹರಿ ಏಕೆ ಒಬ್ಬಂಟಿಯ ಜೊತೆ ಬೈಕಲ್ಲಿ ಕಳಿಸಿಕೊಟ್ಟ?



ಇದು ಪೊಲೀಸರನ್ನು ಕಾಡಿದ ಪ್ರಶ್ನೆಯಾದರೆ ಘಟನೆ ವಿವರಗಳು ಇದನ್ನೇ ಸಾಬೀತು ಪಡಿಸುವಂತಿತ್ತು, ದರೋ... ನಡೆದ ಶಿರೂರು ಪಾರ್ಕ್ ರಸ್ತೆಯ ಅಕ್ಕಪಕ್ಕದ ನಾಗರಿಕ... ಇದನ್ನು ನೋಡಿರಬೇಕಿತ್ತು, ಆದರೆ ಯಾರೊಬ್ಬರು ನ... ದರೋಡೆಯ ಬಗ್ಗೆ ಸಾಕ್ಷಿ ಹೇಳುತ್ತಿಲ್ಲ, ಯಾರ ದು... ಎಂದಾಕ್ಷಣ ಪೊಲೀಸರಿಗೆ ಶಿವಣ್ಣ ಹೇಳಿದ್ದು ನರಹರಿ... ಹೆಸರನ್ನು. ತಕ್ಷಣವೇ ನರಹರಿಯನ್ನು ಪೊಲೀಸ್ ಠಾ... ಕರೆಸಿದರೆ ಆತನಿಂದ ನಿಖರ ಉತ್ತರವಿಲ್ಲ. ಮೊದ ಮೊದ... ಏನೇನೋ ಬಡಬಡಿಸಿದ. ಅನಂತರ ಇದು ಸೈಟ್ ವ್ಯಾಪಾ... ದುಡ್ಡು ಎಂದ. ತಾನು ರಿಯಲ್ ಎಸ್ಟೇಟ್ ವ್ಯಾಪಾರಿ. ಸೈ... ಮಾರಿದ ದುಡ್ಡನ್ನು ಮನೆಗೆ ಸಾಗಿಸಬೇಕಿತ್ತು ಎಂದ.

ಪ್ರಶ್ನೆಯೆಂದರೆ ಸೈಟು ಮಾರಲಿ ಇನ್ನೇನನ್ನೇ ಮಾ... ಲಕ್ಷದ ಮೇಲೆ ಯಾರೂ ನಗದನ್ನು ಕೊಡುವುದಿ... ಪ್ರತಿಯೊಂದು ಚೆಕ್ ಮೂಲಕವೇ ನಡೆಯುತ್ತದೆ. ... ಲಕ್ಷದಷ್ಟು ಬಾರಿ ಮೊತ್ತವನ್ನು ಯಾರಾದರೂ ಏಕೆ ನೋ... ಕಂತೆಗಳ ರೂಪದಲ್ಲಿ ಕೊಡುತ್ತಾರೆ?


ಅಲ್ಲಿಗೆ ದರೋಡೆಯಾಗಿರುವುದು ಕ್ರಿಕೆಟ್ ಬೆಟ್ಟಿಂಗ... ದೊಡ್ಡೇ ಎಂಬುದರಲ್ಲಿ ಎರಡು ಮಾತಿಲ್ಲ, ಈ ಪಾ... ಮೊತ್ತವನ್ನು ಕಾರಲ್ಲಿ, ಜೊ... ಬೆಂಗಾವಲಿಗೆಂದು ಹುಡುಗ... ಕಳಿಸದೇ ಸಾಗಿಸುವ... ಮೂರ್ಖನೂ ನರಹರಿಯ... ಜೂಜುಕೋರರನ್ನು ಯಾಮಾ... ರಿಸಿ ಪೂರ್ತಿ 38 ಲಕ್ಷವ... ನುಂಗಿ ಹಾಕುವ ನರಹರಿ... ತಂತ್ರಕ್ಕೆ ಇದಕ್ಕಿಂತ ಪುರ... ಬೇಕಿಲ್ಲ. ಬಹುಷಃ ನೌ... ಶಿವಣ್ಣನೇ ದರೋಡೆಯ ಕತೆ ಕಟ್ಟಿ ದುಡ್ಡು ನುಂಗಿರ... ಸಾಧ್ಯತೆಯೂ ಇದೆ. ನರಹರಿಯಂಥ ಹಳೇ ಖದೀಮ... ದುಡ್ಡನ್ನು ಯಾರಾದರೂ ದರೋಡೆ ಮಾಡಿದರೆಂದರೆ ಅದ... ನಂಬುವಾತ ಮೂರ್ಖನಷ್ಟೆ. ಈ ಬಗ್ಗೆ ಮಲ್ಲೇಶ್ವ... ಪೊಲೀಸರಷ್ಟೇ ಉತ್ತರಿಸಬೇಕಲ್ಲವೆ?

• ರಾ. ಸೋಮನಾಥ

ಕಣ್ಣಿಟ್ಟ ರೌಡಿಗ್ಯಾಂಗ್ ಯಾವುದು?

ಇಷ್ಟೆಲ್ಲಾ ಅಕ್ರಮ ಬೆಟ್ಟಿಂಗ್ ನಡೆಸುವ ನರಹರಿಗೆ ಭೂಗತ ಪಾತಕಿಗಳ ನಂಟಿಲ್ಲವೆಂದೇನಲ್ಲ, ಒಂದು ಮೂಲದ ಪ್ರಕಾರ ಸಧ್ಯ ಪರಪ್ಪನ ಅಗ್ರಹಾರ ಜೈಲಲ್ಲಿರುವ ಸೈಲೆಂಟ್ ಸುನೀಲನೇ ಈತನ ಪಾಲಿಗೆ ಆಪತ್ಬಾಂಧವ. ತಾನು ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿಲ್ಲ, ಬಿಟ್ಟು ಒಂದೂವರೆ ವರ್ಷವಾಗಿದೆ ಎಂದೆಲ್ಲ ಭೋಂಗು ಬಿಡುವ ನರಹರಿ ಸಧ್ಯ ರೇಸ್ ಬುಕ್ಕಿಯ ಸೋಗು ಹಾಕುವುದಕ್ಕೂ ಕಾರಣವಿದೆ. ಅದು. ರೇಸ್ ಫಿಕ್ಸಿಂಗ್!

ಈ ರೀತಿ ರೇಸ್ ಫಿಕ್ಸಿಂಗ್‌ಗೆ ಪಾಖಂಡಿಯೊಬ್ಬ ಕೈಯಿಟ್ಟನೆಂದರೆ ಅದರ ಲಾಭ ಮತ್ತು ನಿರ್ವಹಣೆಗೆ ಒಂದಲ್ಲಾ ಒಂದು ಪಾತಕ ಗ್ಯಾಂಗಿನ ಬೆಂಬಲ ಬೇಕೇ ಬೇಕು. ಆ ಕಾಲದಿಂದಲೂ ಬೆಟ್ಟಿಂಗ್ ದಂಧೆಯಲ್ಲಿರುವ ನರಹರಿಗೆ ಬೆಂಗಳೂರಿನ ಬಹುತೇಕ ರೌಡಿ ಗ್ಯಾಂಗ್‌ಗಳ ನಂಟು ಇದ್ದೇ ಇದೆ. ಈಗ ದರೋಡೆಯಾಗಿರುವ 38 ಲಕ್ಷದ ವಿಷಯದಲ್ಲಿ ಕೇವಲ ನರಹರಿಯಷ್ಟೇ ಅಲ್ಲ ಇಂಥ ರೌಡಿಪಡೆಗಳ ಕೈವಾಡವನ್ನೂ ಪೊಲೀಸರು ಅನುಮಾನಿಸುತ್ತಿದ್ದಾರೆ. ಈ ಭಾಗದ ಶ್ರೀರಾಂಪುರ, ಶೇಷಾದ್ರಿಪುರ, ವೈಯಾಲಿಕಾವಲ್, ಪೈಪ್‌ಲೈನ್ ಸುತ್ತಮುತ್ತ ಸಧ್ಯ ಇಂಥ ಕಾರ್ಯಾಚರಣೆಯ ತಾಕತ್ತು ಅಂತಿದ್ದರೆ ಶ್ರೀರಾಂಪುರದ ಮಾಜಿ ಕೌನ್ಸಿಲರ್ ಬಾಂಬ್‌ನಾಗ, ಕೌನ್ಸಿಲರ್ ನಟರಾಜ್‌ರ ಹಂತಕ ಮುರುಗನ್, ಪೈಪ್‌ಲೈನಿನ ಫೈನಾನ್ಸ್ ಪ್ರಭಾಕರ ಇತ್ಯಾದಿ ರೌಡಿ ಪಡೆಗಳಿಗೆ ಮಾತ್ರ. ಈಗ ಜೈಲಲ್ಲಿರುವ ಕೊರಂಗು ಕೂಡ ಇದೇ ಭಾಗದ ರೌಡಿಯೆ.


ಕೊರಂಗು

ಇಂಥ ಯಾವುದಾದರೂ ಒಂದು ರೌಡಿ ಪಡೆ ನರಹರಿಯ ಮೇಲೆ ಕಣ್ಣಿಟ್ಟಿತ್ತೆ? ಕೌನ್ಸಿಲರ್ ನಟರಾಜ್ ಹತ್ಯೆಗೂ ಮುನ್ನ ಬಾಂಬ್ ನಾಗ ತನ್ನ ಶಿಷ್ಯರನ್ನು ಬಿಟ್ಟು ಮಾಜಿ ಕೌನ್ಸಿಲರ್ ಗೋವಿಂದರಾಜು ಮೇಲೆ ದಾಳಿನಡೆಸಿದ್ದು ಕೂಡ ನರಹರಿಯ ಮಲ್ಲೇಶ್ವರಂ ಅಡ್ಡೆಗೆ ಕೂಗಳತೆಯಲ್ಲಿ. ಅಂದ ಹಾಗೆ ಬಾಂಬ್ ನಾಗನಿಗೂ ನರಹರಿಗೂ ಸಂಬಂಧ ಹೇಗಿತ್ತು? ತನಿಖೆ ನಡೆಸುತ್ತಿರುವ ಮಲ್ಲೇಶ್ವರಂ ಪೊಲೀಸರು ಇಂಥ ಯಾವ ಸಾಧ್ಯತೆಯನ್ನೂ ತಳ್ಳಿ ಹಾಕುತ್ತಿಲ್ಲ.

ಮನುಷ್ಯ ಎಂದಮೇಲೆ ಎಲ್ಲರಿಗೂ ಕಾಯಿಲೆ-ಕಸಾಲು ಬರೋದು ಮಾಮೂಲು. ಹೀಗೆ ಕಾಯಿಲೆ ಬಿದ್ದ ಸರ್ಕಾರಿ ನೌಕರನೊಬ್ಬ ರಜೆ ಮುಂಜೂರು ಮಾಡಿಸಿಕೊಳ್ಳಬೇಕೆಂದರೆ ತನ್ನ ಮೇಲಧಿಕಾರಿಗಳಿಗೆ ಖಡ್ಡಾಯವಾಗಿ ಲಂಚ ಕೊಡಬೇಕಾಗಿದೆ ಅಂದರೆ ನೀವು ನಂಬುತ್ತೀರಾ? ರಾಜ್ಯ ರಸ್ತೆ ಸಾರಿಗೆ ಇಲಾಖೆಯಲ್ಲಿ ಇಂಥದ್ದೊಂದು ಪದ್ಧತಿಯಿದೆ. ಒಂದು ದಿನಕ್ಕೆ ಎಂಟು ಗಂಟೆಗಳ ಕೆಲಸದ ಅವಧಿಯೆಂಬ ಕಾನೂನು ಪ್ರಪಂಚದಾದ್ಯಂತ ಜಾರಿಯಲ್ಲಿದ್ದರೂ.... ಕೆಎಸ್‌ಆರ್‌ಟಿಸಿಯ ನತದೃಷ್ಟ ನೌಕರರಿಗೆ ಆ ಕಾನೂನು ಅನ್ವಯವಾಗುತ್ತಿಲ್ಲ. ಅದಕ್ಕೇನಂತೆ OT ಹಣ ಕೊಡುತ್ತಾರಲ್ಲಾ ಬಿಡಿ, ಅಂತ ಯಾರಿಗಾದರೂ ಅನಿಸಬಹುದು. ಆದರೆ OT ಯೆಂಬ ಪರಿಕಲ್ಪನೆಯನ್ನೇ ಅನಧಿಕೃತಗೊಳಿಸುವ ಇಲಾಖೆಯು ಕಾರ್ಮಿಕರಿಂದ 10 ರಿಂದ 12 ಗಂಟೆಗಳವರೆಗೂ ಬಿಟ್ಟಿ ದುಡಿಸುತ್ತಿದೆ.

ಇಷ್ಟು ಮಾತ್ರವಲ್ಲ, ನಾನಾ ಕುಂಟುನೆಪಗಳನ್ನು ಒಡ್ಡಿ ನೌಕರರನ್ನು ಭೂತಗಳಂತೆ ಕಾಡುತ್ತಿರುವ ಅಧಿಕಾರಿಗಳು ಮನಸೋಇಚ್ಛೆ ದಂಡ ವಿಧಿಸುವ ಹೀನ ಶೈಲಿಯೊಂದನ್ನು ಚಾಲ್ತಿಯಲ್ಲಿಟ್ಟಿದ್ದಾರೆ. ಈ ರೀತಿ ಒಂದು ತಿಂಗಳಿಗೆ ಎಷ್ಟು ಹಣವನ್ನು ವಸೂಲಿ ಮಾಡಿರಬಹುದು? ಬಹುಶಃ ಕೆಎಸ್‌ಆರ್‌ಟಿಸಿ ನೌಕರರು ಅನುಭವಿಸುತ್ತಿರುವ ಯಾತನೆಯನ್ನು ಅರ್ಥ ಮಾಡಿಕೊಳ್ಳಲು ದಂಡ ವಸೂಲಿಯ ಪ್ರಮಾಣವನ್ನು ಗಮನಿಸಿದರೆ ಸಾಕು. ಈ ಮೊತ್ತ ತಿಂಗಳಿಗೆ ಎರಡು ಕೋಟಿ ರೂಪಾಯಿಗಳು! ಮಾತ್ರವಲ್ಲದೆ ಉಸಿರೆತ್ತಿದರೆ ಸಸ್ಪೆಂಡ್, ಟ್ರಾನ್ಸ್‌ಫರ್, ಸಂಬಳ ಕಡಿತ ಮುಂತಾದ ಕ್ರಮಗಳ ಮೂಲಕ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ನೌಕರರಲ್ಲಿ ಬೀಭತ್ಸ ವಾತಾವರಣವನ್ನೇ ಸೃಷ್ಟಿಸಿದ್ದಾರೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು 1996 ರಲ್ಲಿ ನಾಲ್ಕು ಕಾರ್ಪೊರೇಷನ್‌ಗಳಾಗಿ ವಿಭಾಗಿಸಲಾಗಿದೆ. ಈ ನಾಲ್ಕು ವಿಭಾಗಗಳಡಿ ಒಟ್ಟು 1,10,000 ಕಾರ್ಮಿಕರು ದುಡಿಯುತ್ತಿದ್ದಾರೆ. ಸುಮಾರು 22,000 ಬಸ್‌ಗಳು ಸಾರಿಗೆ ಜಾಲವನ್ನು ಹೊಂದಿರುವ ಕೆಎಸ್‌ಆರ್‌ಟಿಸಿ ದೇಶದಲ್ಲಿ ಪ್ರಮುಖವಾದ ಸಾರಿಗೆ ಸಂಸ್ಥೆಗಳಲ್ಲೊಂದು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರಯಾಣಿಕರಿಗೆ ಒದಗಿಸುತ್ತಿರುವ ಉತ್ತಮ ಸೇವೆಗಾಗಿ ಹಲವು ಬಾರಿ ಪ್ರಶಂಸೆಗೂ ಒಳಗಾಗಿದೆ.

ಕಾರ್ಮಿಕರಲ್ಲಿ ಐಕ್ಯತೆ ನೆಲೆಸಲಿ

ಕಳೆದ ಹಲವಾರು ದಶಕಗಳಿಂದ ಕೆಎಸ್‌ಆರ್‌ಟಿಸಿಯಲ್ಲಿ ಅನಂತ್ ಸುಬ್ಬರಾವ್‌ರವರ ನಾಯಕತ್ವದ ಎಐಟಿಯುಸಿ ಕ್ರಿಯಾಶೀಲವಾಗಿದೆ. ಜೊತೆಗೆ ನೌಕರರ ಮಹಾಮಂಡಳ, ಐಎನ್‌ಟಿಯುಸಿ, ಸಿಐಟಿಯು, ಬಿಎಂಎಸ್, ಎಸ್‌ಟಿ-ಎಸ್‌ಟಿ ನೌಕರರ ಸಂಘಟನೆ ಮುಂತಾದ ಸಂಘಟನೆಗಳು ಕಾರ್ಯನಿರತವಾಗಿವೆ. ಇಷ್ಟೆಲ್ಲಾ ಸಂಘಟನೆಗಳಿದ್ದಾಗ್ಯೂ ಕಾರ್ಮಿಕರ ಪರಿಸ್ಥಿತಿ ದಿನೇದಿನೇ ಹೇಳೋರು ಕೇಳೋರು ಇಲ್ಲದಂತಾಗಿದ್ದು ಮಾತ್ರ ಒಂದು ದುರಂತ. ಸರ್ಕಾರಗಳು ನಡೆಸಿದ ದಬ್ಬಾಳಿಕೆ ಇದಕ್ಕೆ ಪ್ರಮುಖ ಕಾರಣವೆಂದುಕೊಂಡರೂ ಈ ಹತ್ತು ಹಲವು ಸಂಘಟನೆಗಳಲ್ಲಿರುವ ಒಡಕು ಆಡಳಿತ ಮಂಡಳಿಗೆ ಅನುಕೂಲವನ್ನೇ ಮಾಡಿದೆ. ಮೇಲಾಗಿ ಆಡಳಿತವರ್ಗ ಕಾರ್ಮಿಕರ ಐಕ್ಯತೆ ಮುರಿಯುವ ಒಡೆದು ಆಳುವ ನೀತಿಯನ್ನೇ ಮುಂದುವರೆಸಿವೆ.

ಇಂಥ ಸಂದಿಗ್ಧ ಸನ್ನಿವೇಶದಲ್ಲೇ ಹಲವಾರು ಸಂಘಟನೆಗಳು ಒಂದೇ ವೇದಿಕೆಗೆ ಬಂದು ಹೋರಾಟಕ್ಕೆ ಸಜ್ಜಾಗಿರುವುದು ಕಾರ್ಮಿಕರಲ್ಲಿ ಹೊಸ ಹುರುಪನ್ನು ಮೂಡಿಸಿದೆ. ಹಾಗೇ ಕಾರಣಗಳೇನೇ ಇದ್ದರೂ ಉಳಿದ ಸಂಘಟನೆಗಳೂ ಸಹಾ ಕಾರ್ಮಿಕರ ಹಿತರಕ್ಷಣೆಗಾಗಿ ಒಗ್ಗೂಡಲಿ, ನೊಂದ ಕಾರ್ಮಿಕಕರಿಗೆ ಜಯವಾಗಲಿ ಎಂಬುದಷ್ಟೇ ನಮ್ಮ ಕಳಕಳಿ.

ಹೀಗೆ ಕೆಲವರು ಹತ್ತಾರು ವರ್ಷಗಳಿಂದ ಟ್ರೈನಿಗಳಾಗೇ ದುಡಿಯುತ್ತಿದ್ದಾರೆ. ಅವರನ್ನು ಖಾಯಂ ಮಾಡುವ ಯೋಚನೆಯೇ ಸರ್ಕಾರಕ್ಕೆ ಇದ್ದಂತಿಲ್ಲ.

ಇನ್ನು ಮಹಿಳಾ ನೌಕರರ ಗೋಳನ್ನು ಕೇಳುವವರೇ ಇಲ್ಲ. ಮಹಿಳಾ ಉದ್ಯೋಗಿಗಳಿಗೆ ರಾತ್ರಿ ಪಾಳಿಯ ಕೆಲಸವನ್ನು ವಹಿಸುವಂತಿಲ್ಲ. ಜನರಲ್ ಶಿಫ್ಟ್ ಕೆಲಸ ಕೊಡಬೇಕೆಂಬ ಸರ್ಕಾರಿ ನಿಯಮಗಳು, ನ್ಯಾಯಾಲಯದ ಆದೇಶಗಳು ಇದ್ದರೂ ಕೆಎಸ್‌ಆರ್‌ಸಿಟಿ ಅಧಿಕಾರಿಗಳ ಪಾಲಿಗೆ ಅವೆಲ್ಲವೂ ಕಾಲ ಕಸಕ್ಕೆ ಸಮ. ಮಹಿಳೆಯರಿಗೆ ಪ್ರತ್ಯೇಕ ವಿಶ್ರಾಂತಿಗೃಹಗಳ ವ್ಯವಸ್ಥೆಯಿರಬೇಕೆಂಬ ನಿಯಮವಿದ್ದರೂ ಅಧಿಕಾರಿಗಳು ಬಹುಶಃ ಒಮ್ಮೆಯಾದರೂ ನೆನಪಿಸಿಕೊಂಡಂತೆ ಕಾಣುತ್ತಿಲ್ಲ.

ಇನ್ನು ತಮ್ಮ ದುರಾಡಳಿತವನ್ನು, ಭ್ರಷ್ಟಾಚಾರವನ್ನು ಪ್ರಶ್ನಿಸುವ ಧೈರ್ಯ ಮಾಡಿದವರಿಗೆ ಯಾವ ಯಾವ ರೀತಿ ಶಿಕ್ಷೆಗೆ ಒಳಪಡಿಸಬೇಕೆಂಬುದಕ್ಕೆ ಈ ಭ್ರಷ್ಟ ಅಧಿಕಾರಿಗಳ ಕೂಟ ಪ್ರತ್ಯೇಕ ಕಾನೂನು ಸಂಹಿತೆಯನ್ನೇ ಜಾರಿಯಲ್ಲಿಟ್ಟಿದ್ದಾರೆ. ಮನಸೋಇಚ್ಛೆ ದೂರದ ಊರುಗಳಿಗೆ ಎತ್ತಂಗಡಿ ಮಾಡುವುದರಿಂದ ಹಿಡಿದು ಸುಳ್ಳು ಕ್ರಿಮಿನಲ್ ಮೊಕದ್ದಮೆ ಹಾಕುವವರೆಗೂ ತಮ್ಮದೇ ಹಿಟ್ಲರ್ ಕಾನೂನುಗಳನ್ನು ಹೊಂದಿದ್ದಾರೆ. ಕ್ಷುಲ್ಲಕ ನೆಪಗಳನ್ನು ನೀಡಿ ಅಮಾನತು ಮಾಡಿದ, ಕೆಲಸದಿಂದ ವಜಾ ಮಾಡಿದ ಹತ್ತಾರು ದಾರುಣಕತೆಗಳು ಇಲ್ಲಿವೆ.

ಇಷ್ಟೆಲ್ಲಾ ದಮನ ದೌರ್ಜನ್ಯ ನಡೆಯುತ್ತಿರುವಾಗ ಕಾರ್ಮಿಕರು ಸಹಜವಾಗಿ ಸಂಘಟಿತವಾಗಿ ಪ್ರತಿಭಟಿಸಬೇಕಿತ್ತಲ್ಲವೇ? ಆದರೆ ಯಾಕೆ ಅಂಥ ಲಕ್ಷಣಗಳು ಕಾಣಿಸುತ್ತಿಲ್ಲ ಎಂದು ಯಾರಿಗಾದರೂ ಅನ್ನಿಸಬಹುದು. ಆದರೆ ಅದು ಮತ್ತೊಂದು ದೊಡ್ಡ ಕತೆ.

ಡಿವೈಡ್ ಅಂಡ್ ರೂಲ್


ಇಲ್ಲಿಗೆ 16 ವರ್ಷಗಳ ಹಿಂದೆ 1996 ರಲ್ಲಿ ಏಕಾಡಳಿತದಲ್ಲಿದ್ದ ಕೆಎಸ್‌ಆರ್‌ಟಿಸಿಯನ್ನು ನಾಲ್ಕು ಕಾರ್ಪೊರೇಷನ್‌ಗಳಾಗಿ ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಎನ್‌ಇಕೆಆರ್‌ಟಿಸಿ, ಬಿಎಂಟಿಸಿ ವಿಭಾಗ ಮಾಡಲಾಯಿತು. ಸರ್ಕಾರಿ ಒಡೆತನದ ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಿಸುವ ಯೋಜನೆಯ ಭಾಗವಾಗಿಯೇ ಇಂಥದ್ದೊಂದು ವಿಭಜನೆ ನಡೆದಿತ್ತು. ಅದರ ಜೊತೆಗೆ ಒಗ್ಗಟ್ಟಾಗಿದ್ದ ಕಾರ್ಮಿಕ ಸಂಘಟನೆಯನ್ನು ಒಡೆದು ವಿಭಜಿಸುವ ಹುನ್ನಾರವೂ ಇತ್ತು. ಈ ವಿಭಜನೆಯನ್ನು ಪ್ರಶ್ನಿಸಿ ಎಐಟಿಯುಸಿ ಸಂಘವು ಹೈಕೋರ್ಟ್‌ನಲ್ಲಿ ದಾವೆ ಹೂಡಿತು. ಹೈಕೋರ್ಟ್ ಚರಿತ್ರಾರ್ಹ ತೀರ್ಪು ನೀಡಿ ಈ ರೀತಿ ಕೆಎಸ್‌ಆರ್‌ಟಿಸಿಯನ್ನು ವಿಭಜಿಸುವುದೇ ಕಾನೂನುಬಾಹಿರ ಎಂದು ಹೇಳಿದೆ. ನಂತರ ಸರ್ಕಾರ ಆ ಆದೇಶಕ್ಕೆ ವಿಭಾಗೀಯ ಪೀಠದಿಂದ ತಡೆಯಾಜ್ಞೆ ತಂದಿದೆ. ನಂತರ ಬಂದ ಎಲ್ಲಾ-ಸರ್ಕಾರಗಳೂ ಇದೇ ಕಾರ್ಮಿಕ ವಿರೋಧಿ, ಕಾನೂನುಬಾಹಿರ ಕೃತ್ಯಗಳಲ್ಲೇ ನಿರತವಾಗಿವೆ.

ಒಂದು ಉದ್ಯಮ ಸಂಸ್ಥೆಗೆ ಒಂದು ಅಧಿಕೃತ ಕಾರ್ಮಿಕ ಸಂಘಟನೆ ಇರಬೇಕೆಂಬ ಕಾನೂನು ಇದೆ. ಅಂಥ ಅಧಿಕೃತ ಸಂಘಟನೆಯನ್ನು ಕಾರ್ಮಿಕರು ರಹಸ್ಯಮತದಾನ ವಿಧಾನದಿಂದ ಆರಿಸಿಕೊಳ್ಳಬೇಕೆಂದು ಕಾನೂನು ಹೇಳುತ್ತದೆ. ಆದರೆ ಇದುವರೆಗೆ ಕೆಎಸ್‌ಆರ್‌ಟಿಸಿಯಲ್ಲಿ ಕೇವಲ ಎರಡು ಬಾರಿ ಮಾತ್ರ ಇಂಥ ಚುನಾವಣೆಗಳು ನಡೆದಿದ್ದು ಕಳೆದ 16 ವರ್ಷಗಳ ಅವಧಿಯಲ್ಲಿ ಕಾರ್ಮಿಕರ ಈ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳಲಾಗಿದೆ.

ಹೀಗೆ ಅಧಿಕೃತವಾಗಿ ಆಯ್ಕೆಯಾದ ಕಾರ್ಮಿಕ ಸಂಘದೊಂದಿಗೆ ಆಡಳಿತ ಮಂಡಳಿ ಪ್ರತಿ 4 ವರ್ಷಗಳಿಗೊಮ್ಮೆ ದ್ವಿಪಕ್ಷೀಯ ಮಾತುಕತೆ ನಡೆಸಿ ವೇತನ ಪರಿಷ್ಕರಣೆ, ಕಾರ್ಮಿಕರಿಗೆ ಇತರ ಸವಲತ್ತುಗಳು, ಹಾಗೂ ಸಂಸ್ಥೆಯ ಹಿತಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕು. ಆದರೆ ಸಂವಿಧಾನ ವಿರೋಧಿ, ಕಾರ್ಮಿಕ ವಿರೋಧಿ ಸರ್ಕಾರಗಳು ನಿರಂತರ ದ್ರೋಹವೆಸಗುತ್ತಾ ಬಂದಿವೆ. ಅಷ್ಟು ಸಾಲದೆಂಬಂತೆ ಕಾರ್ಮಿಕ ಸಂಘಟನೆಗಳನ್ನೇ ಮುರಿಯುವ ತಂತ್ರಗಳನ್ನು ಹೂಡಿದ್ದಾರೆ.

ಈ ಎಲ್ಲಾ ಅನ್ಯಾಯಗಳಿಂದ ರೋಸಿಹೋಗಿರುವ ಕಾರ್ಮಿಕರು ಕಳೆದ ಆರು ತಿಂಗಳಿನಿಂದ ಕಿವುಡು ಸರ್ಕಾರಕ್ಕೆ ಹಲವಾರು ಬಾರಿ ಮನವಿಗಳನ್ನು ಸಲ್ಲಿಸಿದೆ, ನೋಟಿಸ್‌ಗಳನ್ನು ನೀಡಿದೆ. ಆದರೆ ಜವಾಬ್ದಾರಿ ಸ್ಥಾನದಲ್ಲಿರುವ ಸಚಿವ ಅಶೋಕ್ ಆಗಲೀ ಅಥವಾ ಸಂಸ್ಥೆಯ ಎಂ.ಡಿ.ಯಾಗಿರುವ ಗೌರವ್ ಗುಪ್ತ ಆಗಲಿ ಇದುವರೆಗೂ ಕಾರ್ಮಿಕರ ಅಹವಾಲುಗಳನ್ನು ಕಿವಿಯ ಮೇಲೂ ಹಾಕಿಕೊಂಡಿಲ್ಲ. ಇಂಥಾ ಅನಿವಾರ್ಯ ಸಂದರ್ಭದಲ್ಲಿ ರಾಜ್ಯದ ನಾಲ್ಕು ಕಾರ್ಪೊರೇಷನ್‌ಗಳ ಕಾರ್ಮಿಕರೆಲ್ಲಾ ಒಗ್ಗಟ್ಟಾಗಿ ಕಾರ್ಮಿಕ ಸಂಘಗಳ ಜಂಟಿ ಸಮಿತಿಯೊಂದನ್ನು ರಚಿಸಿಕೊಂಡು ಹೋರಾಟಕ್ಕೆ ಸಜ್ಜಾಗಿದ್ದಾರೆ. ಇದೇ ಏಪ್ರಿಲ್ 27 ರಿಂದ ಅನಿರ್ದಿಷ್ಟಾವಧಿಯ ಮುಷ್ಕರ ನಡೆಸುವುದಾಗಿ ಆಡಳಿತ ವರ್ಗಕ್ಕೆ ನೋಟಿಸ್ ಜಾರಿ ಮಾಡಿದೆ. ಇದರ ಪೂರ್ವಭಾವಿಯಾಗಿ ಬಾಗಲಕೋಟೆ ಹುಬ್ಬಳ್ಳಿ, ಚಿಕ್ಕಮಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಂಗಳೂರುಗಳಲ್ಲಿ ಬೃಹತ್ ಸಮಾವೇಶಗಳು ನಡೆದಿವೆ. ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಈ ಸಮಾವೇಶಗಳಲ್ಲಿ ಭಾಗವಹಿಸಿದ್ದಾರೆ. ಆದರೆ ಕಾರ್ಮಿಕರು ಸಂಘಟಿತರಾಗುತ್ತಿರುವುದನ್ನು ಕಂಡ ಆಡಳಿತ ವರ್ಗದವರು ಈಗಲಾದರೂ ಮಾತುಕತೆಗೆ ಮುಂದಾಗಿ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸುವ ಪ್ರಯತ್ನ ಮಾಡುತ್ತಿಲ್ಲ. ಬದಲಿಗೆ ಬೆಂಗಳೂರಿನಲ್ಲಿ ಏಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿಯ ಭಾಗವಾಗಿ ನಡೆದ ಸಮಾವೇಶದಲ್ಲಿ ಭಾಗವಹಿಸಿದ್ದ ನೂರಾರು ಕಾರ್ಮಿಕರ ಮೇಲೆ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿದೆ. ದೂರದ ಊರುಗಳಿಗೆ ವರ್ಗಾವಣೆ ಮಾಡಿ ಕಾರ್ಮಿಕರನ್ನು ಮಟ್ಟಹಾಕಲು ಪ್ರಯತ್ನಿಸುತ್ತಿದ್ದಾರೆ. ಆದರೆ ಕಳೆದ 16 ವರ್ಷಗಳ ದೌರ್ಜನ್ಯಗಳಿಂದ ರೋಸಿ ಹೋಗಿರುವ ಕಾರ್ಮಿಕರು ಈ ಸರ್ಕಾರಿ ದೌರ್ಜನ್ಯದ ವಿರುದ್ಧ ಸವಾಲೆಸೆದು ನಿಂತಿದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ಸಚಿವ ಅಶೋಕ್ ಮತ್ತು ಮುಖ್ಯಮಂತ್ರಿ ಸದಾನಂದ ಗೌಡ ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ನೌಕರರ ಮುಷ್ಕರ KSRTCಯಲ್ಲಿ ಹಿಟ್ಲರ್‌ಗಳು



ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭಾವಿ ರಾಜಕಾರಣಿಗಳು ಹೆಚ್ಚಿನ ಆದಾಯ ತರುವ ಪ್ರಮುಖ ಖಾತೆಗಳಿಗಾಗಿ ಏನೆಲ್ಲ ಕಸರತ್ತು ನಡೆಸುತ್ತಾರೆಂಬುದನ್ನು ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ. ಅಂಥ ಪ್ರಮುಖ ಲಾಭದಾಯಕ ಖಾತೆಗಳಲ್ಲಿ ಸಾರಿಗೆ ಖಾತೆಯೂ ಒಂದು. ಕೆಎಸ್‌ಆರ್‌ಟಿಸಿಯಂಥ ಚಿನ್ನದ ಮೊಟ್ಟೆ ಇಡುವ ಕೋಳಿಯ ಉಸ್ತುವಾರಿ ವಹಿಸಿಕೊಳ್ಳಲು ಅಧಿಕಾರಿಗಳೂ ಕೂಡ ನಾ ಮುಂದು ತಾ ಮುಂದು ಎಂದು ಮುಗಿಬೀಳುವುದು ಮಾಮೂಲು. ಹಾಗೆ ಈ ಇಲಾಖೆಯನ್ನು ನೆಚ್ಚಿ ಬಂದ ಶೇ 95 ಅಧಿಕಾರಿಗಳು, ಸಚಿವರು ಚೆನ್ನಾಗಿ ಉಂಡು ತೇಗಿ ದಷ್ಟಪುಷ್ಟವಾಗಿದ್ದಾರೆ. ಆದರೆ ಸಂಸ್ಥೆಗಾಗಿ, ಸಾರ್ವಜನಿಕ ಸೇವೆಗಾಗಿ ಹಗಲಿರುಳು ಬೆವರು ಹರಿಸುತ್ತಿರುವ ನೌಕರರ ಸ್ಥಿತಿ ಮಾತ್ರ ಇಡೀ ಸರ್ಕಾರಿ ಇಲಾಖೆಗಳಲ್ಲೇ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಹಾಗೆ ನೋಡಿದರೆ ಗಣಿ ಕಾರ್ಮಿಕರನ್ನು ಬಿಟ್ಟರೆ ಅತಿಹೆಚ್ಚು ರಿಸ್ಕ್ ಇರುವ ಕೆಲಸವನ್ನು ಇವರು ನಿರ್ವಹಿಸುತ್ತಿದ್ದಾರೆ. ಸಂಸ್ಥೆಯಲ್ಲಿ 'ಟ್ರೈನೀ' ಅಂದರೆ ತರಬೇತಿಯಲ್ಲಿರುವವರು ಎಂಬ ಹೆಸರಿನಲ್ಲಿ ಸುಮಾರು 33,000 ನೌಕರರಿದ್ದು, ತಿಂಗಳಿಗೆ ಕೇವಲ 3000-4000 ರೂ.ಗಳ ಸ್ಟೈಫಂಡ್ ಹಣ ಕೊಟ್ಟು ಅವರನ್ನು ದುಡಿಸಲಾಗುತ್ತಿದೆ. ತರಬೇತಿಯ ಹೆಸರಿನಲ್ಲಿರುವ ಅವರಿಗೆ ಯಾವ ತರಬೇತಿಯನ್ನು ನೀಡುವುದಿಲ್ಲ; ಬದಲಿಗೆ ಖಾಯಂ ನೌಕರರು ಮಾಡುವ ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಿದ್ದಾರೆ.

ಹೆಗ್ಗಣಗಳಿಗೆ ಜಸ್ಟ್ ಜೋಪಾನ ಎಂದರು!

ಕೆ.ಎಸ್.ಆರ್.ಟಿ.ಸಿ.ಯ ದ್ವಂದ್ವ ನೀತಿಗೆ ಚಿಕ್ಕಮಗಳೂರು ವಿಭಾಗದ ಅವ್ಯವಹಾರವೇ ಸಾಕ್ಷಿ. ಸಣ್ಣಪುಟ್ಟ ತಪ್ಪುಗಳಿಗೆ ನೌಕರರಿಗೆ ಸಸ್ಪೆಂಡ್, ಸಂಬಳಕ್ಕಿಂತಲೂ ದುಬಾರಿ ದಂಡ ವಿಧಿಸುವ ಇಲಾಖೆ ಲಕ್ಷಾನುಗಟ್ಟಲೆ ಅವ್ಯವಹಾರ ನಡೆಸಿದ ಖದೀಮ ಅಧಿಕಾರಿಗಳಿಗೆ ಸಣ್ಣದೊಂದು ಎಚ್ಚರಿಕೆ ನೀಡಿ ಸುಮ್ಮನಾಗಿದೆ. 2008ರಲ್ಲಿ ಚಿಕ್ಕಮಗಳೂರು ಡಿವಿಷನಲ್ ಕಂಟ್ರೋಲರ್ ಆಗಿದ್ದ ಕೆ. ಆದೀಶ್, ಡಿವಿಜನಲ್ ಮೆಕ್ಯಾನಿಕಲ್ ಇಂಜಿನಿಯರ್ ಪಿ. ಯಶವಂತ್‌ಕುಮಾರ್, ಅಸಿಸ್ಟೆಂಟ್ ಸ್ಟೋರ್ ಆಫೀಸರ್ ಪಿ.ಕೆ. ಚಂದ್ರಮೌಳಿ ಮತ್ತು ಅಸಿಸ್ಟೆಂಟ್ ಅಕೌಂಟ್ ಆಫೀಸರ್ ಹರೀಶ್ ಕೊಠಾರಿ ಈ 3350 ಮೀಟರ್ ಕೇಬಲ್ ಖರೀದಿಯಲ್ಲಿ ಭರ್ಜರಿ ಅವ್ಯವಹಾರ ನಡೆಸಿದ್ದು ಕಳೆದ ವರ್ಷದ ತನಿಖೆಯಲ್ಲಿ ಬಹಿರಂಗವಾಗಿತ್ತು. ಸರ್ಕಾರಿ ಆದೇಶದಂತೆ ನೋಂದಾಯಿತ ಮಾರ್ಕೆಟಿಂಗ್ ಏಜೆಂಟ್ ಬಳಿ ಕೊಂಡಿದ್ದರೆ ಕೇವಲ 4,55,287.50 ಮಾತ್ರವೇ ಆಗುತ್ತಿತ್ತು. ಆದರೆ ಇವರು ಖಾಸಗಿ ಏಜೆಂಟರ ಬಳಿ ಬರೋಬ್ಬರಿ 11,02,518 ರೂಪಾಯಿಗೆ ಖರೀದಿಸಿ ಸುಮಾರುಆರೂವರೆ ಲಕ್ಷದಷ್ಟು ಗೋಲ್‌ಮಾಲ್ ಮಾಡಿದ್ದರು. ಅಸಲಿಗೆ ಡಿವಿಜನಲ್ ಅಧಿಕಾರಿಗಳಿಗೆ 1 ಲಕ್ಷಕ್ಕಿಂತ ಹೆಚ್ಚಿನ ಖರೀದಿ ಮಾಡಲು ಅಧಿಕಾರವೇ ಇಲ್ಲ. 2011ರ ಆಗಸ್ಟ್‌ನಲ್ಲಿ ತನಿಖೆ ನಡೆಸಿದ ಮ್ಯಾನೇಜಿಂಗ್ ಡೈರೆಕ್ಟರ್ ಗೌರವ್ ಗುಪ್ತಾ ಲಾಸ್ ಆದ ಮೊತ್ತವನ್ನು ತುಂಬಿಕೊಡುವಂತೆ ಈ ಅಧಿಕಾರಿಗಳಿಗೆ ತಿಳಿಸಿ ಇನ್ನು ಮುಂದೆ ಎಚ್ಚರಿಕೆ ಎಂದಷ್ಟೇ ಸುಮ್ಮನಾಗಿದ್ದಾರೆ. ಕಂಡಕ್ಟರ್, ಡ್ರೈವರ್, ಮೆಕ್ಯಾನಿಕ್‌ಗಳಂತಹ ನೌಕರರ ಸಣ್ಣ ಪ್ರಮಾದಗಳಿಗೂ ಭಾರೀ ಶಿಕ್ಷೆ ಗೊತ್ತುಪಡಿಸುವ ಕೆ.ಎಸ್.ಆರ್.ಟಿ.ಸಿ ದೊಡ್ಡ ಮೊತ್ತದ ಅಮೌಂಟ್ ನುಂಗಿದವರತ್ತ ಇಷ್ಟೊಂದು ಸಾಫ್ಟ್ ಕಾರ್ನರ್ ಹೊಂದಿರುವುದಾದರೂ ಏತಕ್ಕೆ? ಕೆ.ಎಸ್.ಆರ್.ಟಿ.ಸಿ.ಯನ್ನು ಇಂಥ ಕಳ್ಳರ ಕೂಟವೇ ಆಳುತ್ತಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ? ಇಡೀ ಇಲಾಖೆಯಲ್ಲಿರುವ ನೂರಾರು ಅಧಿಕಾರಿಗಳಲ್ಲಿ ಭ್ರಷ್ಟರಲ್ಲದ ಕೇವಲ 12 ಮಂದಿ ಅಧಿಕಾರಿಗಳ ಪಟ್ಟಿ ಕೊಡಿ ಎಂದು ಕಾರ್ಮಿಕ ಮುಖಂಡರು ಹಾಕಿರುವ ಸವಾಲಿಗೆ ಉತ್ತರಿಸುವ ನೈತಿಕ ಸ್ಥೈರ್ಯ ಈ ಸರ್ಕಾರಕ್ಕಿದೆಯೇ.

ಗೈಡ್ ಪ್ರಕಾಶನದ ಹೊಸ ಪುಸ್ತಕ
ಪ್ರೌಢಶಾಲಾ ಶಿಕ್ಷಕರ
ನೇಮಕಾತಿ ಸ್ಪರ್ಧಾತ್ಮಕ
ಪರೀಕ್ಷಾ ಪುಸ್ತಕ
ಏಪ್ರಿಲ್ 27 ರಂದು ಬಿಡುಗಡೆ
ಪ್ರತಿಗಳಿಗಾಗಿ ಸಂಪರ್ಕಿಸಿ
ವ್ಯವಸ್ಥಾಪಕರು
9880302817



ವಿದೇಶಿ ವೇಶ್ಯಾ ಜಾಲ

ಮಸ್ಕತ್‌ಗೆ 200 ಕನ್ನಡತಿಯರ ಮಾರಾಟ

◆

ಮೈಸೂರು ಸೀಮೆಯಲ್ಲಿ ನೇಪಾಳ ಬಾಂಗ್ಲಾ ಹುಡುಗಿಯರು

• ಪಾರ್ವತೀಶ
• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಇದೊಂದು ದುರಂತ ಕಥನ!

ಕಳೆದ ಐದು ವರ್ಷಗಳಿಂದ ನಿರಂತರವಾಗಿ ನಡೆಯುತ್ತಾ ಬಂದಿರುವ 'ಹುಡುಗಿಯರ ಮಾರಾಟ'ದ ದಂಧೆಯೊಂದರ ಭಯಾನಕ ಘಟನಾವಳಿಗಳಿವು.

ಕರ್ನಾಟಕ ಪೊಲೀಸರ ಬೇಜವಾಬ್ದಾರಿ ವರ್ತನೆ, ದಂಧೆಕೋರರ ಕ್ರೌರ್ಯ ಹಾಗೂ ಅಮಾಯಕ ಬಡ ಯುವತಿಯರ ಅಸಹಾಯಕತೆಗಳು ಒಟ್ಟಿಗೆ ಮೇಳೈಸಿ ಇದುವರೆಗೂ ಕರ್ನಾಟಕದಿಂದಲೇ ಇನ್ನೂರು ಯುವತಿಯರು ವಿದೇಶಗಳಲ್ಲಿನ ವೇಶ್ಯಾವಾಟಿಕೆ ದಂಧೆಗೆ ಸಾಗಾಣಿಕೆಯಾಗಿರುವ ಪ್ರಕರಣವು ಈಗ ತಾನೆ ಹೊರ ಬಿದ್ದಿದೆ.

ಈ ಹುಡುಗಿಯರಲ್ಲಿ ಬಹುತೇಕರು ರವಾನೆಯಾಗಿರುವುದು ಗಲ್ಫ್ ದೇಶವಾದ ಓಮನ್‌ನ ರಾಜಧಾನಿ ಮಸ್ಕತ್ ನಗರಕ್ಕೆ. ವಿದೇಶಗಳಲ್ಲಿ ಒಳ್ಳೇ ಸಂಬಳದ ಕೆಲಸ ಕೊಡಿಸುವುದಾಗಿ ಇಲ್ಲಿನ ಯುವತಿಯರನ್ನು ನಂಬಿಸಿ ಮಸ್ಕತ್‌ನ ವೇಶ್ಯಾಗೃಹಗಳಿಗೆ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಕಳೆದ ವಾರ ಬೆಂಗಳೂರಿನ ಸುಬ್ರಹ್ಮಣ್ಯಪುರದ ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಬಹುಶಃ ಅಲ್ಲಿ ಇನ್ಸ್‌ಪೆಕ್ಟರ್ ಬಾಳೇಗೌಡ ಇರದಿದ್ದರೆ ಹಾಗೂ ರಾಜ್ಯದ ವಿಶೇಷ ಸಿಒಡಿ ವಿಭಾಗ 'ಮಾನವ ಸಾಗಣಿಕೆ ವಿರೋಧಿ ದಳ(AMTS)'ದ ಮಾಲಿನಿ ಕೃಷ್ಣಮೂರ್ತಿ ಗಮನ ಕೊಡದೇ ಹೋಗಿರದಿದ್ದರೆ ಈ ಪಾತಕಿಗಳ ಬಂಧನವೂ ಆಗುತ್ತಿರಲಿಲ್ಲವೇನೊ!

ಅಂದಹಾಗೆ ಬಾಳೇಗೌಡರು ಅರೆಸ್ಟ್ ಮಾಡಿರುವ ನಫೀಸಾ ಬಾನು ಎಂಬ ಖತರ್ ನಾಕ್ ಹೆಣ್ಣು ಸುಬ್ರಹ್ಮಣ್ಯಪುರ ಪೊಲೀಸ್ ಸ್ಟೇಷನ್ನಿನ ಪಕ್ಕದಲ್ಲೇ ಕೆಲ ವರ್ಷಗಳಿಂದ ವಾಸವಿದ್ದಳು. ಈ ದಂಧೆಯಲ್ಲಿ ನಫೀಸಳ ಜೊತೆಗಿದ್ದ ಸಾಲೇಹ್ ಕುನ್ನಿ ಎಂಬ ರಾಕ್ಷಸನನ್ನು ಎಸ್.ಐ. ಬಾಲರಾಜ್ ದೂರದ ಮುಂಬೈತನಕ ಹೋಗಿ ಒದ್ದು ಎಳೆದುಕೊಂಡು ಬಂದು ಪರಪ್ಪನ ಅಗ್ರಹಾರಕ್ಕೆ ತರುಬಿದ್ದಾರೆ. ಆದರೆ ಕರ್ನಾಟಕ ಪೊಲೀಸರು ಕೊಂಚ ಎಚ್ಚರ ವಹಿಸಿದ್ದರೆ, ಆಗಿಂದಾಗ್ಗೆ ರಾಜ್ಯದ ವಿವಿದೆಡೆ ದಾಖಲಾಗುತ್ತಿದ್ದ 'ಹುಡುಗಿಯರು ಕಾಣೆಯಾಗಿದ್ದಾರೆ' ಎಂಬ ಕಂಪ್ಲೆಂಟ್‌ಗಳ ಬಗ್ಗೆ ಇನ್ನಷ್ಟು ಗಮನಹರಿಸಿದಿದ್ದರೆ ನೂರಾರು ಅಮಾಯಕರು ಮಾರಾಟ ಆಗುವುದನ್ನು ತಪ್ಪಿಸಬಹುದಿತ್ತು, ಅಷ್ಟೇ ಅಲ್ಲ, ಒಮನ್ ದೇಶದ ರಾಯಲ್ ಒಮನ್ ಪೊಲೀಸರು ಈಗ್ಗೆ ಎರಡು ವರ್ಷಗಳ ಹಿಂದೆಯೇ ಹುಡುಗಿಯರ ಮಾರಾಟ ದಂಧೆಯ ಬಗ್ಗೆ ನೀಡಿದ್ದ ಸುಳಿವನ್ನು ಗಂಭೀರವಾಗಿ ಪರಿಗಣಿಸಿದ್ದರೆ ನಫೀಸಾ ಬಾನು ಹಾಗೂ ಸಾಲೇಹ್ ಕುನ್ನಿ ಎಂದೋ ಅರೆಸ್ಟಾಗಿರುತ್ತಿದ್ದರು.



ಆದರೇನು ಮಾಡುತ್ತೀರಿ, ಹೀಗೆ ಕರ್ನಾಟಕ ರಾಮನಗರ, ಮೈಸೂರು, ಚಾಮರಾಜನಗರ, ಗುಲ್ಬರ್ಗಾ, ಬಿಜಾಪುರ, ಮಲೆನಾಡುಗಳಿಂದ ಸಾಗಣಿಕೆಯಾದ ಹುಡುಗಿಯರೆಲ್ಲಾ ಬಡ ಕುಟುಂಬಗಳಿಗೆ ಸೇರಿದ್ದವರು. ಅವರ ಪೋಷಕರ ಕಂಪ್ಲೆಂಟುಗಳನ್ನು ಯಾವ ಪೊಲೀಸರು ಗಂಭೀರವಾಗಿ ಪರಿಗಣಿಸಿರಲಿಲ್ಲ, ಇದು ದಂಧೆಕೋರರಿಗೆ ತಮ್ಮ ಹೀನ ಕಾರ್ಯ ಮುಂದುವರೆಸಲು ಪ್ರೋತ್ಸಾಹ ನೀಡಿದಂತೆಯೇ ಆಯಿತು.

ಮಸ್ಕತ್‌ನಲ್ಲಿ ಪೊಲೀಸ್ ರೈಡ್

ಇದು ನಡೆದದ್ದು2011 ಜುಲೈನಲ್ಲಿ. ಇಂತಾದೊಂದು ವೇಶ್ಯಾದಂಧೆ ಮಸ್ಕತ್ ನಗರದೊಳಗೆ ತಲೆಎತ್ತಿದೆ ಎಂಬ ಕ್ಲೂ ಸಿಕ್ಕ ನಂತರ ಅಲ್ಲಿನ ಪೊಲೀಸರು ಒಂದು ಬ್ರಾಥೆಲ್ ಮೇಲೆ ರೈಡ್ ನಡೆಸಿದರು. ಅವತ್ತು ಅಲ್ಲಿ ನೂರಾರು ಹುಡುಗಿಯರು ಪೊಲೀಸರಿಗೆ ಸಿಕ್ಕಿಬಿದ್ದರು. ಅವರನ್ನು ವಿಚಾರಿಸಿದಾಗ ಅವರಲ್ಲಿ ಇಪ್ಪತ್ತು ಮಂದಿ ಇಂಡಿಯಾ ದೇಶದವರಾಗಿದ್ದರೆ ಉಳಿದವರು ನೇಪಾಳ, ಬಾಂಗ್ಲದೇಶ, ಶ್ರೀಲಂಕಾ, ಫಿಲಿಫೈನ್ಸ್ ದೇಶಗಳಿಂದ ಸಾಗಾಣಿಕೆಗೊಂಡು ಮಸ್ಕತ್‌ನ ದಂಧೆಕೋರರ ಸೆರೆಯಲ್ಲಿದ್ದರೆಂಬುದು ಪತ್ತೆಯಾಗಿತ್ತು.

ಆಘಾತಕಾರಿ ವಿಷಯವೆಂದರೆ ಅವರೆಲ್ಲರನ್ನೂ ಮೋಸದಿಂದ ಈ ವೇಶ್ಯಾಗೃಹಗಳಿಗೆ ಮಾರಾಟ ಮಾಡಲಾಗಿತ್ತು! ಅವರಲ್ಲಿ ಹಲವರಿಗೆ ಇನ್ನೂ 18 ವರ್ಷ ಮೀರಿರಲಿಲ್ಲ! ಮಸ್ಕಟ್‌ನ ರಾಯಲ್ ಓಮನ್ ಪೊಲೀಸ್ ಇಲಾಖೆ ಭಾರತೀಯ ಪ್ರಜೆಗಳಾದ ಈ 20 ನತದೃಷ್ಟ ಹೆಣ್ಣುಮಕ್ಕಳನ್ನು ದೆಹಲಿಗೆ ಕಳುಹಿಸಿಕೊಟ್ಟು ಮುಂದಿನ ಕ್ರಮಗಳನ್ನು ಜರುಗಿಸುವಂತೆ ಕೇಳಿಕೊಂಡಿತು.

ಆ ರೀತಿ ದೆಹಲಿ ತಲುಪಿದವರಲ್ಲಿ ಬೆಂಗಳೂರಿನ ಆಯೇಷಾ ಮತ್ತು ಶಬನಾ ಕೂಡ ಇದ್ದರು. ದೆಹಲಿಯ ಸಾಗರೋತ್ತರ ವ್ಯವಹಾರಗಳ ಇಲಾಖೆಯ ಅಧಿಕಾರಿಗಳು ಕರ್ನಾಟಕದ ಪೊಲೀಸರಿಗೆ ಇವರ ಬಗ್ಗೆ ಮಾಹಿತಿ ನೀಡಿ, ಇಲ್ಲಿನ ಸಿಐಡಿ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ "ಮಾನವ ಸಾಗಾಣಿಕೆ ವಿರೋಧಿ ದಳ-AHTS"ಕ್ಕೆ ಅವರಿಬ್ಬರನ್ನು ವಹಿಸಿದರು. ಆಗ ಸಿಐಡಿಯ ಅಧಿಕಾರಿಣಿಯಾಗಿದ್ದ ಮಾಲಿನಿ ಕೃಷ್ಣಮೂರ್ತಿಯವರು ವಿಶೇಷ ಆಸಕ್ತಿ ವಹಿಸಿ ಈ ಹೆಣ್ಣುಮಕ್ಕಳ ಹೇಳಿಕೆಗಳನ್ನು ದಾಖಲಿಸಿದರು.



ಆ ಮೂಲಕ ತಿಳಿದು ಬಂದ ಸತ್ಯವೇನೆಂದರೆ ಈ ದುಷ್ಟ ಜಾಲದ ರಾಕ್ಷಸರು ಉತ್ತಮ ಉದ್ಯೋಗ ಕೊಡಿಸುವುದಾಗಿ ಈ ಅಮಾಯಕ ಹೆಣ್ಣು ಮಕ್ಕಳನ್ನು ನಂಬಿಸಿ ತಮ್ಮ ಏಜೆಂಟ್‌ಗಳ ಮೂಲಕ ಅಂತಾರಾಷ್ಟ್ರೀಯ ವೇಶ್ಯಾವಾಟಿಕೆ ದಂಧೆಗಾಗಿ ಮಾರಿಬಿಟ್ಟಿದ್ದರು. ಖೊಟ್ಟಿ ಪಾಸ್‌ಪೋರ್ಟ್‌ಗಳನ್ನು ಸೃಷ್ಟಿಸಿ, ಚೆನ್ನೈನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಅವರನ್ನು ಮಸ್ಕಟ್‌ಗೆ ಸಾಗಿಸಿದ್ದರು. ನರಕದಂತಿದ್ದ ಮಸ್ಕಟ್‌ನ ಆ ವೇಶ್ಯಾವಾಟಿಕೆಯ ಬ್ರಾಥೆಲ್‌ನಲ್ಲಿ ಬಂಧಿಯಾದ ನಂತರವಷ್ಟೇ ಇವರಿಗೆ ತಾವು ಮೋಸ ಹೋಗಿದ್ದರ ಅರಿವಾಗಿದ್ದು. ತಮ್ಮ ಭವಿಷ್ಯದ ಬಗ್ಗೆ ಇನ್ನೂ ಕನಸುಗಳೂ ಮೂಡಿರದ ಎಳೆಯ ವಯಸ್ಸಿನಲ್ಲಿ ಈ ಮಕ್ಕಳು ಬಲವಂತದ ವೇಶ್ಯೆಯರಾಗಿ ಬದಲಾಗಿದ್ದರು. ಆದರೆ ಅವರ ಗೋಳನ್ನು ಕೇಳುವವರು ಅಲ್ಲಿ ಯಾರೂ ಇರಲಿಲ್ಲ, ಅಲ್ಲಿಂದ ತಪ್ಪಿಸಿಕೊಳ್ಳುವುದು ಹಾಗಿರಲಿ, ಹಾಗೊಂದುವೇಳೆ ತಪ್ಪಿಸಿಕೊಂಡರೂ ಹೋಗುವುದಾದರೂ ಎಲ್ಲಿಗೆ? ಇಂಥ ಅಸಹಾಯಕ ಸ್ಥಿತಿಯಲ್ಲಿ ಆ ಹೆಣ್ಣು ಮಕ್ಕಳು ಅನಿವಾರ್ಯವಾಗಿ ಆ ವೇಶ್ಯಾವಾಟಿಕೆಯ ಕೂಪದಲ್ಲೇ ನರಳಬೇಕಾಯಿತು. ಆತ್ಮಹತ್ಯೆ ಮಾಡಿಕೊಳ್ಳಲೂ ಅವಕಾಶವಿಲ್ಲದಂಥಾ ಘೋರ ನರಕ ಅದಾಗಿತ್ತು. ಹೀಗೆ ಪ್ರತಿನಿತ್ಯದ ಹಿಂಸೆಯನ್ನು ತಾಳಿಕೊಂಡು ಆ ಯುವತಿಯರು ಬದುಕಿದ್ದದ್ದೇ ಒಂದು ಪವಾಡ. ಹೀಗಿದ್ದಾಗ ಮಸ್ಕಟ್ ಪೊಲೀಸರು ಇವರ ಪಾಲಿನ ದೇವರಾಗಿ ಬಂದು ಈ ನರಕದಿಂದ ಅವರನ್ನು ವಿಮೋಚನೆ ಮಾಡಿದ್ದರು.

ಮಿಸ್ಸಿಂಗ್ ಕಂಪ್ಲೆಂಟ್‌ಗಳಿದ್ದವು



ಈ ಆಯೇಷಾ ಹಾಗೂ ಶಬನಾರ ಬದುಕಿನ ದುರಂತ ಎಂತಹದ್ದೆಂದರೆ ಅವರ ಕಣ್ಮರೆಗಳ ಬಗ್ಗೆ ಪೋಷಕರು ಕಂಪ್ಲೆಂಟ್ ನೀಡಿ ಮೂರು ವರ್ಷ ಆಗಿತ್ತು, ಆಯೇಷಾ ಸುಬ್ರಹ್ಮಣ್ಯಪುರಂನ ಹರಿನಗರದವಳು. ಅವಳು ಕಾಣೆಯಾದಾಗ ಪೋಷಕರು 2008ರ ನವೆಂಬರ್ 26 ರಂದು ಸುಬ್ರಹ್ಮಣ್ಯಪುರಂನ ಪೊಲೀಸರಿಗೆ ಮಿಸ್ಸಿಂಗ್ ಕಪ್ಲೆಂಟು ಕೊಟ್ಟಿದ್ದರು. ಮತ್ತೊಂದೆಡೆ ಆಯೇಷಾಗೂ ಮೊದಲೇ ಶಬನಾಳ ಅಪಹರಣವಾಗಿತ್ತು, ಕೆಂಗೇರಿ ಹತ್ತಿರದ ಅಂಚೆಪಾಳ್ಯ ವಾಸಿಗಳಾಗಿದ್ದ ಶಬನಾಳ ತಂದೆ-ತಾಯಿ 2007 ರ ಫೆಬ್ರುವರಿ 1 ರಂದು ಬಿಡದಿ ಪೊಲೀಸರಿಗೆ ಶಬನಾ ಕಾಣೆಯಾದ ಬಗ್ಗೆ ಕಂಪ್ಲೆಂಟು ಕೊಟ್ಟಿದ್ದರು. ಆದರೆ ಕಾಣೆಯಾದವರು ಬಡವರ ಮಕ್ಕಳಾಗಿದ್ದರಿಂದ ಪೊಲೀಸರು ಹೆಚ್ಚೇನು ತಲೆಕೆಡಿಸಿಕೊಂಡಿರಲಿಲ್ಲ, ಅಷ್ಟರಲ್ಲಿ ಆಯೇಷಾ, ಶಬನಾ ಮುಂತಾದ ಡಜನ್‌ಗಟ್ಟಲೆ ಬಾಲೆಯರು ಮಸ್ಕತ್‌ಗೆ ರವಾನೆಯಾಗಿ ಹೋಗಿದ್ದರು.

ಈ ದುರಂತ ಇಷ್ಟಕ್ಕೆ ಕೊನೆಯಾಗಲೂ ಇಲ್ಲ.

2011 ರ ಜುಲೈನಲ್ಲಿ ಮಸ್ಕತ್‌ನಲ್ಲಿ ಪೊಲೀಸರ ದಾಳಿಯಾಗಿ ಶಬನಾ, ಆಯೇಷ ಸೇರಿದಂತೆ ಇಪ್ಪತ್ತು ಮಂದಿ ದೆಹಲಿಗೆ ವಾಪಾಸ್ ಬಂದ ಮೇಲೆ ಇವರ ಹೇಳಿಕೆಗಳನ್ನು ಪಡೆಯಲಾಗಿತ್ತು. ಶಬನಾ, ಆಯೇಷಾ ಸೇರಿದಂತೆ ನಾಲ್ವರು ಕರ್ನಾಟಕಕ್ಕೆ ಹಿಂತಿರುಗಿ ಬಂದರು. ಹಾಗೆ ಬಂದವರೆಲ್ಲರೂ ಸಿಒಡಿ ಪೊಲೀಸರಿಗೆ ನಫೀಸಾ ಬಾನು ಹಾಗೂ ಸಾಲೇಹ ಕುನ್ನಿ ಬಗ್ಗೆ ಮಾಹಿತಿ ಕೊಟ್ಟರು.

ಸಿಐಡಿ ದಳದವರು ಇವರ ಹೇಳಿಕೆಗಳನ್ನಾಧರಿಸಿ ತಯಾರಿಸಿದ ವರದಿಯನ್ನು ಸುಬ್ರಹ್ಮಣ್ಯಪುರ ಮತ್ತು ಬಿಡದಿ ಠಾಣೆಗಳಿಗೆ ನೀಡಿದರು. ಆಯೆಷಾಳನ್ನು ವಂಚಿಸಿ ಮಾರಾಟ ಮಾಡಿದ ನಫೀಸಾ ಬಾನು ಮತ್ತು ಸಾಯಿಲ್ ಕುಮಾರ್ ಹಾಗೂ ಶಬಾನಾಳನ್ನು ಮಾರಾಟ ಮಾಡಿದ ಜ್ಯೋತಾ, ಸಾಯಿಲ್‌ಕುಮಾರ್, ಸೈನಾ ಮತ್ತು ಫಯಾಜ್ ಎಂಬ ಆರೋಪಿಗಳನ್ನು ಬಂಧಿಸಲು ಕ್ರಮ ಕೈಗೊಳ್ಳುವಂತೆ ಸಿಐಡಿ ಕೇಳಿಕೊಂಡಿತು.

ಸ್ವತಃ ಕುಮಾರಿ ಆಯೇಷಾ ತಾರೀಖು 12-10-2010ರಂದು ಸುಬ್ರಮಣ್ಯಪುರ ಪೊಲೀಸ್ ಠಾಣೆಗೆ ನೀಡಿದ್ದ ದೂರಿನ ಮೇರೆಗೆ ಮೊಕದ್ದಮೆ ಸಂಖ್ಯೆ 544/2010, ಹಾಗೂ ಶಬನಾ ನೀಡಿದ ದೂರಿನ ಮೇರೆಗೆ ಬಿಡದಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ (ಸಂಖ್ಯೆ 608/2010)ಗಳು ದಾಖಲಾಗಿದ್ದವು. ಅವು ಐಪಿಸಿ 406, 420, 366, 511, 376, ಸ/ವಾ 34 ಐಪಿಸಿ ಮತ್ತು 4, 5, 6 ಪಿ.ಐ.ಟಿ ಆಕ್ಟ್ ರೀತ್ಯ ಪ್ರಕರಣ ದಾಖಲಾದ್ದವು. ಪ್ರಕರಣವೇನೋ ದಾಖಲಾಗಿದ್ದವು. ಆದರೆ ಮುಂದಿನ ಕ್ರಮ? ಅಷ್ಟೆಲ್ಲಾ ಮಾಹಿತಿ ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದೂ, ಈ ಕೇಸಿನ ತನಿಖೆಯಲ್ಲಿ ಪೊಲೀಸರಿಗೆ ಆಸಕ್ತಿಯಿಲ್ಲವೆಂದೂ ಸ್ವತಃ ಸಿಐಡಿ ಅಧಿಕಾರಿಗಳೇ ಕೆಲವೊಮ್ಮೆ ಬಹಿರಂಗವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು. ಅಂದರೆ ಇಂಥಾ ಪ್ರಕರಣಗಳಲ್ಲಿ ಪೊಲೀಸರ ಘೋರ ನಿರ್ಲಕ್ಷ್ಯ ಎಂಥದ್ದಿರಬೇಕೆಂದು ಊಹಿಸಿ.

ಆದರೆ ಸುಬ್ರಮಣ್ಯಪುರ ಠಾಣೆಗೆ ಬಾಳೇಗೌಡ ಎಂಬ ದಕ್ಷ ಇನ್ಸ್‌ಪೆಕ್ಟರ್ ಬಂದ ನಂತರ ಈ ಕೇಸಿನಲ್ಲಿ ಒಂದಷ್ಟು ಬೆಳವಣಿಗೆ ಕಂಡುಬಂತು. ಮೇಲಾಗಿ ಡಿಸಿಪಿಯವರಾದ ಸೋನಿಯಾ ನಾರಂಗ್ ಸಹ ಈ ಕೇಸಿನ ಅಪರಾಧಿಗಳನ್ನು ಬಂಧಿಸಲು ವ್ಯಕ್ತಿಗತ ಆಸಕ್ತಿ ತಳೆದರು. ಆನಂತರ ಇದರ ತನಿಖೆಗೆಂದು ಒಂದು ವಿಶೇಷ ತಂಡವನ್ನೇ ರಚಿಸಿದರು. ಪ್ರಮುಖ ಆರೋಪಿಗಳಲ್ಲಿ ಒಬ್ಬಳಾದ ನಫೀಸಾ ಬಾನುಳನ್ನು ಅರೆಸ್ಟ್ ಮಾಡಿದರು. ಅವಳು ವಾಸವಾಗಿದ್ದದ್ದು ಎಲ್ಲಿ ಗೊತ್ತೆ? ಇದೇ ಪೊಲೀಸ್ ಠಾಣೆಯಿಂದ ಕೂಗಳತೆ ದೂರದಲ್ಲಿ, ವಸಂತಪುರ - ಸುಬ್ರಮಣ್ಯಪುರ ಮುಖ್ಯ ರಸ್ತೆಯಲ್ಲಿ! ಮೂಲತಃ ಮುಂಬೈನವಳಾದ 38 ವರ್ಷ ವಯಸ್ಸಿನ ಈ ರಾಕ್ಷಸಿ ತನ್ನ ನೀಚ ಕೃತ್ಯಕ್ಕೆ ಬೆಂಗಳೂರೇ ಪ್ರಶಸ್ತವಾದ ಸ್ಥಳವೆಂದು ಆರಸಿಕೊಂಡಿದ್ದಳು. ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದ ತನ್ನ ಸಭ್ಯ ಗಂಡನನ್ನು ತೊರೆದು ಮತ್ತೊಬ್ಬನ ಜೊತೆ ಸಂಸಾರ ನಡೆಸಿದ್ದಾಳೆ. ಹೇಗೇಗೋ ಮಾಡಿ ಬಡ ಮುಸ್ಲಿಂ ಹೆಣ್ಣು ಮಕ್ಕಳನ್ನು ಪರಿಚಯ

SHRC ಮತ್ತು DGP ಯವರಿಗೆ ಲಂಕೇಶ್ ಮನವಿ



ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರಾದ ನ್ಯಾ. ಎಸ್.ಆರ್. ನಾಯಕ್ ಅವರಲ್ಲಿ 'ಲಂಕೇಶ್' ಮನವಿ.

ಈಗ ಬಂಧಿತರಾಗಿರುವ ಸಾಲೇಹ್ ಕುನ್ನಿ ಮತ್ತು ನಫೀಸಾ ಬಾನು ಎಂಬ ಆರೋಪಿಗಳು ಸುಮಾರು 200 ಹೆಣ್ಣುಮಕ್ಕಳನ್ನು ವಂಚಿಸಿ ಅವರನ್ನು ವೇಶ್ಯಾವಾಟಿಕೆ ದಂಧೆಗೆ ಮಾರಾಟ ಮಾಡಿರುವುದಾಗಿ ತಿಳಿದು ಬಂದಿದೆ. ಕರ್ನಾಟಕ ರಾಜ್ಯದಾದ್ಯಂತ ಪ್ರತಿನಿತ್ಯ ಹೆಣ್ಣುಮಕ್ಕಳು ಕಾಣೆಯಾಗುತ್ತಿದ್ದು ಸಾಲೇಹ್ ಕುನ್ನಿಯಂಥ ಪಾತಕಿಗಳ ಗ್ಯಾಂಗ್‌ನ ಕೈಗಳಿಗೆ ಸಿಲುಕಿ ವೇಶ್ಯಾವಾಟಿಕೆಯ ಜಾಲಕ್ಕೆ ಮಾರಾಟವಾಗಿರಬಹುದಾದ ಸಾಧ್ಯತೆ ನಿಚ್ಚಳವಾಗಿದೆ. ವಿಶ್ವಸಂಸ್ಥೆ ಹಾಗೂ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಸಹಾ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತಿರುವ ಈ ಪಿಡುಗನ್ನು ನಿವಾರಿಸುವತ್ತ ಹಲವಾರು ಕ್ರಮಗಳಿಗೆ ಮುಂದಾಗಿರುವುದು ಸಂತಸದ ವಿಷಯ. ಈ ಹಿನ್ನಲೆಯಲ್ಲಿ ನೂರಾರು ಬಡ ಹೆಣ್ಣು ಮಕ್ಕಳ ಮೇಲೆ ನಿರಂತರ ನಡೆಯುತ್ತಿರುವ ಈ ಅತ್ಯಾಚಾರ, ದೌರ್ಜನ್ಯಗಳನ್ನು ತಡೆಗಟ್ಟಲು SHRC ಮಧ್ಯಪ್ರವೇಶಿಸಬೇಕೆಂದು ತಮ್ಮಲ್ಲಿ ಮನವಿ. ರಾಜ್ಯಾದಾದ್ಯಂತ ಕಣ್ಮರೆಯಾಗುತ್ತಿರುವ ಹೆಣ್ಣು ಮಕ್ಕಳ ಬಗ್ಗೆ ಸಮರ್ಪಕ ಮಾಹಿತಿ ಸಂಗ್ರಹಿಸಿ, ಈ ಪಿಡುಗನ್ನು ತೊಡೆದು ಹಾಕಲು ಅತ್ಯಂತ ವ್ಯವಸ್ಥಿತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ವಿನಂತಿ.

ಅದೇ ರೀತಿ ಡಿಜಿಪಿ ಇನ್‌ಫೆಂಟರವರಲ್ಲಿ ಮನವಿ ಏನೆಂದರೆ



ಇಂಥ ಘನಘೋರವಾದ ಅಪರಾಧವನ್ನು, ಅಮಾನುಷ ಕೃತ್ಯಗಳನ್ನು ತಡೆಗಟ್ಟಲು ಪೋಲಿಸ್ ಇಲಾಖೆ ಆದ್ಯತೆಯ ಮೇರೆಗೆ ಕೆಲಸ ಮಾಡುತ್ತಿಲ್ಲವೆಂಬುದು ಹಗಲಿನಷ್ಟೇ ಸತ್ಯ. ಪೊಲೀಸರು ತಮ್ಮ ದೈನಂದಿನ ಒತ್ತಡಗಳು ಹಾಗೂ ಆದ್ಯತೆಯಲ್ಲಿ ಮುಳುಗಿದ್ದು ಈ ಬಡ ಹೆಣ್ಣುಮಕ್ಕಳ ಕಣ್ಮರೆ ಪ್ರಕರಣಗಳು ನಿರ್ಲಕ್ಷ್ಯತನಕ್ಕೊಳಗಾಗುತ್ತಿವೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಸಿಒಡಿ ತನಿಖೆಗೆ ವಹಿಸುವುದು ಎಲ್ಲಾ ರೀತಿಯಿಂದಲೂ ಸೂಕ್ತ. ಈಗಾಗಲೇ ಸಿಒಡಿ ಅಡಿಯಲ್ಲಿ ಮಾನವ ಕಳ್ಳ ಸಾಗಣೆ ವಿರೋಧಿ ದಳ(ಎಎಚ್‌ಟಿಯು)ವೊಂದು ರಚಿತವಾಗಿದ್ದು ಅದಕ್ಕೆ ಅಗತ್ಯವಿರುವ ಪೂರಕ ಬೆಂಬಲವನ್ನು ಒದಗಿಸಿ ಈ ದಂಧೆಯ ಸಮಗ್ರ ತನಿಖೆಯನ್ನು ಸಿಒಡಿ ವಿಭಾಗಕ್ಕೆ ವರ್ಗಾಯಿಸಬೇಕಾಗಿದೆ. ಈ ಮೂಲಕ ಅಪರಾಧಿ ಗ್ಯಾಂಗ್‌ಗಳನ್ನು ಪತ್ತೆಹಚ್ಚುವುದಕ್ಕೂ, ಹಾಗೂ ಕಾಣೆಯಾಗಿರುವ ಅಮಾಯಕ ಹೆಣ್ಣು ಮಕ್ಕಳನ್ನು ರಕ್ಷಿಸುವುದಕ್ಕೂ ಸಹಕಾರಿಯಾಗುತ್ತದೆ. ಇನ್‌ಫೆಂಟ್ ಸಾಹೇಬರು ಇತ್ತ ಗಮನಹರಿಸುವಂತಾಗಲಿ.

ಮೈಸೂರು ಸೀಮೆಯಲ್ಲಿ ವಿದೇಶಿ ವೇಶ್ಯಾಜಾಲ

ಇದು ಇನ್ನೊಂದು ರೀತಿಯ ದುರಂತಗಾಥೆ.

ಮೊನ್ನೆ ಏಪ್ರಿಲ್ 1ನೇ ತಾರೀಖು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ...ವಿ ಫ್ಯಾಮಿಲಿ ರೆಸ್ಟೋರೆಂಟ್ ಮೇಲೆ ಪೊಲೀಸರು ದಾಳಿ ನಡೆಸಿದಾಗ ...ದ್ದವರು ನೇಪಾಳ ಹಾಗೂ ಬಾಂಗ್ಲಾದೇಶದ ಹುಡುಗಿಯರು.

...ಂತದ್ದೊಂದು ವಿದೇಶಿ ವೇಶ್ಯಾಜಾಲವು ಮೈಸೂರು ಸೀಮೆಯ ಸುತ್ತಾ ...ಮುತ್ತಿರುವ ಬಗ್ಗೆ ರಾಜ್ಯ ಸಿಓಡಿ ಪೊಲೀಸರಿಗೆ ಮೊದಲು ಟಿಪ್ ಆಫ್ ...ದ್ದು ಮೈಸೂರಿನ ಒಡನಾಡಿ ಸಂಸ್ಥೆ ಇದನ್ನಾಧರಿಸಿ ಸಿಓಡಿ ಮುಖ್ಯಸ್ಥರಾದ ...ಪ್‌ಕುಮಾರ್ ದತ್ತಾ ಹಾಗೂ ಮಾನವ ಕಳ್ಳಸಾಗಾಣಿಕೆ ನಿಗ್ರಹ ದಳದ ...ಖ್ಯಸ್ಥ ಮುರುಗನ್ ಒಂದು ಕಾರ್ಯಾಚರಣೆ ಪ್ಲಾನ್ ಮಾಡಿದರು. ...ನಂತೆ ಮೈಸೂರಿನ ಎಸ್.ಪಿ. ದಿಲೀಪ್ ಹಾಗೂ ಹುಣಸೂರು ಸರ್ಕಲ್ ...ಸ್ಪೆಕ್ಟರ್ ಗಜೇಂದ್ರ ಪ್ರಸಾದ್ ತಮ್ಮ ಸಿಬ್ಬಂದಿಯೊಂದಿಗೆ ದಾಳಿ ನಡೆಸಿದಾಗ ...ಬೆಚ್ಚಿ ಬೀಳಿಸುವಂತಹ ಮಾಹಿತಿಗಳು ಹೊರಬಿದ್ದವು.

...ಒಟ್ಟಾರೆಯಾಗಿ ಹೇಳಬೇಕೆಂದರೆ ಇದೊಂದು ಅಂತರರಾಷ್ಟ್ರೀಯ ...ಶ್ಯಾಜಾಲ. ನೇಪಾಳ, ಬಾಂಗ್ಲಾದೇಶಗಳಿಂದ ಅಮಾಯಕ ಬಾಲಕಿಯರಿಗೆ ...ಉದ್ಯೋಗದ ಆಮಿಷ ತೋರಿಸಿ ಇಲ್ಲಿಗೆ ಕರೆತಂದು ವೇಶ್ಯಾವಾಟಿಕೆಗೆ ...ಲಾಗುತ್ತಿತ್ತು.

ಅಂತರರಾಷ್ಟ್ರೀಯ ಜಾಲ

...ವಾಸವಿ ಫ್ಯಾಮಿಲಿ ರೆಸ್ಟೋರೆಂಟ್ ಮೇಲೆ ಮೈಸೂರು ಪೊಲೀಸರ ...ಒಂದು ವ್ಯವಸ್ಥಿತ ದಾಳಿ ನಡೆಸಿತು. ಈ ರೆಸ್ಟೋರೆಂಟ್‌ನಲ್ಲಿ ನಡೆಯುತ್ತಿದ್ದ ...ಶ್ಯಾವಾಟಿಕೆಯನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಿ ವೇಶ್ಯಾವಾಟಿಕೆ ನಡೆಸುತ್ತಿದ್ದ ...ರುಷರನ್ನು ಬಂಧಿಸಲಾಯಿತು. ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ...ಹಿಳೆಯರನ್ನು ಮೈಸೂರಿನ ಒಡನಾಡಿ ಸಂಸ್ಥೆಗೆ ರವಾನಿಸಲಾಯಿತು.

...ಎಲ್ಲಾ ದಾಳಿಗಳಲ್ಲಿ ನಡೆಯುವಂತೆ ಸ್ಥಳೀಯ ಪೊಲೀಸರು ಇದೊಂದು ...ಮಾನ್ಯ ವೇಶ್ಯಾವಾಟಿಕೆ ದಾಳಿ ಎಂದು ಪರಿಗಣಿಸಿ, ಪ್ರಕರಣವನ್ನು ದಾಖಲಿಸಿ ...ಹಿಳೆಯರನ್ನು ಬಿಡುಗಡೆಗೊಳಿಸಿದರು. ಆದರೆ ಒಡನಾಡಿ ಸಂಸ್ಥೆಯ ...ಮುಖ್ಯಸ್ಥರಾದ ಹಾಗು ರಾಷ್ಟ್ರೀಯ ಮಾನವಸಾಗಾಣಿಕೆ ವಿರುದ್ಧದ ಕಾರ್ಯ ...ಪಡೆಯ ಸದಸ್ಯರೂ ಆದ ಸ್ಟಾನ್ಲಿ ಮತ್ತು ಪರುಶುರಾಮ್ ಅವರು ಇದರ ...ನೆ ಮಾನವಸಾಗಾಣಿಕೆ ಜಾಲವಿರುವುದನ್ನು ಶಂಕಿಸಿ ತನಿಖೆ ಆರಂಭಿಸಿದರು. ...ಕೊನೆಗೆ ತಿಳಿದಿದ್ದು ಇದ ಒಂದು ಸ್ಥಳೀಯ ಜಾಲವಲ್ಲ ಬದಲಾಗಿ ...ಅಂತರರಾಷ್ಟ್ರೀಯ ಜಾಲವೆಂದು.

ಸಿಕ್ಕಿಬಿದ್ದ ವಿದೇಶಿಯರು

...ಈ ಜಾಲದಲ್ಲಿ ಸಿಕ್ಕಿಬಿದ್ದ ಮಹಿಳೆಯರನ್ನು ವಿಚಾರಿಸಿದಾಗ ಇವರೆಲ್ಲಾ ...ಬಾಂಗ್ಲಾದೇಶದಿಂದ ಬಂದವರೆಂದು ತಿಳಿದು ಬಂತು. ಆದರೆ ಈ ...ಮಹಿಳೆಯರು ತಮ್ಮ ಸಂಬಂಧಿಗಳು ಎಂದು ಹೇಳಿ ಅವರನ್ನು ಕರೆದುಕೊಂಡು ...ಹೋಗಲು ಬಂದ ಇಬ್ಬರು ಯುವಕರನ್ನು ವಿಚಾರಣೆಗೆ ಒಳಪಡಿಸಿದಾಗ ...ಇನ್ನಷ್ಟು ವಿಚಾರಗಳು ಬಯಲಿಗೆ ಬಂದವು. ಗ್ರೀನ್‌ಖಾನ್ ಅಲಿಯಾಸ್ ...ಪ ಮತ್ತು ಕೃಷ್ಣಾ ಲಾಮ ಎಂದು ಹೇಳಿಕೊಂಡ ಬಂದ ಆ ಇಬ್ಬರು ...ಯುವಕರ ಬಳಿ ವಿದೇಶಿ ಕರೆನ್ಸಿಗಳು, ಕ್ರೆಡಿಟ್ ಕಾರ್ಡ್‌ಗಳು, ಭಾರತೀಯ ...ಪ್ಯಾನ್ ಕಾರ್ಡ್ ಅಲ್ಲದೆ ಇತ್ತೀಚಿನ ಆಧಾರ್ ಕಾರ್ಡ್ ಕೂಡ ಇವರ ...ಬಳಿಯಲ್ಲಿ ದೊರೆತವು. ಇದು ಒಡನಾಡಿ ಸಂಸ್ಥೆಯವರನ್ನು ಬೆಚ್ಚಿ ಬೀಳಿಸಿತು. ...ಈ ಪ್ರಕರಣದ ಗಂಭೀರತೆಯನ್ನು ಒಡನಾಡಿ ಸಂಸ್ಥೆಯು ಸಿಐಡಿ ...ವಿಭಾಗದ ನಿರ್ದೇಶಕರಾದ ರೂಪ್‌ಕುಮಾರ್ ದತ್ತ ಮತ್ತು ಮಾನವ ಸಾಗಾಣಿಕೆ ...ನಿಗ್ರಹ ದಳದ ಮುಖ್ಯಸ್ಥರಾದ ಮುರುಗನ್‌ರ ಗಮನಕ್ಕೆ ತಂದಿತು. ಇವರ ...ನಿರ್ದೇಶನದ ಮೇರೆಗೆ ಎಸ್‌ಪಿ ಕಚೇರಿಯಲ್ಲಿ ಒಂದು ತಂಡ ರಚನೆ ...ಮಾಡಿ ಒಡನಾಡಿ ಸಂಸ್ಥೆ ನೀಡಿದ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ...ತನಿಖೆ ಚುರುಕುಗೊಳಿಸಲಾಯಿತು. ಇದಾದ ನಂತರ ಸಿಐಡಿ ತಂಡದವರು



ಒಡನಾಡಿಯೊಂದಿಗೆ ಸೇರಿದರು. ಬೆಂಗಳೂರಿನ ಅಡ್ಡೆಗಳ ಮೇಲೆ ದಾಳಿಗಳನ್ನು ನಡೆಸಿದರು.

ಬೆಂಗಳೂರಿನಲ್ಲಿ ದಾಳಿ

ಏಪ್ರಿಲ್ 4 ರಂದು ಬೆಂಗಳೂರಿನ ಎರಡು ಮನೆಗಳ ಮೇಲೆ ದಾಳಿ ನಡೆಸಿ 10 ಕ್ಕೂ ಹೆಚ್ಚು ಐಶಾರಾಮಿ ಮೊಬೈಲುಗಳು, ಡಜನ್‌ಗಟ್ಟಲೆ ವಿವಿಧ ಕಂಪನಿಯ ಸಿಮ್‌ಕಾರ್ಡ್‌ಗಳು, ಮಾರಕಾಸ್ತ್ರಗಳು, ವಿದೇಶಿ ಕರೆನ್ಸಿಗಳು, ಸ್ಥಳೀಯ ವ್ಯಕ್ತಿಗಳ ಸಂಪರ್ಕ ನಂಬರ್‌ಗಳು ಸೇರಿದಂತೆ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಯಿತು. ಬಾಷ್ಮೀಶೇಖ್ ಎಂಬಾತನನ್ನು ಬಂಧಿಸಲಾಯಿತು. ಬಳ್ಳಾರಿ, ಗುಲ್ಬರ್ಗ, ಧಾರವಾಡ, ಹುಬ್ಬಳ್ಳಿ, ಚಾಮರಾಜನಗರ, ಸೇರಿದಂತೆ ರಾಜ್ಯಾದ್ಯಂತ ಈ ಜಾಲ ಇರುವುದನ್ನು ಪತ್ತೆಹಚ್ಚಲಾಯಿತು.



ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಪರಶುರಾಂ

ಸಾಮಾನ್ಯವಾಗಿ ವೇಶ್ಯಾವಾಟಿಕೆ ತಾಣಗಳು ಮೆಟ್ರೋಪಾಲಿಟನ್ ಸಿಟಿಗಳಲ್ಲಿ ತಲೆ ಎತ್ತುವುದು ವಾಡಿಕೆ ಆದರೆ ಬರುಬರುತ್ತಾ ಜಿಲ್ಲಾ ಕೇಂದ್ರಗಳಲ್ಲೂ ಇದು ಹೆಚ್ಚಾಗುತ್ತಾ ಬಂದಿದೆ. ಇತ್ತೀಚಿಗಿನ ಆಶ್ಚರ್ಯಕರ ಸಂಗತಿ ಎಂದರೆ ಈ ಜಾಲಗಳು ಗ್ರಾಮೀಣ ಪ್ರದೇಶಗಳಲ್ಲಿಯೂ ತನ್ನ ಕಬಂಧ ಬಾಹುಗಳನ್ನು ಚಾಚಿರುವುದು. ಇದಕ್ಕೆ ಈ ದಂಧೆಕೋರರು ಆರಿಸಿಕೊಂಡಿರುವುದು ಹೆಚ್ಚಿನ ವಹಿವಾಟು ನಡೆಯುವ ತಾಲೂಕು ಕೇಂದ್ರಗಳು ಹಾಗು ಹೋಬಳಿ ಕೇಂದ್ರಗಳನ್ನು. ಹುಣಸೂರು, ಪಿರಿಯಾಪಟ್ಟಣ, ಕುಶಾಲನಗರ, ಹೀಗೆ ಪ್ರವಾಸಿ ಕೇಂದ್ರಗಳ ಮಾರ್ಗಗಳ ಮಧ್ಯದ ಕೇಂದ್ರಗಳಲ್ಲಿ ಇವರ ತಾಣ ಬೀಡುಬಿಡುತ್ತಿದೆ. ಇಂತಹ ಜಾಲಗಳು ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಸ್ಥಳೀಯರ ಸಹಕಾರ ಇರುವುದು ತನಿಖೆಯಿಂದ ಕಂಡು ಬಂದಿದೆ.

ಬಾಂಗ್ಲಾ ಮತ್ತು ಭಾರತದ ಗಡಿ ಪ್ರದೇಶದ ಹಳ್ಳಿಗಳಲ್ಲಿ ಕೆಲವರ ಕಾಯಕವೇ ಇದಾಗಿದೆ. ಈ ನೀಚರು ತಮ್ಮ ಹಕೋಟಗೆ ಸಿಗುವ ಇಂತಹ ಮಹಿಳೆಯರನ್ನು ಯಾವುದೇ ಸಮಸ್ಯೆ ಬಾರದಂತೆ ಒಂದು ಗಡಿಯಿಂದ ಇನ್ನೊಂದು ಗಡಿಗೆ ಸಾಗಿಸುತ್ತಾರೆ. ಇದಕ್ಕೆ ತಲಾ ಒಬ್ಬರಿಗೆ ಆರು ಸಾವಿರದಂತೆ ಹಣ ವಸೂಲಿ ಮಾಡುತ್ತಾರೆ. ಇದರಲ್ಲಿ ಗಡಿ ಪ್ರದೇಶದಲ್ಲಿ ಇರುವ ಅಧಿಕಾರಿಗಳಿಗೂ ಈ ಹಣದ ಪಾಲು ಹೋಗುತ್ತಿದೆ. ಹೀಗೆ ಬಾಂಗ್ಲಾ ಮತ್ತು ನೇಪಾಳದ ಬಡ ಹೆಣ್ಣುಮಕ್ಕಳನ್ನು ಭಾರತಕ್ಕೆ ತಂದು ವೇಶ್ಯಾವಾಟಿಕೆಯಲ್ಲಿ ತೊಡಗಿಸಿ ಹಣ ಮಾಡುವವರು ಹೆಚ್ಚಾಗುತ್ತಿದ್ದು ಮಾನವ ಸಾಗಾಣಿಕೆ ಎಗ್ಗಿಲ್ಲದೆ ನಡೆದಿದೆ. ಇಲ್ಲಿಯವರೆಗೆ ಈ ಗ್ಯಾಂಗ್ ಯುವತಿಯರು ಹಾಗೂ ಅಪ್ರಾಪ್ತ ಬಾಲಕಿಯರು ಸೇರಿದಂತೆ 600ಕ್ಕೂ ಹೆಚ್ಚು ಜನರನ್ನು ಭಾರತದೊಳಗೆ ಸಾಗಿಸಿದ್ದು ಕಲ್ಕತ್ತ, ಬಾಂಬೆ, ಹೈದರಾಬಾದ್, ಬೆಂಗಳೂರು, ಪುಣೆ, ದೆಹಲಿಯಲ್ಲದೆ ದೇಶದಾದ್ಯಂತ ಚಿಕ್ಕ ಪುಟ್ಟ ಊರುಗಳಲ್ಲೂ ಹರಡಿಕೊಂಡಿದ್ದಾರೆ.

ದೇಶದ ಗಡಿಗಳನ್ನು ದಾಟಿ ಬರುವ ಹೆಣ್ಣು ಮಕ್ಕಳಿಗೆ ಆದಾಯ ತೆರಿಗೆ ಇಲಾಖೆ ನೀಡುವ ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳು, ಎಟಿಎಂ ಕಾರ್ಡ್‌ಗಳು, ಡ್ರೈವಿಂಗ್ ಲೈಸನ್ಸ್, ದಂಧೆಗೆ ಅನುಕೂಲವಾಗುವ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳು ಇತ್ಯಾದಿಗಳನ್ನು ದೊರಕಿಸಿಕೊಡುವ ಜಾಲವಿದೆ. ಅಕಸ್ಮಾತ್ ಈ ದಂಧೆಯಲ್ಲಿರುವವರು ಸ್ಥಳೀಯ ಪೊಲೀಸರಿಗೆ ಸಿಕ್ಕಿಬಿದ್ದರೆ ಅಂತಹ ಸಂದರ್ಭದಲ್ಲಿ ತನಿಖೆಯ ದಿಕ್ಕು ತಪ್ಪಿಸಲು ಇವೆಲ್ಲ ಬಳಕೆಯಾಗುತ್ತವೆ.

ಸ್ಥಳೀಯ ಪೊಲೀಸರ ನಿರ್ಲಕ್ಷ್ಯ

ವೇಶ್ಯಾವಾಟಿಕೆ ಎಂದಾಕ್ಷಣ ಸಣ್ಣದೊಂದು ಪ್ರಕರಣ ದಾಖಲಿಸಿ ಕೈತೊಳೆದುಕೊಳ್ಳುವ ಸ್ಥಳೀಯ ಪೊಲೀಸರಿಗೆ ದೇಶದ ಮಹಿಳೆಯರ ಭದ್ರತೆಯ ವಿಚಾರದಲ್ಲಿ ಈ ರೀತಿಯ ನಿರ್ಲಕ್ಷ್ಯ ಇರುವುದಾದರೂ ಏಕೆ? ಹಿಂದೊಮ್ಮೆ ಇದೇ ಮೈಸೂರಿನ ವಿಜಯನಗರ ಠಾಣಾ ವ್ಯಾಪ್ತಿಯಲ್ಲಿ ಪ್ರಭಾವಿ ವ್ಯಕ್ತಿಯೊಬ್ಬನ ಮಗ ಬಾಂಗ್ಲಾದೇಶದ ಹುಡುಗಿಯೊಬ್ಬಳನ್ನು ಖರೀದಿಸಿ ಸಿಕ್ಕಿಬಿದ್ದಿದ್ದ ಪ್ರಕರಣ ಇನ್ನೂ ಹಸಿರಾಗಿದ್ದರೂ ಪೊಲೀಸರು ತಮ್ಮ ನಿರ್ಲಕ್ಷ್ಯ ಧೋರಣೆಯನ್ನು ಮುಂದುವರೆಸಿದ್ದಾರೆ.

ಸಿಓಡಿ ಪೊಲೀಸರು ಪಿರಿಯಾಪಟ್ಟಣದಲ್ಲಿ ಪತ್ತೆಯಾಗಿರುವ ವಿದೇಶಿ ವೇಶ್ಯಾಜಾಲದ ಬಗ್ಗೆ ಸಮಗ್ರ ತನಿಖೆ ನಡೆಸಬೇಕಿದೆ. ಈಗೇನಾದರೂ ಸರ್ಕಾರ ನಿರ್ಲಕ್ಷ್ಯ ಮಾಡಿದರೆ ಕೇವಲ ಕರ್ನಾಟಕದ ಮುಗ್ಧ ಹುಡುಗಿಯರು ಮಾತ್ರವಲ್ಲ ನೇಪಾಳ, ಬಾಂಗ್ಲಾದೇಶಗಳ ಬಡ ಹೆಣ್ಣುಮಕ್ಕಳು ಸಾವಿರಾರು ಸಂಖ್ಯೆಯಲ್ಲಿ ಈ ಜಾಲದವರ ಬಲೆಗೆ ಬಿದ್ದು ನಾಶವಾಗುವುದು ಖಚಿತ.

ಪೊಲೀಸ್ ಇನ್‌ಫಾರ್ಮರ್‌ನೇ ರೇಪ್ ಮಾಡಿದ

ಪಿರಿಯಾಪಟ್ಟಣದ ವೇಶ್ಯಾವಾಟಿಕೆಯನ್ನು ಸಣ್ಣ ಪ್ರಕರಣವಾಗಿ ದಾಖಲಿಸಿಕೊಂಡ ಇದೇ ಪೊಲೀಸರು ಕೆಲ ದಿನಗಳ ನಂತರ ಒಡನಾಡಿ ಸಂಸ್ಥೆ ಗುರುತಿಸಿಕೊಟ್ಟ ವಿದೇಶಿಯರನ್ನು ತಾವೇ ಹಿಡಿದು ತನಿಖೆ ನಡೆಸಿದ್ದಾಗಿ ದೊಡ್ಡದಾಗಿ ಪತ್ರಿಕೆಗಳಿಗೆ ಪೋಜು ಕೊಟ್ಟು ತಮಗೆ ತಾವೇ ಬಹುಮಾನ ಘೋಷಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿ.

ವಾಸ್ತವದಲ್ಲಿ ಈ ಕಾರ್ಯಾಚರಣೆಯ ಸಂದರ್ಭದಲ್ಲಿ ಪೋಲಿಸರು ಹಾಗೂ ಮಾಹಿತಿದಾರರು ಮಾಡಿದ ಕಾನೂನು ಬಾಹಿರ ಕೃತ್ಯಗಳಿಗೆ ಅವರುಗಳ ಮೇಲೆಯೇ FIR ದಾಖಲಿಸಬೇಕಾಗಿತ್ತು. ವಾಸವಿ ಲಾಡ್ಜ್‌ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬುದನ್ನು ದೃಢಪಡಿಸಿಕೊಳ್ಳಲು ಒರ್ವ ಮಾಹಿತಿದಾರನನ್ನು ಕಳುಹಿಸಲಾಗಿತ್ತು. ಆತ ಆ ಲಾಡ್ಜ್‌ನಲ್ಲಿದ್ದ ಅಪ್ರಾಪ್ತ ನೇಪಾಳಿ ಹೆಣ್ಣು ಮಗಳನ್ನು ಲೈಂಗಿಕವಾಗಿ ಬಳಸಿಕೊಂಡನಲ್ಲದೆ ಆಕೆಯ ನಗ್ನದೇಹದ ವೀಡಿಯೋವನ್ನು ಚಿತ್ರೀಕರಣ ಮಾಡಿಕೊಂಡಿದ್ದು ಯಾವುದೇ ವಿವರಣೆಗೆ ನಿಲುಕದ ಅಪರಾಧವಾಗಿದೆ.

ಮಾರಕ ಆಯುಧ ಮತ್ತು ಮಾದಕ ವಸ್ತುಗಳ ಜಾಲದಷ್ಟೆ ಪ್ರಬಲವಾಗಿ ಮಾನವ ಸಾಗಾಣಿಕೆ ಜಾಲವು ಬೆಳೆದಿದೆ. ಆದ್ದರಿಂದಲೇ ವಿಶ್ವಸಂಸ್ಥೆ ಮಾನವ ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟನಲ್ಲಿ ಎಲ್ಲಾ ಸರಕಾರಗಳು ಸೂಕ್ತ ಕ್ರಮವಹಿಸಬೇಕೆಂದು ನಿರ್ದೇಶನ ನೀಡಿದೆ. ಭಾರತ ಸರಕಾರ ಈ ಬಗ್ಗೆ ಹೆಚ್ಚಿನ ಕ್ರಮವಹಿಸಿದ್ದರೂ ತಳಹಂತದ ಅನುಷ್ಠಾನದಲ್ಲಿ ಅಧಿಕಾರಿಗಳ ನಿರ್ಲಕ್ಷದಿಂದ ಲೋಪ ಉಂಟಾಗುತ್ತಿರುವುದು ಆತಂಕಕಾರಿ ವಿಚಾರವಾಗಿದೆ.

...ಕೊಂಡು, ಅವರನ್ನು ನಂಬಿಸುವುದರಲ್ಲಿ ಈಕೆ ಎತ್ತಿದ ...ಳ ಮಾತಿಗೆ ಮರುಳಾಗುತ್ತಿದ್ದ ಹುಡುಗಿಯರನ್ನು ...ಆಯಿಸಿ ವಿದೇಶಗಳಲ್ಲಿ ಕೆಲಸ ಕೊಡಿಸುವುದಾಗಿ ..., ಆ ಮಕ್ಕಳ ಪೋಷಕರ ಗಮನಕ್ಕೆ ಬಾರದಂತೆ ...ಷ್ಟಿ ವಿದೇಶೀ ವೇಶ್ಯಾಜಾಲಕ್ಕೆ ಮಾರಾಟ ಮಾಡುತ್ತಿದ್ದಳು.

... ನೀಚ ದಂಧೆಯ ಬಾಸ್ ಆಗಿದ್ದವನೇ ಕೆ.ಪಿ. ...ಶ್ ಅಲಿಯಾಸ್ ಸಾಲೆಹ್ ಕುನ್ನಿ. ನಫೀಸಾ ಬಾನು ...ಆರಂಭದಲ್ಲಿ ಸಾಲೆಹ್ ಕುನ್ನಿ ಸತ್ತುಹೋಗಿದ್ದಾನೆಂದೇ ...ಹೇಳುತ್ತಾ ಬಂದಳು. ನಂತರ ಪೊಲೀಸರ ಟ್ರೀಟ್‌ಮೆಂಟ್‌ನ ...ಬಲದಿಂದ ಸಾಲೆಹ್ ಕುನ್ನಿಯ ಬಗ್ಗೆ ಬಾಯಿಬಿಟ್ಟಳು. ...ಎಸ್‌ಐ ಬಾಲರಾಜು ನೇತೃತ್ವದ ತಂಡ ಮುಂಬೈನ ...ಎಗ್ರಿ ಏರಿಯಾದ ಅಪಾರ್ಟ್‌ಮೆಂಟ್‌ನಲ್ಲಿದ್ದ ಈ ...ನ ನಿವಾಸದ ಮೇಲೆ ದಾಳಿ ಮಾಡಿ ಆತನನ್ನು ...ಬೆಂಗಳೂರಿಗೆ ಎಳೆದುತಂದಿದೆ.

...ಮೂಲತಃ ಕೇರಳದ ಕ್ಯಾಲಿಕಟ್‌ನವನಾದ ಈತ ...ಹಲವಾರು ವರ್ಷಗಳಿಂದ ಮುಂಬೈನಲ್ಲೇ ನೆಲೆಸಿದ್ದಾನೆ. ...ವಿಚಾರಣೆಯ ವೇಳೆ ಈತನೇ ತಿಳಿಸಿರುವಂತೆ ಕರ್ನಾಟಕದ ...ಬೆಂಗಳೂರು, ಮೈಸೂರು ಮತ್ತು ಚಾಮರಾಜನಗರಗಳಲ್ಲಿ ...ಲ್ಲದೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ...ಮಧ್ಯಪ್ರದೇಶ, ಉತ್ತರಪ್ರದೇಶ, ದೆಹಲಿ, ಪಶ್ಚಿಮ ಬಂಗಾಳ ...ಮುಂತಾದ ರಾಜ್ಯಗಳಲ್ಲಿ ಏಜೆಂಟ್‌ಗಳನ್ನು ಹೊಂದಿದ್ದಾನೆ. ...ಏಜೆಂಟ್‌ಗಳ ಜಾಲದ ಮೂಲಕ ಬಡ ಹೆಣ್ಣು ಮಕ್ಕಳನ್ನು ...ಮುಂಬೈನಲ್ಲಿ ನೆಲೆಸಿರುವ ಮಂಗಳೂರು ಮೂಲದ ... ಮತ್ತು ಶ್ರೀಮತಿ ಕುಮಾರಿ ಎಂಬುವವರ ವಶಕ್ಕೆ ...ಒಪ್ಪಿಸಿಕೊಡುತ್ತಾರೆ. ಅವರು ಈ ಯುವತಿಯರನ್ನು ವೇಶ್ಯಾ ದಂಧೆಯವರಿಗೆ ಮಾರಾಟ ಮಾಡಿ ಬಂದ ಹಣವನ್ನು ಇಬ್ಬರೂ ಹಂಚಿಕೊಳ್ಳುತ್ತಾರೆ. ಈ ದಂಧೆಯ ಕರಾಳ ಬಾಹುಗಳು ಎಷ್ಟು ವಿಸ್ತಾರವಾಗಿ ಚಾಚಿಕೊಂಡಿವೆ ನೋಡಿ.


ಸುಬ್ರಮಣ್ಯಪುರ ಪೊಲೀಸರು ಈ ಇಬ್ಬರೂ ಪಾಖಂಡಿಗಳನ್ನು ಸದ್ಯ ಪರಪ್ಪನ ಅಗ್ರಹಾರಕ್ಕೆ ಸೇರಿಸಿದ್ದಾರೆ. ಈ ಪಾಖಂಡಿಗಳು ಜೈಲು ಸೇರಿರುವುದರಿಂದ ಆ ನತದೃಷ್ಟ ಹೆಣ್ಣು ಮಕ್ಕಳಿಗೆ ಮತ್ತು ಅವರ ಪೋಷಕರಿಗೆ ಸ್ವಲ್ಪ ಸಮಾಧಾನವೂ ಆಗಿರಬಹುದು. ಆದರೆ ಈ ಕತೆ ಇಷ್ಟಕ್ಕೇ ಮುಗಿಯುವುದಿಲ್ಲ. ಈ ಸಾಲೆಹ್ ಕುನ್ನಿಯೇ ಹೇಳಿರುವ ಪ್ರಕಾರ ಈತನ ಜಾಲ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಡಿಕೊಂಡಿದೆ. ಅವರೆಲ್ಲಾ ಈಗಲೂ ಯಾವುದೇ ಆತಂಕವಿಲ್ಲದೆ ಅಮಾಯಕ ಹೆಣ್ಣು ಮಕ್ಕಳ ಬದುಕನ್ನು ನರಕ ಮಾಡಿ ತಮ್ಮ ಜೇಬು ತುಂಬಿಸಿಕೊಳ್ಳುತ್ತಿದ್ದಾರೆ. ಕೇವಲ ಸಾಲೆಹ್ ಕುನ್ನಿಯ ಗ್ಯಾಂಗ್ ಮಾತ್ರವಲ್ಲ, ಒಂದು ಅಂದಾಜಿನ ಪ್ರಕಾರ ದೇಶಾದ್ಯಂತ ಇಂಥ ನೂರಾರು ಗ್ಯಾಂಗ್‌ಗಳು ಕಾರ್ಯನಿರತವಾಗಿವೆ. ಪ್ರತಿ ವರ್ಷ ಸಾವಿರಾರು ಎಳೆಯ ಕಂದಮ್ಮಗಳನ್ನು ವೇಶ್ಯಾವಾಟಿಕೆಯೆಂಬ ನರಕಕ್ಕೆ ದೂಡಲಾಗುತ್ತಿದೆ. ಮನುಷ್ಯತ್ವಕ್ಕೆ, ನಾಗರಿಕತೆಗೆ, ಪ್ರಜಾಪ್ರಭುತ್ವಕ್ಕೆ ಸವಾಲಾಗಿರುವ ಇಂಥಾ ಹೀನ ಕೃತ್ಯಗಳ ಬಗ್ಗೆ ನಮ್ಮನ್ನಾಳುತ್ತಿರುವ ಸರ್ಕಾರಗಳಿಗೆ ಜಾಣ ಕುರುಡು! ಘೋರ ನಿರ್ಲಕ್ಷ್ಯ?!! ಯಾಕೆ ಗೊತ್ತೆ? ಈ ದಂಧೆ ಗುರಿ ಮಾಡಿರುವುದು ನಿರ್ಗತಿಕ ವರ್ಗದ ಹೆಣ್ಣು ಮಕ್ಕಳನ್ನು.

ಅವರ ಬಳಿ ಹಣವೂ ಇಲ್ಲ, ಆಸ್ತಿಯೂ ಇಲ್ಲ.

ಮಹಿಳೆಯರ ಮಾರಾಟ
ಲೋ ರಿಸ್ಕ್ - ಹೈ ಪ್ರಾಫಿಟ್

ಮಾನವ ಸಾಗಾಣಿಕೆಯೆಂಬುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಹಳ ವ್ಯಾಪಕವಾಗಿರುವ ದಂಧೆ. ಇದರಲ್ಲಿ ವೇಶ್ಯಾವಾಟಿಕೆಗಾಗಿ ಮಕ್ಕಳು ಮತ್ತು ಮಹಿಳೆಯರನ್ನು ಸಾಗಿಸುವುದು ಅತ್ಯಂತ ಪ್ರಮುಖವಾದುದು. ಈ ದಂಧೆ ಅಕ್ರಮ ಮಾದಕ ದ್ರವ್ಯಗಳ ಮಾರಾಟ ಹಾಗೂ ಶಸ್ತ್ರಾಸ್ತ್ರಗಳ ಮಾರಾಟದ ನಂತರ ಮೂರನೇ ಸ್ಥಾನದಲ್ಲಿದೆ.

ರಾಷ್ಟ್ರೀಯ ಮಾನವ ಹಕ್ಕು ಆಯೋಗ (ಎನ್‌ಎಚ್‌ಆರ್‌ಸಿ) ಇತರೆ ಹಲವು ತಜ್ಞರೊಂದಿಗೆ ಸೇರಿ ಅಧ್ಯಯನ ನಡೆಸಿತ್ತು. ಅದರ ನೇತೃತ್ವವನ್ನು ಪಿ.ಎಮ್.ನಾಯರ್ ಎಂಬ ನಿವೃತ್ತ ಐಪಿಎಸ್ ಅಧಿಕಾರಿ ವಹಿಸಿದ್ದರು. ಆ ವರದಿಯ ಪ್ರಕಾರ ದೆಹಲಿಯಲ್ಲಿ ಕಳೆದ ಕೆಲವು ವರ್ಷಗಳಲ್ಲಿ ನಾಪತ್ತೆಯಾದ ಹೆಣ್ಣುಮಕ್ಕಳ ವಾರ್ಷಿಕ ಸರಾಸರಿ 6227. ಮುಂಬೈನಲ್ಲಿ 4182. ನಂತರದ ಮೂರನೇ ಸ್ಥಾನದಲ್ಲಿರುವ ಬೆಂಗಳೂರಿನ ವಾರ್ಷಿಕ ಸರಾಸರಿ ಸಂಖ್ಯೆ 1820.



ಹೆಣ್ಣು ಮಕ್ಕಳು ನಾಪತ್ತೆ ಪ್ರಕರಣಗಳನ್ನು ಕುರಿತಂತೆ ಸಮಿತಿಯೊಂದು ಇಂತಹ ಪ್ರಕರಣಗಳ ತನಿಖೆ ಮಾಡುತ್ತಿದ್ದ ಅಧಿಕಾರಿಗಳ ಮುಂದೆ ಹಲವು ಪ್ರಶ್ನೆಗಳನ್ನು ಇಟ್ಟರು. ಆಗ ಶೇಕಡಾ 80 ಅಧಿಕಾರಿಗಳು ಇಂಥಾ ಪ್ರಕರಣಗಳು ತಮಗೆ ಆದ್ಯತೆಯ ವಿಚಾರವಾಗಿಲ್ಲವೆಂದು ಬಹಿರಂಗವಾಗಿ ಒಪ್ಪಿಕೊಂಡರು. ಇಷ್ಟು ಹೇಳಿದ ಮೇಲೆ ಈ ಪ್ರಕರಣಗಳ ಬಗ್ಗೆ ಪೊಲೀಸ್ ಇಲಾಖೆಯಾಗಲಿ, ಸರ್ಕಾರವಾಗಲಿ ತಲೆ ಕೆಡಿಸಿಕೊಳ್ಳದೇ ತಮ್ಮ ಮಾಮೂಲಿ ದಿನಚರಿಯಲ್ಲಿ ಮುಳುಗಿದ್ದಾರೆ ಎಂಬುದು ಸ್ಪಷ್ಟ. ಹಾಗೆಯೆ ಮಕ್ಕಳನ್ನು ಮಾರಾಟ ಮಾಡುವ ಪಾಖಂಡಿಗಳೂ ಸಹಾ ಯಾರ ಭಯವೂ ಇಲ್ಲದೇ, ಎಗ್ಗೂ ಸಿಗ್ಗೂ ಯಾವುದೂ ಇಲ್ಲದೆ ತಮ್ಮ ದಂಧೆಯನ್ನು ನಡೆಸುತ್ತಿದ್ದಾರಂತೆ. ಸಣ್ಣ ಮಕ್ಕಳನ್ನು ಅಪಹರಿಸಿ ಈ ದಂಧೆಗೆ ಹಚ್ಚುವವರ ಸಂಖ್ಯೆಯೂ ದೊಡ್ಡದಿದೆಯಂತೆ.

ಹೀಗಾದರೆ ಬಡವರ ಮುಗ್ಧ ಹೆಣ್ಣುಮಕ್ಕಳನ್ನು ರಕ್ಷಿಸುವವರಾರು?

ಇಷ್ಟೆಲ್ಲಾ ಅದ್ವಾನಗಳಿಗೆ ಇವರೇ ಕಾರಣ

ದಾವಣಗೆರೆ ಜಿಲ್ಲೆಯ ತುಂಬ ಬಿ.ಜೆ.ಪಿ.ಗಳದ್ದೇ ಅವ್ಯವಹಾರ ನಡೆಯುತ್ತಿರುವಾಗಲೇ ಮಂತ್ರಿ ರವೀಂದ್ರನಾಥಗೆ ಜಿಲ್ಲೆ ಉಸ್ತುವಾರಿಗೆ ನೀಡಲಾಗಿದೆ. ಪಾಲಿಕೆಯಲ್ಲಿ ಇಷ್ಟೊಂದು ಹಗಲು ದರೋಡೆ ನಡೆಯುತ್ತಿದ್ದರೂ




ರವೀಂದ್ರನಾಥ ಮಾತ್ರ ತನಗೆ ಇದು ಸಂಬಂದಿಸಿದ್ದಲ್ಲ ಎನ್ನುವವರಂತೆ ತೆಪ್ಪಗಿದ್ದಾರೆ. ಸಂಸದ ಸಿದ್ದೇಶ್ ನೋಡದವರಂಗೆ ಬೆಪ್ಪುತನ ಪ್ರದರ್ಶಿಸುತ್ತಿದ್ದಾರೆ.

ರಾಜ್ಯದಲ್ಲಾಗುತ್ತಿರುವ ಬಿ.ಜೆ.ಪಿ. ಗುಂಪುಗಾರಿಕೆ ರಾಜಕೀಯ ದೇವನಗರಿಯನ್ನೂ ನುಂಗಿಹಾಕಿದೆ. ಮಂತ್ರಿ ರವೀಂದ್ರನಾಥ ಮತ್ತು ಮಾಯಕೊಂಡದ ಶಾಸಕ ಬಸವರಾಜನಾಯ್ಕ ಬಿ.ಜೆ.ಪಿ. ಪಾರ್ಟಿಯ ಕೋಮುಸಿದ್ಧಾಂತಿಗಳಂತೆ ಇದ್ದಾರೆ. ಸಂಸದ ಸಿದ್ದೇಶ್, ಹರಿಹರದ ಹರೀಶ್, ಜಗಳೂರಿನ ರಾಮಚಂದ್ರ ಮತ್ತು ಹೊನ್ನಾಳಿಯ ರೇಣುಕ, ಚೆಡ್ಡಿ ಯಡ್ಡಿಯ ಪರಮಾಪ್ತ ಗುಂಪಿನಲ್ಲಿ ಗುರುತಿಸಿಕೊಂಡವರು. ಇಲ್ಲಿ ಸಂಸದ ಸಿದ್ದೇಶಿ ಮತ್ತು ಮಂತ್ರಿ ರವೀಂದ್ರನಾಥರಿಗೆ ಎಣ್ಣೆ-ಸೀಗೆಕಾಯಿ ವೈರತ್ವ, ಪಾಲಿಕೆ ಕೆಟ್ಟರೆ ರವೀಂದ್ರನಾಥ ನೆತ್ತಿಗೇ ಇರಲಿ ಎನ್ನುವ ಕುತಂತ್ರಿ ಸಿದ್ದೇಶ್. ರವೀಂದ್ರನಾಥನಂತೂ ವಿಚಿತ್ರ ಮನುಷ್ಯ ರವೀಂದ್ರನಾಥನಿಗೆ ಮೂರುಬಾರಿ ಮಂತ್ರಿಯಾಗುವ ಅದೃಷ್ಟ ಬಂದದ್ದೇ ಸಾದುಲಿಂಗಾಯಿತರ ಕೋಟಾದಲ್ಲಿ, ಸ್ವಜಾತಿ ಮಠ ಸದ್ದರ್ಮಪೀಠದ ಜಗದ್ಗುರುವಿನ ಫರ್ಮಾನಿನಿಂದ.

ಇನ್ನು ಸಚೇತಕನಾದ ಶಿವಯೋಗಿಸ್ವಾಮಿಯಂತೂ ಸಮಯ ಸಾಧಕನ ಪಾತ್ರ ನಿರ್ವಹಿಸುತ್ತಿದ್ದಾರೆ. ಮಂತ್ರಿಯೆಂದರೆ ರವೀಂದ್ರನಾಥ, ಸಂಸದನೆಂದರೆ ಸಿದ್ದೇಶಿ ಎನ್ನುವುದಷ್ಟೆ ಈತನ ಜಪ. ಯಾರೊಂದಿಗೂ ಎಡವಟ್ಟು ಮಾಡಿಕೊಳ್ಳಲು ತಯಾರಿರದಷ್ಟು ಜಾಣ ಜಂಗಮ.

ನಿರ್ಲಜ್ಜರನ್ನು, ಘಟಿಂಗರನ್ನು ಆಯ್ಕೆ ಮಾಡಿದ ತಪ್ಪಿಗೆ ಮತದಾರ ಈಗ ಪರಿತಪಿಸುವುದೊಂದೇ ಬಾಕಿ.

ದಾವಣಗೆರೆ ನಗರ ಪಾಲಿಕೆ ಕಡುಭ್ರಷ್ಟ ಕಮಿಷನರ್ ಪ್ರಸನ್ನ ಕುಮಾರ್



ದಾವಣಗೆರೆ ಮಹಾನಗರ ಪಾಲಿಕೆಯ ಮೇಲೆ ಲೋಕಾಯುಕ್ತರು ರೇಡು ಬಿದ್ದರೆ ಪಾಲಿಕೆಯ ಕಟ್ಟಡವನ್ನೇ ಜೈಲಾಗಿ ಪರಿವರ್ತಿಸಬೇಕಾಗುತ್ತದೆ. ಇಲ್ಲಿನ ಗುಮಾಸ್ತ ನಿಂದಾ ಹಿಡಿದು ಕಮೀಶನರವರೆಗೆ, ಆಡಳಿತ ಮಾಡುವ ಬಿ.ಜೆ.ಪಿ. ಸದಸ್ಯರನ್ನೆಲ್ಲಾ ಒಂದೇ ಸೂರಿನಡಿ ಬಂಧಿಸಿ ಬಿಡುವುದು ಗ್ಯಾರಂಟಿ. ದಾವಣಗೆರೆಯಲ್ಲಿ ನೀರಿನ ಹಾಹಾಕಾರವೆದ್ದಿದೆ, ಜನ ಬೀದಿಗಿಳಿದಿದ್ದಾರೆ, ಕಾಂಗ್ರೆಸ್ ಸದಸ್ಯರು ಧರಣಿ ನಿರತರಾಗಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಇದನ್ನೆಲ್ಲ ನಿರ್ಲಕ್ಷ್ಯವಹಿಸುತ್ತಿದ್ದರೆ ಮಂತ್ರಿ ರವೀಂದ್ರನಾಥ ಮಾತ್ರ ಬರ ಸಮೀಕ್ಷೆಯ ನೆಪದಲ್ಲಿ ಆದೆಲ್ಲಿಗೊ ತೊಲಗಿದ್ದಾರೆ. ದಾವಣಗೆರೆಯ ಬವಣೆಯನ್ನು ಈಗ ದುಗ್ಗಮ್ಮನೇ ಕಾಪಾಡಬೇಕು.



ಪಾಲಿಕೆಯಲ್ಲಿ ಬಿ.ಜೆ.ಪಿ. ಕಳ್ಳರ ಕೂಟ

ದೇವನಗಿರಿಯ ಮತದಾರ ನಾಲ್ಕುವರ್ಷಗಳ ಹಿಂದೆ ದಾವಣಗೆರೆ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ನಕಲೀ ದೇಶಭಕ್ತರ ಭಾರತೀಯ ಜನತಾ ಪಾರ್ಟಿಯನ್ನು ಅದ್ದೂರಿಯಾಗಿಯೇ ಸ್ವಾಗತಿಸಿದ್ದರು.

ಅದುವರೆವಿಗೂ ದೇವನಗರಿಯ ಖಾಯಂ ಧಣಿಯಾಗಿ ಬಿಟ್ಟಿದ್ದ ಶಾಮನೂರು ಶಿವಶಂಕರಪ್ಪರ ಎದುರು ಈ ಚೆಡ್ಡಿ ಪಾರ್ಟಿಯ ಕೇಸರೀ ರಾಜಕಾರಣ ಎದ್ದು ನಿಲ್ಲಲು ಸಾಧ್ಯವಾಗಿರಲಿಲ್ಲ, ತಂದೆಯ ರಾಜಕಾರಣವೇ ಮಗ ಮಲ್ಲಿಕಾರ್ಜುನರ ರಾಜಕಾರಣಕ್ಕೆ ರಹದಾರಿಯಾದದ್ದು ಮಲ್ಲಿಕಾರ್ಜುನ ಕೂಡಾ ದೇವನಗರಿಯಲ್ಲಿ ಕೇಸರಿ ಪಕ್ಷದ ಮೊಳಕೆಗೆ ಅವಕಾಶ ನೀಡಲಿಲ್ಲ, ಶಾಸಕರಾಗಿ-ಮಂತ್ರಿಯಾಗಿ ದೇವನಗರಿಯ ಅಭಿವೃದ್ಧಿಯ ಕಡೆ ಗಮನ ಹರಿಸುವ ಮೂಲಕ ಮತದಾರನ ಮನಸ್ಸು ಗೆದ್ದು ಸೈ ಎನಿಸಿಕೊಂಡಿದ್ದರು. ಆದರೆ ಅದೇನಾಯಿತೋ ಏನೋ ಇದ್ದಕ್ಕಿದ್ದಂತೆ ಚೆಡ್ಡಿಗಳ ಕೇಸರಿ ರಾಜಕಾರಣದ ಗಾಳಿ ರಾಜ್ಯದ ರಾಜಧಾನಿಯಲ್ಲಿ ಬೀಸಿದ್ದೇ ತಡ ದೇವನಗರಿಯನ್ನೂ ಆವರಿಸಿತ್ತು, ಜೆ.ಡಿ.ಎಸ್.ನ ತಂದೆ-ಮಗ ಯಡ್ಡಿಗೆ ಟಾಂಗ್ ಕೊಟ್ಟರೆಂಬುದೇ ವೀರಶೈವ ಸಮುದಾಯದಲ್ಲಿ ಸಿಂಪತಿಯ ಸಂಚಲನ ಸೃಷ್ಟಿಸಿಬಿಟ್ಟಿತು.




ಹಾಗಾಗಿಯೇ ದಾವಣಗೆರೆ ಮಹಾನಗರ ಪಾಲಿಕೆಯ ಒಟ್ಟು 41 ಸಂಖ್ಯಾಬಲದಲ್ಲಿ ಬಿ.ಜೆ.ಪಿ. 24, ಕಾಂಗ್ರೆಸ್ 12, ಜೆ.ಡಿ.ಎಸ್. 5 ಸ್ಥಾನಗಳ ಗೆಲುವಿಗೆ ಮತದಾರ ಅಸ್ತು ಎಂದು ಬಿಟ್ಟಿದ್ದ. ಅರವತ್ತು ವರ್ಷಗಳಿಂದ ಅಧಿಕಾರದ ಹಸಿವಿನಲ್ಲಿದ್ದ ಚೆಡ್ಡಿಗಳಿಗೆ ಅಧಿಕಾರ 'ಬಯಸದೇ ಬಂದ ಭಾಗ್ಯದಂತಾಯಿತು. ದಾವಣಗೆರೆ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಏಳು ಕ್ಷೇತ್ರಗಳಲ್ಲಿ ಬಿ.ಜೆ. ಶಾಸಕರೇ ವಿಜೃಂಭಿಸಿದ್ದರು. ಸಾಲದಕ್ಕೆ ಸಂಸದರಾಗಿ ಸಿದ್ದೇ ಮೆರೆದು ಬಿಟ್ಟಿದ್ದರು, ಶಾಮನೂರು ಶಿವಶಂಕರಪ್ಪ ವ ಜಗಳೂರಿನ ರಾಮಚಂದ್ರ ಮಾತ್ರ ಕಾಂಗ್ರೆಸಿಗೆ ಗುಟ ಜೀವ ನೀಡಿದ್ದರು. (ನಂತರ ರಾಮಚಂದ್ರ ಬಿ.ಜೆ. ಜಿಗಿದು ಬಿಟ್ರು) ಇಂಥದೊಂದು ಮೆಜಾರಿಟಿ ಪಡೆ ಬಿ.ಜೆ.ಪಿ. ಪಾಲಿಕೆಯಲ್ಲಿ ಭರ್ಜರಿ ಭೋಜನಕ್ಕೆ ಚ ಮಕ್ಕಳ ಕುಂತಿತು.

ಕಳೆದ ನಾಲ್ಕು ವರ್ಷಗಳಲ್ಲಿ ಬಿ.ಜೆ.ಪಿ. ಪಾಲಿ ಘನತೆಯನ್ನೇ ಗಬ್ಬೆಬ್ಬಿಸಿ ಬಿಟ್ಟಿದೆ. ಜಿಲ್ಲೆಯಲ್ಲಿ ಏಳು ಬಿ.ಜೆ.ಪಿ. ಶಾಸಕರು, ರವೀಂದ್ರನಾಥ, ರೇಣುಕ, ಕರುಣಾ ನಂಥ ಪವರ್‌ಫುಲ್ ಮಂತ್ರಿಗಳಿದ್ದರೂ ಪಾಲಿಕೆಯೊ ಲೂಟಿಯನ್ನು ತಡೆಯಲು ಸಾಧ್ಯವಾಗಿಲ್ಲ, ನಾ ವರ್ಷಗಳಿಂದ ಪಾಲಿಕೆಯ ಖರ್ಚಿನ ಕಡತದಲ್ಲಿ ಅಜಮಾ 400 ಕೋಟಿ ಚಿಲ್ಲರೆ ಖರ್ಚಾಗಿ ಹೋಗಿರುವ ದಾ ಯಿದೆ. ದಾವಣಗೆರೆಯ ಯಾವ ಬಡಾವಣೆಯೂ ಉದ್ಧಾ ವಾಗಿಲ್ಲ, ಮಲ್ಲಿಕಾರ್ಜುನ ಮಂತ್ರಿಯಾಗಿದ್ದಾಗ ಕಾಮಗಾರಿಗಳೇ ಈಗಲೂ ಮತದಾರನೆದುರು ಬಿ ತಂದ 'ಬದಲಾವಣೆ'ಯನ್ನು ವ್ಯಂಗ್ಯ ಮಾಡುತ್ತಿವೆ.

ಚುನಾವಣೆಗೂ ಮೊದಲು ಸೈಕಲ್ ಹತ್ತಲಾರದವ ಲಕ್ಷಗಳ ಲಕ್ಷುರೀ ಕಾರು ಖರೀದಿಸಿದ್ದು ಮತದಾರನ ನಡು ಕಾರಣವಾಗಿದೆ. ಪಾಲಿಕೆಯಲ್ಲಿನ ಅಧಿಕಾರಶಾಹಿ ಮ ಆಡಳಿತಶಾಹಿಗಳೆಂಬ ಎರಡು ವ್ಯವಸ್ಥೆಗಳು ಒಂದಾ ಏನಾಗಬಹುದೋ ಅದು ಇಲ್ಲಿ ಆಗಿದೆ.

ಪಾಲಿಕೆಯಲ್ಲಿ ಅಧಿಕಾರಶಾಹಿಯ ಪೊಗ ಪ್ರದರ್ಶಿಸಲೆಂದೇ ಬಂದವನಂತಿರುವ ಕಮ ನರ್ ಪ್ರಸನ್ನಕುಮಾರನೆಂಬ ಕಡುಭ್ರಷ್ಟ ಪಾಲಿಕೆ ಅಡಿಗಲ್ಲುಗಳನ್ನು ನಡುಗಿಸುವಂತೆ ಮೇಯತೊ ಗಿದ್ದಾನೆ. ಅನುಭವವಿರದ ಬಿ.ಜೆ.ಪಿ. ಸದ ಹಸಿವಿನ ಅಧ್ಯಯನ ಮಾಡಿ ಅವರಿಗೆ ಮೇವ ಕುಲಗೆಡಿಸಿಬಿಟ್ಟಿದ್ದಾನೆ. ದಾವಣಗೆರೆಯ ಘಟ ಗಳಲ್ಲಿಯೂ ಕೋಟಿಗಳನ್ನು ಲೂಟಿಮಾಡಿಸಿ ತಾನೂ ಭಜ ಭೋಜನ ಮಾಡುತ್ತಿದ್ದಾನೆ. ನಿವೃತ್ತಿಗೆ ಮೂರು ತಿಂ ಬಾಕಿ ಇರುವುದರಿಂದ ಕೊನೆಗಾಲವೆಂದು ಪಾಲಿಕೆಯ ಬಿ.ಜೆ.ಪಿ. ಸದಸ್ಯರನ್ನು ಮುಂದೆಂದೂ ರಿಪೇರಿಯಾಗದ ಮಟ್ಟಿಗೆ ಅದ್ವಾನ ಎಬ್ಬಿಸಿದ್ದಾನೆ ಪ್ರಸನ್ನ.

ಕೊಪ್ಪಳ: ವಕ್ಫ್ ಆಸ್ತಿ ಕಬಳಿಕೆ ಮಾನಪ್ಪಾಡಿ ವರದಿ ಬರೀ ಓಳು.. ಅನ್ಸಾರಿ ಬೇಕಸರ್...



ಗಂಗಾವತಿಯಲ್ಲಿ ಇಕ್ಬಾಲ್ ಅನ್ಸಾರಿ ವಕ್ಫ್ ಆಸ್ತಿ ಕಬಳಿಸಿದ್ದಾರೆಂಬ ಚೆಡ್ಡಿಗಳ ಆರೋಪ ಸುಳ್ಳೆಂದು ಈಗ ಸಾಬೀತಾಗಿದೆ.

ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿದಂತೆ ಬಿಜೆಪಿಗಳಿಗೆ ನಡುಕ ಶುರುವಾಗಿದೆ. ಕಳೆದ ಬಾರಿ ಚೆಡ್ಡಿಗಳನ್ನು ಗೆಲ್ಲಿಸಿದ್ದ ಲಿಂಗಾಯತರು - ಅದರಲ್ಲೂ ಬಹು ಸಂಖ್ಯಾತರಾದ ಪಂಚಮಸಾಲಿಗಳು - ಬಿಜೆಪಿಗಳ ಭ್ರಷ್ಟಾಚಾರ, ಅಧಿಕಾರಕ್ಕಾಗಿನ ಕಿತ್ತಾಟ ಕಂಡು ಬೇಸತ್ತಿದ್ದಾರೆ, ಅನ್ಯ ಪಕ್ಷಗಳತ್ತ ವಾಲುವ ಸೂಚನೆಗಳು ಕೊಡುತ್ತಿದ್ದಾರೆ. ಇದರಿಂದ ಹತಾಶರಾಗಿರುವ ಚೆಡ್ಡಿಗಳು ತಮ್ಮ ಕಟ್ಟಾ ವಿರೋಧಿ ಮುಸ್ಲಿಂ ಮತಗಳನ್ನು ಛಿದ್ರಗೊಳಿಸುವ ಮೂಲಕ ಮತಪೆಟ್ಟಿಗೆಯಲ್ಲಿ ಬಚಾವಾಗುವ ಸಂಚು ರೂಪಿಸುತ್ತಿದ್ದಾರೆ. ಅದರ ಮೊದಲ ಪ್ರಯೋಗವೇ ವಕ್ಫ್ ಆಸ್ತಿ ಕಬಳಿಕೆ ಎಂಬ ಹುಸಿ ಬಾಂಬ್‌ನ್ನು ಎಸೆದಿರುವುದು.



ಮಸೀದಿ, ಮದರಸಾಗಳ ಆಸ್ತಿ ಕಬಳಿಕೆಯ ಆರೋಪಗಳನ್ನು ಮುಸಲ್ಮಾನ ಸಮುದಾಯದ ಮುಖಂಡರ ಮೇಲೆ ಹಾಕುವ ಮೂಲಕ ಇಡೀ ಸಮುದಾಯವನ್ನ ಒಡೆದಾಳುವ ಕೆಲಸಕ್ಕೆ ಚೆಡ್ಡಿ ಕೊಳ್ಳಿ ದೆವ್ವಗಳು ಸಜ್ಜಾಗಿ ನಿಂತಿವೆ. ಈ ಕೆಲಸಕ್ಕೆ ಬಳಕೆಯಾಗುತ್ತಿರುವುದೂ ಒಬ್ಬ ಮುಸ್ಲಿಂ ಮುಖಂಡನೇ ಎಂಬುದು ದುರಂತವೇ ಸರಿ.

ಬಿಜೆಪಿಯಲ್ಲಿ ನಾಮಕಾವಸ್ತೆ ಎಂಬಂತಿರುವ ಅಲ್ಪಸಂಖ್ಯಾತ ಘಟಕದ ಮುಖಂಡ ಆಗಿರುವವನೇ ಅನ್ವರ್ ಮಾನಪ್ಪಾಡಿ. ಈತ ಆರೆಸ್ಸೆಸ್ಸಿನ ಹೆಡ್ ಆಫೀಸ್ ಕೇಶವ ಕೃಪಾದಿಂದ ಹೊರಬೀಳುವ ಆದೇಶಗಳನ್ನು ಹುಟ್ಟಾ ಚೆಡ್ಡಿ ಪ್ರಚಾರಕನಂತೆ ಪಾಲಿಸುತ್ತಾನೆ. ಈಗ ಹಿರಿಯ ಚೆಡ್ಡಿಗಳ ಆದೇಶದಂತೆ ಈ ಅನ್ವರ್ ಮಾನಪ್ಪಾಡಿ ರಾಜ್ಯದ ಅಲ್ಪಸಂಖ್ಯಾತ ಮುಸಲ್ಮಾನರ ಮುಖಂಡರ ಪಟ್ಟಿ ಹಿಡಿದು ಪ್ರತಿಯೊಬ್ಬರ ಮೇಲೂ ನೂರಾರು ಕೋಟಿ ರೂಪಾಯಿಗಳ ವಕ್ಫ್ ಆಸ್ತಿ ಕಬಳಿಕೆಯ ಆರೋಪವನ್ನು ಹೊರಿಸಿದ್ದಾನೆ.

ತಾನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಪ್ರತಿಯೊಂದು ಅಂಶವೂ ಸೂರ್ಯನಷ್ಟೇ ಸತ್ಯ ಎಂದು ಈ ಮುಸಲ್ಮಾನ ಚೆಡ್ಡಿ ವಾದಿಸುತ್ತಿದ್ದರೂ ಹಲವು ದಾಖಲೆಗಳು ಮಾತ್ರ ಇವನು ಹೇಳುತ್ತಿರುವುದು ಸುಳ್ಳಿನ ಕಂತೆ ಎಂಬುದನ್ನ ಬೆತ್ತಲಾಗಿಸುತ್ತಿವೆ. ರಾಜ್ಯದ ವಿವಿಧ ಜಿಲ್ಲೆಯ ಬಿಜೆಪಿ ಮುಖಂಡರುಗಳು ತಮ್ಮ ಕೆಲವು ತಲೆ ಕೆಟ್ಟ ಮುಸಲ್ಮಾನರ ಮೂಲಕ ಮಾನಪ್ಪಾಡಿಯ ಕೈಗಿಡಿಸಿದ ಖೊಟ್ಟಿ ದಾಖಲೆಗಳನ್ನು ಆಧಾರಿಸಿಯೇ ತಯಾರಿಸಿದ ವರದಿಯನ್ನೇ ಸರ್ಕಾರಕ್ಕೆ ಸಲ್ಲಿಸಿ ಪುಕ್ಕಟೆ ಪ್ರಚಾರಪಡೆಯುತ್ತಿದ್ದಾನೆ. ತಾನು ಸಲ್ಲಿಸಿರುವ ವರದಿಯು ನಮ್ಮ ದೇಶ ಕಂಡ ಅತಿದೊಡ್ಡ ಹಗರಣ ಎಂದು ಚೆಡ್ಡಿಗಳಿಂದ ಬೊಬ್ಬೆ ಹಾಕಿಸುತ್ತಿದ್ದಾನೆ. ಆದರೆ ಈ ವರದಿ ಆರೋಪಿಸಿರುವುದನ್ನು ಕೊಪ್ಪಳ ಜಿಲ್ಲೆಯ ಮಟ್ಟಿಗೆ ನೋಡುವುದಾದರೆ, ಇದು ಸುಳ್ಳಿನ ಕಂತೆ ಎಂಬುದು ಸ್ಪಷ್ಟವಾಗುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿ ಬಹುಸಂಖ್ಯಾತರಾಗಿರುವ ಮುಸ್ಲಿಮರು ಅನಕ್ಷರತೆ ಮತ್ತು ಬಡತನ ಎಂಬ ಅವಳಿ ಬೇಗುದಿಯಡಿ ನರಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆ ಜನರಿಗೆ ನೆಮ್ಮದಿ ಎಂಬುದು ಸಿಗುತ್ತಿರುವುದು ಅವರ ಧಾರ್ಮಿಕ ತಾಣಗಳಿಂದ. ಪರಿಸ್ಥಿತಿ ಹೀಗಿರುವಾಗ ಅವರ ಸಮುದಾಯದ ಮುಖಂಡರೇ ತಮ್ಮ ಧಾರ್ಮಿಕ ತಾಣಗಳಲ್ಲಿ ಅವ್ಯವಹಾರ ನಡೆಸಿದ್ದಾರೆ ಎಂದರೆ ಆ ಜನರಿಗೆ ಆಕ್ರೋಶ ಉಂಟಾಗುವುದಿಲ್ಲವೆ? ಬಂದೇ ಬರುತ್ತದೆ. ಅದು ಗೊತ್ತಿರುವುದರಿಂದಲೇ ಮುಸಲ್ಮಾನ ಸಮುದಾಯದ ಕೆಲ ಮುಖಂಡರ ಮೇಲೆ ಭ್ರಷ್ಟಾಚಾರದ ಗೂಬೆ ಕೂರಿಸುವ ಕೆಲಸಕ್ಕೆ ಅನ್ವರ್ ಮಾನಪ್ಪಾಡಿ ಕೈ ಹಾಕಿದ್ದಾನೆ. ಹಿಂದುಳಿದ ಕೊಪ್ಪಳ ಜಿಲ್ಲೆಯ ಏಕೈಕ ಮುಸ್ಲಿಂ ಪ್ರಭಾವಿ ಮುಖಂಡ ಮಾಜಿ ಮಂತ್ರಿ ಇಕ್ಬಾಲ್ ಅನ್ಸಾರಿಯ ಮೇಲೆ ವಕ್ಫ್ ಆಸ್ತಿಯ ಕಬಳಿಕೆಯ ಅಸ್ತ್ರವನ್ನು ಪ್ರಯೋಗಿಸುವುದರ ಮೂಲಕ ಇಲ್ಲಿನ ಜನರ ಮನಸ್ಸಿಗೆ ಕೊಳ್ಳಿ ಇಟ್ಟಿದ್ದಾನೆ.

ಅನ್ಸಾರಿಯ ಮೇಲೆ ಮೂರು ಆಸ್ತಿ ಕಬಳಿಕೆಯ ಆರೋಪವನ್ನು ವರದಿಯಲ್ಲಿ ಮಾಡಲಾಗಿದೆ. ಗಂಗಾವತಿಯ ಜಾಮಿಯಾ ಮಸೀದಿ ಜಾಗೆಯನ್ನು ನುಂಗಿ ಅಲ್ಲಿ ಐಟಿಐ ಕಾಲೇಜು ಕಟ್ಟಿದ್ದಾರೆ ಎಂಬುದು ಒಂದು ಆರೋಪವಾದರೆ, ಬೇರೋನಿ ಮಸೀದಿಯ ಜಾಗದಲ್ಲಿ ಒಂದಿಷ್ಟು ಜಾಗವನ್ನು ದಲಿತರಿಗೆ ನೀಡಿ ಅವರಿಂದ ಸಿಂಪತಿ ಗಿಟ್ಟಿಸಿಕೊಂಡಿದ್ದಾರೆ ಎಂಬುದು ಎರಡನೆ ಆರೋಪವಾಗಿದೆ. ಮೂರನೆಯದು ಅದೇ ಬೇರೂನಿ ಮಸೀದಿ ಜಾಗದಲ್ಲಿ ಆಸ್ಪತ್ರೆ ಕಟ್ಟುವ ನೆಪದಲ್ಲಿ ಜಾಗ ನುಂಗಿ ಹಾಕಿದ್ದಾರೆ ಎನ್ನುವುದು. ಆದರೆ ಈ ಮೂರೂ ಆರೋಪಗಳ ಅಸಲಿಯತ್ತನ್ನು ಪರೀಕ್ಷಿಸುತ್ತಾ ಹೋದರೆ ಅಲ್ಲಿರುವ ನಿಜ ಸಂಗತಿಯೇ ಬೇರೆ ಎನ್ನುವುದು ಸ್ಪಷ್ಟವಾಗುತ್ತದೆ.

ಸರ್ಕಾರಿ ದಾಖಲೆಗಳೇ ಹೇಳುವಂತೆ ಗಂಗಾವತಿಯ ಜಾಮಿಯಾ ಮಸೀದಿಗೆ ಅಲ್ಲಾಭಕ್ಷ ಎಂಬುವವರು ೧೯೮೩ರಲ್ಲಿ ಎರಡು ಎಕರೆ ಜಾಗವನ್ನು ದಾನವಾಗಿ ಬರೆದುಕೊಟ್ಟಿದ್ದರು. ಆದರೆ ಈ ಜಾಗೆ ರಾಜ್ಯ ವಕ್ಫ್ ಮಂಡಳಿಯಲ್ಲಿ ದಾಖಲಾಗಿರಲಿಲ್ಲ, ಎಷ್ಟೋ ವರ್ಷ ಆರ್ಥಿಕ ತೊಂದರೆಯಿಂದ ಈ ಜಾಗೆಯ ಅಭಿವೃದ್ಧಿ ಕೂಡ ಆಗಿರಲಿಲ್ಲ, ಪಾಳು ಬಿದ್ದ ಈ ಜಮೀನಿನ ಭಾಗವನ್ನು ಪಕ್ಕದಲ್ಲೇ ಇದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಅತಿಕ್ರಮಿಸಿಕೊಂಡಿತ್ತು, ಈ ಜಾಗವನ್ನು ಅಭಿವೃದ್ಧಿಪಡಿಸುವಾಗ ತಾನು ಅತಿಕ್ರಮಣಮಾಡಿಕೊಂಡಿದ್ದ ಜಾಗೆಯನ್ನು ಎಪಿಎಂಸಿ ಬಿಟ್ಟುಕೊಡಲಿಲ್ಲ, ನಂತರ ೧೯೯೮ರಲ್ಲಿ ಆಗಿನ ಸಂಸದ ಬಸವರಾಜ ರಾಯರೆಡ್ಡಿ ಅವರು ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಚರ್ಚಿಸಿ ಈ ಸಮಸ್ಯೆಗೊಂದು ಪರಿಹಾರ ಕಲ್ಪಿಸಿದ್ದರು.

ಆ ಪರಿಹಾರ ಸೂತ್ರದ ಪ್ರಕಾರ ಅತಿಕ್ರಮಣಗೊಂಡ ಜಾಗೆಗೆ ಪರ್ಯಾಯವಾಗಿ ಕನಕಗಿರಿ ರಸ್ತೆಯಲ್ಲಿ ಭೂಮಿಯೊಂದನ್ನು ಮಸೀದಿಗೆ ಪಡೆಯಲಾಯಿತು. ಆ ಸಮಯದಲ್ಲೂ ತನ್ನ ಜಾಗೆಯನ್ನು ಅಭಿವೃದ್ಧಿಪಡಿಸಲು ಮಸೀದಿ ಕಮಿಟಿ ಆರ್ಥಿಕ ಸಂಕಷ್ಟವನ್ನು ಎದುರಿಸಿತು. ಖಾಲಿಯಿದ್ದ ಜಾಗೆಯನ್ನು ಸಾರ್ವಜನಿಕ ಉಪಯೋಗಕ್ಕೆ ನೀಡುವಂತೆ ೨೦೦೩ರಲ್ಲಿ ಇಕ್ಬಾಲ್ ಅನ್ಸಾರಿ ಅವರ ಎಜುಕೇಶನ್ ಟ್ರಸ್ಟ್‌ನ ಗಂಗೋತ್ರಿ ಐಟಿಐ ಕಾಲೇಜಿಗೆ ಬಾಡಿಗೆಯಂತೆ ಕೇಳಿತ್ತು, ನಂತರ ೨೦೦೭ ಮಾರ್ಚ್ ೩ ರಂದು ಮಸೀದಿ ಕಮಿಟಿ ತಿಂಗಳಿಗೆ ೧೧೦೦೦ ರೂ. ಮೇಲೆ ಅದನ್ನು ಬಾಡಿಗೆ ನೀಡಿತು.

ಆಗ ಮಸೀದಿ ಕಮಿಟಿಯ ಅಧ್ಯಕ್ಷ ಮಹಮ್ಮದ್ ಸಾಬ ಸಂಪಂಗಿ, ಕಾರ್ಯದರ್ಶಿ ಮೌಲಾಸಾಬ ಮತ್ತು ಇತರೆ ಸದಸ್ಯರು ಇಕ್ಬಾಲ್ ಅನ್ಸಾರಿ ಅವರ ಎಜುಕೇಶನ್ ಟ್ರಸ್ಟ್‌ಗೆ ಹಲವು ಕಂಡೀಶನ್‌ಗಳನ್ನು ಕೂಡ ಹಾಕಿತ್ತು, ಅವೇನೆಂದರೆ ಗಂಗೋತ್ರಿ ಐಟಿಐ ಕಾಲೇಜಿಗೆ ಅವಶ್ಯವಿರುವ ಕಾಲೇಜು ಕಟ್ಟಡವನ್ನು ಅನ್ಸಾರಿ ಅವರ ಟ್ರಸ್ಟ್ ತನ್ನ ಸ್ವಂತ ಖರ್ಚಿನಲ್ಲೇ ಕಟ್ಟಬೇಕು, ಖರ್ಚಿನ ಹಣವನ್ನು ತಿಂ ಬಾಡಿಗೆ ಹಣದಲ್ಲಿ ವಜಾ ಮಾಡಿಕೊಳ್ಳಬೇಕು. ಒಂ ವೇಳೆ ಮಸೀದಿ ಕಮಿಟಿ ಮುಂದೆ ಕಾಲೇಜು ಪ್ರಾರಂಭಿಸ ತೀರ್ಮಾನಕ್ಕೆ ಬಂದರೆ, ಕಟ್ಟಡ ಸೇರಿದಂತೆ ಬ ಮಾಡಿಕೊಳ್ಳುತ್ತಿರುವ ಜಾಗೆಯನ್ನು ತೆರವುಗೊಳಿಸಬೇಕೆ ಷರತ್ತುಗಳನ್ನು ಅಂದಿನ ಒಪ್ಪಂದ ಪತ್ರದಲ್ಲಿ ಕಾಣಿಸಲಾಗಿ ಈ ಒಪ್ಪಂದಗಳಂತೆಯೇ ಎಲ್ಲವೂ ನಡೆದು ಬಂದಿ ಹೀಗಿರುವಾಗ ಇಲ್ಲಿ ಮೋಸ, ಅವ್ಯವಹಾರದ ಮಾ ಎಲ್ಲಿಂದ ಬರುತ್ತದೆ?

ಇನ್ನು ದಲಿತರ ಬೆಂಬಲ ಗಿಟ್ಟಿಸಿಕೊಳ್ಳುವ ಹಾ ಅವರನ್ನು ರಾಜಕೀಯವಾಗಿ ಬಳಸಿಕೊಳ್ಳುವ ಉದ್ದೆ ದಿಂದಲೇ ಬೇರೋನಿ ಮಸೀದಿಯ ಜಾಗವನ್ನು ದಲಿತ ಬಿಟ್ಟುಕೊಟ್ಟಿದ್ದಾರೆ ಎಂಬ ಆರೋಪದ ಉದ್ದೇಶ ಮತ್ತೇ ಅಲ್ಲ, ಈ ಎರಡೂ ಸಮುದಾಯಗಳ ಮಧ್ಯೆ ಕೊ ಇಡುವುದೇ ಈ ಆರೋಪದ ಹಿಂದಿರುವ ತರ್ಕವಾಗಿ

೧೯೭೭ರಲ್ಲಿ ಇದೇ ಮಸೀದಿಯ ಜಾಗ ಸಂಬಂಧಪಟ್ಟಂತೆ ಮುಸ್ಲಿಮರು ಮತ್ತು ದಲಿತರ ಮ ಉಂಟಾಗುತ್ತಿದ್ದ ಜಗಳಗಳು ಮುಂದೆ ದೊ ವಿವಾದವಾಗಿತ್ತು, ಆಗ ಗಲಭೆಗಳಾಗಿ ಎರಡೂ ಕೋವಿ ಜನ ಜೈಲು ಕಂಡು ಬಂದಿದ್ದೂ ಆಗಿತ್ತು, ಗಂಗಾವತಿ ನೆಮ್ಮದಿಯನ್ನು ಹಾಳುಗೆಡವಿದ್ದ ಈ ವಿವಾದಕ್ಕೆ ೧೯ ಆಗಸ್ಟ್ ೧ ರಂದು ತೆರೆ ಎಳೆಯಲಾಗಿತ್ತು, ಅ ಶ್ರಮಿಸಿದ್ದವರು ಮಾಜಿ ಸಂಸದ ಹೆಚ್.ಜಿ.ರಾಮುಲು, ಮಾ ಶಾಸಕ ಗೌಳಿ ಮಹಾದೇವಪ್ಪ ರಂಗದೇವರಾಯಲು, ಭ ಮರಿಯಪ್ಪ ಎಸ್.ಎ.ರವೂಫ್, ಸಾಬ್, ಗಂಗಾವತಿ ಎಲ್ಲ ಮಸೀದಿ ಸಮಿತಿಗಳ ಅಧ್ಯಕ್ಷರು, ದಲಿತ ಮುಖಂಡ ಮತ್ತು ಹಿರಿಯ ಅಧಿಕಾರಿಗಳು. ಇವರೆಲ್ಲರು ಸೇರಿ ವರ್ಷಗಳ ವಿವಾದದ ಅಂತ್ಯಕ್ಕೆ ಒಂದು ಪರಿಹಾರವ ಕಂಡುಹಿಡಿದಿದ್ದರು.

ಆದರಂತೆ ಮಸೀದಿಯ ನಾಲ್ಕು ಸಾವಿರ ಚದರ ಜಾಗೆಯನ್ನು ದಲಿತರಿಗೆ ಬಿಟ್ಟುಕೊಟ್ಟು ಅದರಲ್ಲಿ ವಾಣಿ ಮಳಿಗೆಯನ್ನು ನಿರ್ಮಿಸಲು ಒಪ್ಪಿಗೆಯನ್ನು ನೀಡಲಾಗಿ



"ಇನ್ನೊಬ್ಬ ಸುಜಯಕುಮಾರನೆಂಬ ಅಧ್ವಾದಿ ಇಂಜಿನಿಯರ್ ಮಾಡಿದ್ದೇ ಕಾಮಗಾರಿ, ಹರಿದಷ್ಟೆ ಬಿಲ್ಲು ಎನ್ನುವಂತಾಗಿದೆ. ಒಂದೇ ಕಾಮಗಾರಿಗೆ ಎರಡೆರಡು ನಾಮಕರಣ ಮಾಡಿ ಲಕ್ಷಗಳನ್ನೇ ಕೋಟಿಗಳಾಗಿ ಪರಿವರ್ತಿಸುವ, "ರಸ್ತೆ ಬದಿಯ ...ಮತ್ತು ನೀರು ಚರಂಡಿ" ಎಂದು ಲೂಟಿಗೆ ಹೊಸ ... ನೀಡಿದ, ಇಂಥಾ ದಗಲುಬಾಜಿ ಕಾಮಗಾರಿಯಲ್ಲೇ ಚಿಲ್ಲರೆ ಕೋಟಿಯನ್ನು ಅಧಿಕಾರಿಗಳೂ ಮತ್ತು ...ಜಿ.ಯವರು ಒಟ್ಟಿಗೆ ಚಪ್ಪರಿಸಿದ್ದಾರೆ.

...ನ್ನು ಎ.ಡಿ.ಮಂಜಪ್ಪನೆಂಬ ಪಳಗಿದ ಕಂದಾಯಾಧಿಕಾರಿ ...ಕೆಯ ಆದಾಯದ ಮೂಲವನ್ನೇ ಕರಗತಮಾಡಿ ...ವನು. ಅಜಮಾಸು ಎರಡು ದಶಕಗಳಿಂದ ಇಲ್ಲಿ ಕಲೆಕ್ಟರಾಗಿದ್ದವನು ಈಗ ಪಾಲಿಕೆಯಲ್ಲಿ ...ಯಾಧಿಕಾರಿ ಆಗಿದ್ದಾನೆ. ಬರೀ ಅಷ್ಟೇ ಅಲ್ಲ, ...ಜರ್, ಉಪಆಯುಕ್ತ ಪರಿಷತ್ ಕಾರ್ಯದರ್ಶಿಗಳೆಂಬ ...ರುದಸ್ತಾದ ಈತ ಹುದ್ದೆಗಳನ್ನು ಹೆಚ್ಚುವರಿಯಾಗಿ ...ಯಿಸುತ್ತಿದ್ದಾನೆಂದರೆ ಪಾಲಿಕೆಯ ಆಡಳಿತ ಎಂಥಾ ...ನಸ್ಥೆ ಸ್ಥಿತಿ ತಲುಪಿದೆ ಎಂದು ನೀವೇ ಊಹಿಸಿನೋಡಿ. ...ಮಂಜಪ್ಪ ಖಾತಾ ಬದಲಾವಣೆಯಲ್ಲಿ ಎತ್ತಿದ ಕೈ. ...ಪ್ರತಿ ನಾನ್ನೂರು ಖಾತಾ ...ಗಳು ಇವನೆದುರು ...ಬೀಳುತ್ತವೆ. ಪ್ರತೀ ...ಗಿವನು ತಿನ್ನುವ ಅಮೇಧ್ಯ ... ರೂಪಾಯಿ. ಇದರಲ್ಲೂ ...ಶನರ್ ...ಕುಮಾರನಿಗೆ ಪಾಲು ...ಬೇಕು.



...ಟ್ಯಾರೆ ಪಾಲಿಕೆಯ ...ನ್ಯ ಗುಮಾಸ್ತನೂ ಇವತ್ತು ಕೋಟಿಗಳ ವೀರ. ...ಮನೆಯಂತಾ ಮನೆಗಳು, ಐಷಾರಾಮಿ ಕಾರುಗಳು, ... ಬಾಳುವ ಫ್ಲಾಟು, ಕಟ್ಟಿಕೊಂಡವಳು ಇಟ್ಟುಕೊಂಡವಳ ...ಲ್ಲಿ ಎಲ್ಲರೂ ಭರ್ಜರಿ ಆದಾಯ ಮಾಡಿಕೊಳ್ಳುತ್ತಿದ್ದಾರೆ. ...ಮತದಾರ ಈಗ ಬುದ್ಧಿವಂತನಾದರೇನು ಬಂತು? ... ಹೋದಮೇಲೆ ದಿಡ್ಡೀಬಾಗಿಲು ಹಾಕಿದಂತಾಗುತ್ತದಷ್ಟೇ.

• ಟಿ.ಎಸ್.ಷಣ್ಮುಖ

...ರೆ. ಈ ಭೂಮಿಯನ್ನು ದಲಿತರಿಗೆ ಕೊಡಿಸುವಲ್ಲಿ ...ರಿಯವರ ಕೈವಾಡವಿದೆ ಎಂದು ಆರೋಪಿಸದಲಾಗಿದೆ. ...ಸ್ತವವಾಗಿ ಇದೆಲ್ಲ ನಡೆದಾಗ ಇಕ್ಬಾಲ್ ಅನ್ಸಾರಿ ಸಕ್ರಿಯ ...ಕಾರಣಕ್ಕೆ ಬಂದಿರಲೇ ಇಲ್ಲ. ಹಾಗಿರುವಾಗ ಅವರ ...ವಾಡ ಎಲ್ಲಿಂದ ಬಂತು? ಇನ್ನು ಗಂಗಾವತಿಯ ಕಡು ...ವ ಗರ್ಭಿಣಿಯರಿಗೆ ಉಚಿತ ಹೆರಿಗೆ ಆಸ್ಪತ್ರೆ ಕಟ್ಟಲು ...ಬಾಲ್ ಅನ್ಸಾರಿ ಸರ್ಕಾರದ ಮೇಲೆ ಒತ್ತಡ ತಂದು ಆ ...ತ್ರೆಗೆ ಮಂಜೂರಾತಿ ಸಿಗುವಂತೆ ಮಾಡಿದ್ದರು. ಆಗ 'ದಿ ... ಚಾರಿಟೇಬಲ್ ಮೆಟರ್‌ನಿಟಿ ಹಾಸ್ಪಿಟಲ್' ಎಂಬ ಹೆಸರಲ್ಲಿ ...ತ್ರೆಯನ್ನು ಪ್ರಾರಂಭಿಸಲು ಮಸೀದಿ ಕಮಿಟಿ ಬೇರೋನಿ ...ಸೀದಿಯ ಜಾಗದಲ್ಲಿ ಒಂದಷ್ಟು ಜಾಗವನ್ನು ನೀಡಿತ್ತು. ... ಈ ಮಧ್ಯೆ ಖಾಸಗಿ ಮೆಡಿಕಲ್ ಮಾಫಿಯಾದ ...ತಂತ್ರದಿಂದಾಗಿ ಈ ಬಡವರ ಆಸ್ಪತ್ರೆಯ ಕಾಮಗಾರಿಗೆ ...ಕಾಗುವಷ್ಟು ಸರ್ಕಾರಿ ಅನುದಾನ ದೊರೆಯಲಿಲ್ಲ. ...ದಕ್ಕಾಗಿ ಅನ್ಸಾರಿ ಮಾಡಿದ ಪ್ರಯತ್ನಗಳಿಗೆ ಫಲ ...ರೆಯುವ ಮುನ್ನವೇ ಜೆಡಿಎಸ್ - ಬಿಜೆಪಿ ನಡುವಿನ ...ತ್ರಿ ಸರ್ಕಾರ ಬಿದ್ದು ಹೋಯಿತು. ಆದರೂ, ಮಸೀದಿಯ ...ಪತಿ ಬೇರೆಡೆಯಿಂದ ಖಾಸಗಿ ಸಾಲ ತಂದು ಕಟ್ಟಡವನ್ನು ...ರ್ಮಿಸಲು ಪ್ರಾರಂಭಿಸಿತಾದರೂ ಆರ್ಥಿಕ ಸಂಕಷ್ಟದಿಂದ ...ಪ ಅರ್ಧಕ್ಕೆ ನಿಂತಿತು. ಆನಂತರ ಮಲ್ಲನಗೌಡರ ಎಂಬುವ ...ಗೆ ಮಸೀದಿ ಸಮಿತಿಯು ಈ ಜಾಗವನ್ನು ತಿಂಗಳಿಗೆ ... ಸಾವಿರ ರೂಪಾಯಿಗಳ ಬಾಡಿಗೆಗೆ ನೀಡಿದೆ. ಅರ್ಧಕ್ಕೆ ...ತಿರುವ ಕಟ್ಟಡವನ್ನು ಪೂರ್ಣಗೊಳಿಸಿಕೊಳ್ಳಲು ಒಪ್ಪಿಗೆ ...ನ್ನೂ ನೀಡಿದೆ. ಹೀಗಿರುವಾಗ ಈ ಮೂರೂ ಆಸ್ತಿಗಳನ್ನು ...ಬಾಲ್ ಅನ್ಸಾರಿ ಹೇಗೆ ನುಂಗಿ ಹಾಕಲು ಸಾಧ್ಯ?


... ಗಂಗಾವತಿಯಲ್ಲಿ ತಾನು ಕಡಿದುಕಟ್ಟೆಹಾಕಿರುವುದು ...ತಹದ್ದೂ ಇಲ್ಲ, ಆದ್ದರಿಂದ ಮುಂದಿನ ಚುನಾವಣೆಯಲ್ಲಿ ...ಲುತ್ತೇನೆ ಎಂದು ಖಾತ್ರಿ ಆಗಿರುವುದರಿಂದಲೇ ಚಿಡ್ಡಿ ...ಸಕ ಪರಣ್ಣ ಮುನವಳ್ಳಿ ಈ ಆಸ್ತಿಗಳನ್ನು ಕುರಿತಂತೆ ...ಟ್ಟ ದಾಖಲೆಗಳನ್ನು ಸೃಷ್ಟಿಸಿದ್ದಾನೆ, ತನ್ನ ಶಿಷ್ಯ ಬಿಜೆಪಿ ...ಲ್ಪ ಸಂಖ್ಯಾತ ಘಟಕದ ರಾಜ್ಯ ಕಾರ್ಯದರ್ಶಿ ಸೈಯದ್ ...ಲಿ ಎಂಬುವನನ್ನು ಮುಂದಿಟ್ಟುಕೊಂಡು ಅವುಗಳು ...ಸಪಾರ್ಟಿಯನ್ನು ತಲುಪುವಂತೆ ನೋಡಿಕೊಂಡಿದ್ದಾನೆ. ... ಮೂಲಕ ಮುಸಲ್ಮಾನ ಸಮುದಾಯದಲ್ಲಿ ಬಿರುಕು ...ಂಟು ಮಾಡಿ, ಮುಸಲ್ಮಾನರು ಹಾಗು ದಲಿತರು ಪರಸ್ಪರ ...ದ್ದಿಗೆ ಬೀಳುವಂತೆ ಮಾಡಿ ಅವೆಲ್ಲದರಿಂದ ತಾನು ...ಜಕೀಯ ಲಾಭ ಮಾಡಿಕೊಳ್ಳಲು ಯತ್ನಿಸಿದ್ದಾನೆ.

... ಕಳೆದ ಮೂರೂವರೆ ವರ್ಷಗಳಿಂದ ಶಾಸಕ ಪರಣ್ಣನ ...ಂಟೆಲೇಜ ಕಾಮಗಾರಿಯನ್ನು ಕಣ್ಣಾರೆ ಕಂಡಿರುವ ...ಗಾವತಿಯ ಜನ ಅನ್ಸಾರಿ ಮೇಲೆ ಹೊರಿಸಿರುವ ...ರೋಪಗಳು ಸುಳ್ಳು ಎಂದು ಅರ್ಥೈಸಿಕೊಳ್ಳುವುದಕ್ಕೆ ...ಜನ ಸಮಯವೇನೂ ಬೇಕಾಗಿಲ್ಲ.

• ಹುರಳಿಕುಪ್ಪಿ ವಿನಯ

ಶಿರಹಟ್ಟಿ

ರಾಮಣ್ಣ ಲಮಾಣಿ ಮಳ್ಳ, ಮಗ ಕಳ್ಳ



ಕಳೆದ ಚುನಾವಣೆ ಸಮಯದಲ್ಲಿ ಕ್ಷೇತ್ರ ಮರುವಿಂಗಡನೆಯಾಗಿ ಶಿರಹಟ್ಟಿ ವಿಧಾನಸಭಾ ಕ್ಷೇತ್ರ ಮೀಸಲು ಕ್ಷೇತ್ರವಾಗಿ ಘೋಷಣೆಯಾಗುತ್ತಿದ್ದಂತೆ ಜಿಲ್ಲಾ ಪಂಚಾಯತಿ ಅಂಗಳದಲ್ಲಿದ್ದ ರಾಮಣ್ಣ ಲಮಾಣಿ ಎಂಬ ಅಬ್ಬೆಪಾರಿ ಮನುಷ್ಯ ಎದ್ದುನಿಂತ. ಯಡಿಯೂರಪ್ಪನ ಜಾತಿ ರಾಜಕಾರಣದಿಂದಾಗಿ ಈ ಲಮಾಣಿ ಶಾಸಕನಾಗಿ ಆಯ್ಕೆಯೂ ಆಗಿಬಿಟ್ಟ. ಆಗಿನಿಂದ ಶುರುವಾದ ಹಗಲು ದರೋಡೆ ಇಂದಿಗೂ ನಿಂತಿಲ್ಲ.

ಈ ಹಿಂದೆ ದನದ ವ್ಯಾಪಾರದ ದಲ್ಲಾಳಿಯಾಗಿದ್ದ ರಾಮಣ್ಣ ಶಾಸಕನಾಗುತ್ತಿದ್ದಂತೆ ಆತನ ಮಗ ಚಂದ್ರು ಶಿರಹಟ್ಟಿ ಫೀಲ್ಡಿಗಿಳಿದು ಇಡೀ ಶಿರಹಟ್ಟಿ ಕ್ಷೇತ್ರವನ್ನು ಅಕ್ಷರಶಃ ಗುಡಿಸಿ ಗುಂಡಾಂತರ ಮಾಡಿಟ್ಟಿದ್ದಾನೆ. ಇದನ್ನು ಕಂಡು ಇಲ್ಲಿಯ ಜನರ "ಅಪ್ಪ ಮಳ್ಳ, ಮಗ ಕಳ್ಳ" ಎಂಬ ಮಾತನ್ನು ಚಾಲ್ತಿಗೆ ತಂದಿದ್ದಾರೆ. ಶಿರಹಟ್ಟಿ ಕ್ಷೇತ್ರದ ಇತಿಹಾಸದಲ್ಲಿ ಆಡಳಿತ ವ್ಯವಸ್ಥೆ ಇಷ್ಟು ಹಡಾಲು ಎದ್ದಿದ್ದೇ ಇಲ್ಲ. ಇದಕ್ಕೂ ಪೂರ್ವದಲ್ಲಿ ಎರಡು ಅವಧಿ ಶಾಸಕರಾಗಿದ್ದ ಜಿ.ಎಸ್. ಗಡ್ಡದೇವರಮಠ, ಗಂಗಣ್ಣ ಮಹಾಂತ ಶೆಟ್ಟರ, ಎಸ್.ಎನ್. ಪಾಟೀಲರಂತಹವರು ಹೆಸರು ಕೆಡಿಸಿಕೊಂಡವರಲ್ಲ. ಆದರೆ ರಣಹಸಿವಿನ ಚಿಡ್ಡಿ ರಾಮಣ್ಣ ವಿಧಾನಸೌಧದ ಮೆಟ್ಟಿಲು ಹತ್ತಿದ ಮರುದಿನದಿಂದಲೇ ಮೇಯಲು ಪ್ರಾರಂಭಿಸಿದ. ಅಧಿಕಾರ ನಡೆಸುವ ಗಂಧಗಾಳಿ ಗೊತ್ತಿರದ ಅನಕ್ಷರಸ್ಥ ರಾಮಣ್ಣ ಹೆಬ್ಬೆಟ್ಟಿನಲ್ಲಿಯೇ ಮೂರುಪಟ್ಟು ಆಸ್ತಿ ಮಾಡುವ ಹುಚ್ಚಿಗಿಳಿದ. ತಾಲೂಕಿನ ಎಲ್ಲ ಅಧಿಕಾರಿಗಳಿಗೆ ಹಫ್ತಾ ಫಿಕ್ಸ್ ಮಾಡಿ ಫರ್ಮಾನು ಹೊರಡಿಸಿದನಲ್ಲದೆ, ತನ್ನ ಮಗ ಚಂದ್ರುನನ್ನೇ ವಸೂಲಿಗೆ ನಿಲ್ಲಿಸಿದ.

ರಾಮಣ್ಣ ಲಮಾಣಿ ಅನಿರೀಕ್ಷಿತವಾಗಿ ರಾಜಕೀಯಕ್ಕೆ ಎಂಟ್ರಿ ಕೊಟ್ಟ ಮನುಷ್ಯ. ಕುಂದ್ರೋಳಿ ತಾಂಡಾದಲ್ಲಿ ಇದ್ದ ಅಲ್ಪ ಸ್ವಲ್ಪ ಜಮೀನನ್ನು ಸಾಗುವಳಿ ಮಾಡುತ್ತಾ ಗದಗ ಜಿಲ್ಲೆಯಲ್ಲಿ ನಡೆಯುವ ವಾರದ ಸಂತೆಯಲ್ಲಿ ಜಾನುವಾರು ಮಾರಾಟದ ಏಜೆಂಟ್ ಅಲಿಯಾಸ್ ದನದ ದಲ್ಲಾಳಿಯಾಗಿದ್ದ ಮನುಷ್ಯ ಈತ. ಈತನಿಗೆ ನಾಲ್ಕು ಜನ ಮಕ್ಕಳು - ಎರಡು ಗಂಡು ಎರಡು ಹೆಣ್ಣು, ಕಿರಿಮಗ ಮಹೇಶ ಉಂಡಾಡಿ ಗುಂಡನಂತಿದ್ದರೆ, ಹಿರಿಮಗ ಚಂದ್ರಶೇಖರ ಅಲಿಯಾಸ್ 'ವಸೂಲಿ ಚಂದ್ರ' ಅಲ್ಪ ಸ್ವಲ್ಪ ಓದಿಕೊಂಡಿರುವವನು.

ಯಾವಾಗ ಗದಗಕ್ಕೆ ಬಳ್ಳಾರಿಯ ರೌಡಿ ಶ್ರೀರಾಮುಲು ಎಂಟ್ರಿ ಕೊಟ್ಟನೋ ಆಗ ಜಿಲ್ಲೆಯಲ್ಲಿ ದುಡ್ಡಿನ ರಾಜಕಾರಣ ಆರಂಭವಾಯಿತು. ಅದೇ ಸಂದರ್ಭದಲ್ಲಿ ರಾಮಣ್ಣ ಲಮಾಣಿ ಮಾಗಡಿ ಜಿಲ್ಲಾ ಕ್ಷೇತ್ರ ಪಂಚಾಯತಿಯಿಂದ ಚುನಾವಣಾ ಅಖಾಡಕ್ಕಿಳಿದ, ಗೆದ್ದೂ ಬಂದ.


ಮುಂದೆ ಒಂದೂವರೆ ವರ್ಷ ಕಳೆಯುವುದರಲ್ಲಿ ಎದುರಾದ ವಿಧಾನಸಭಾ ಚುನಾವಣೆಯಲ್ಲಿ ಶಿರಹಟ್ಟಿ ಕ್ಷೇತ್ರ ಮೀಸಲು ಕ್ಷೇತ್ರವಾಗಿ ಪರಿವರ್ತನೆಗೊಂಡಿತು. ಇದ್ದುದರಲ್ಲೇ ವಾಸಿ ಎಂದು ರಾಮಣ್ಣ ಲಮಾಣಿಯನ್ನು ಕರೆಸಿದ ಶ್ರೀರಾಮುಲು ಖುದ್ದಾಗಿ ಆತನಿಗೆ ಬಿಜೆಪಿಯ ಬಿ ಫಾರ್ಮ್ ಕೊಡಿಸಿದ್ದಲ್ಲದೆ ಅನಾಮತ್ತು 50 ಲಕ್ಷ ರೂ.ಗಳನ್ನೂ ಇವನ ಕೈಗಿಟ್ಟು ಎಲೆಕ್ಷನ್‌ಗೆ ನಿಲ್ಲಿಸಿಬಿಟ್ಟ.

ರಾಮಣ್ಣ ಲಮಾಣಿಯ ವಿರುದ್ಧ ಕಾಂಗ್ರೆಸ್ಸಿನ ಹೆಚ್. ಆರ್ ನಾಯಕ, ಜೆಡಿಎಸ್‌ನ ಅಲ್ಕೋಡ ಹನುಮಂತಪ್ಪ ಪಕ್ಷೇತರ ಅಭ್ಯರ್ಥಿ ಜಯಶ್ರೀ ಹಳ್ಳೆಪ್ಪನವರು ನಿಂತಿದ್ದರಾದರೂ ಈತನ ಹಣ ಬಲದ ಮುಂದೆ ಸೋತರು. ಜೊತೆಗೆ ಬಹುಸಂಖ್ಯಾತರಾದ ಲಿಂಗಾಯತ ಮತಗಳೇ ಹೆಚ್ಚಿರುವ ಈ ಕ್ಷೇತ್ರದಲ್ಲಿ ಯಡಿಯೂರಪ್ಪನ ಜಾತಿ ರಾಜಕಾರಣ ವರ್ಕೌಟ್ ಆಯಿತು. ನೆಟ್ಟಗೆ ಜಿಲ್ಲಾ ಪಂಚಾಯತಿಯ ಕಾರ್ಯಾಲಯವನ್ನೇ ನೋಡಿರದಿದ್ದ ರಾಮಣ್ಣ ವಿಧಾನಸೌಧದ ಮೆಟ್ಟಿಲು ಹತ್ತುವಂತಾಯಿತು.

ಮಾಸ್ತರಕೀ ಬಿಟ್ಟು ಲೂಟಿಗೆ ಬಂದ

ಎಮ್ಮೆ ವ್ಯಾಪಾರದ ರಾಮಣ್ಣ ದನಗಳ ರೇಟು ಫಿಕ್ಸ್ ಮಾಡುವುದರಲ್ಲಿ ನಿಪುಣ. ಆದರೆ ಎಮ್ಮೆ ರೇಟಿಗೂ, ಅಧಿಕಾರಿಗಳ ರೇಟಿಗೂ ವ್ಯತ್ಯಾಸ ಇರುತ್ತದಲ್ಲ, ಪಾಪ ರಾಮಣ್ಣನ ಬುದ್ಧಿಗೆ ಅದು ಎಟುಕದಂತಾಯಿತು. ಅದು ಗೊತ್ತಾಗಿದ್ದೇ ತಡ ಬಾಗಲಕೋಟೆಯ ಕೆಎಸ್‌ಎಸ್ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದ ತನ್ನ ಹಿರಿಯ ಮಗ ಚಂದ್ರಶೇಖರನನ್ನು ಕರೆಸಿ ಫೀಲ್ಡಿಗಿಳಿಸಿದ.


ಎಂಎ ಪದವಿ ಪಡೆದಿದ್ದರೂ, ನೆಟ್ಟಗೆ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲಾಗದೆ, ತನ್ನ ಅಲ್ಪ ವೇತನವನ್ನೆ ಬೇರೊಬ್ಬರಿಗೆ ಕೊಟ್ಟು ಅವರಿಂದ ಪಾಠ ಮಾಡಿಸುತ್ತಿದ್ದ ಪುಟಗೋಸಿ ಮಾಸ್ತರ ಚಂದ್ರಶೇಖರನ ಕೈಗೆ ಎಂಎಲ್‌ಎ ...



...ಗಿರಿನೇ ಸಿಕ್ಕಂತಾಯ್ತು. ಭರ್ತಿ ಆಮದನಿ ತರುವ ಜಿಲ್ಲಾ ಪಂಚಾಯತಿ, ಲೋಕೋಪಯೋಗಿ ಇಲಾಖೆ, ಪೊಲೀಸ್ ಠಾಣೆಗಳಲ್ಲೇ ನಿತ್ಯ ಕಾಣಿಸಿಕೊಳ್ಳುವ ಚಂದ್ರು ಮಡ್ಡು ಎತ್ತುವ ಕಾಯಕವನ್ನು ನಿಯತ್ತಾಗಿ ಅಪ್ಪನ ಹೆಸರಲ್ಲಿ ಮಾಡುತ್ತಿದ್ದಾನೆ. ದೋ ನಂಬರ್ ದಂಧೆಗಳಾದ ನಕಲಿ ಸರಾಯಿ, ಕಳ್ಳಭಟ್ಟಿ, ಮಟ್ಕಾ, ಜೂಜು, ಮಾಂಸದ ಅಡ್ಡೆಗಳು ಈ ಕಳ್ಳ ಮಗನಿಗೆ ತಿಂಗಳಿಗಿಷ್ಟು ಅಂತ ಕೊಟ್ಟು ಬಿಂದಾಸಾಗಿ ನಡೆಯುತ್ತಿವೆ. ಕಾಮಗಾರಿಯಲ್ಲಿ ಕಮೀಷನ್ ಸೇರಿದಂತೆ ವರ್ಗಾವಣೆ ದಂಧೆಗೆ ಅಪ್ಪನ ಲೆಟರ್‌ಹೆಡ್‌ನ್ನು ಬಗಲಲ್ಲೇ ಇಟ್ಟುಕೊಂಡು ತಿರುಗುತ್ತಿರುವ ಈತ ಕಸಾಯಿ ಕರ್ಮಚಾರಿಗಳಿಗೂ ಟ್ರಾನ್ಸಫರ್ ಲೆಟರ್ ಕೊಡುವಂತಹ ಶೂರ.

ಸೈಡಾದ ಲೀಡರ್‌ಗಳು

ಮಗ ಮಾಡಿದ್ದಕ್ಕೆಲ್ಲಾ ಸೈ ಎನ್ನುವ ಶಾಸಕ ರಾಮಣ್ಣ ಲಮಾಣಿ ತನ್ನನ್ನು ರಾಜಕೀಯಕ್ಕೆ ಕರೆತಂದು ನೆಲೆ ಒದಗಿಸಿಕೊಟ್ಟ ಬಹುತೇಕ ಮುಖಂಡರುಗಳನ್ನು ಈಗ ಸೈಡಿಗಿಟ್ಟಿದ್ದಾನೆ. ಮಾಜಿ ಶಾಸಕ ಗಂಗಣ್ಣ ಮಹಾಂತ ಶೆಟ್ಟರ, ಎಸ್.ಎನ್.ಪಾಟೀಲ ತರಹದವರು ರಾಮಣ್ಣನನ್ನು ಮುಂದಿಟ್ಟುಕೊಂಡು ಕ್ಷೇತ್ರದಲ್ಲಿ ಅಧಿಕಾರ ನಡೆಸುವ ಆಲೋಚನೆಯಿಂದಲೇ ಇವನ ಗೆಲುವಿಗೆ ನೆರವಾಗಿದ್ದರು. ಇವರ ಆದೇಶದಂತೆಯೇ ಲಿಂಗಾಯತರು ಲಮಾಣಿಗೆ ಓಟು ಹಾಕಿ ಗೆಲ್ಲಿಸಿದ್ದರು. ಆದರೆ ಲಮಾಣಿ ಇವತ್ತು ತನ್ನ ಮಗನ ಮಾತು ಕೇಳಿ ಇವರನ್ನೆಲ್ಲಾ ರಾಜಕೀಯವಾಗಿ ಮೂಲೆಗುಂಪು ಮಾಡಲು ಹೊರಟಿದ್ದಾನೆ.



ಫಕೀರೇಶ್ ಸಣ್ಣೀರಪ್ಪ ಎಸ್.ಎನ್.ಪಾಟೀಲ್ ಗಂಗಣ್ಣ

ಈ ಹಿಂದೆ ಶಿರಹಟ್ಟಿ ಕ್ಷೇತ್ರದಲ್ಲಿ ಬ್ರ್ಯಾಂಡ್ ಲೀಡರ್ ಗಳೆನಿಸಿಕೊಂಡಿದ್ದ ದೊಡ್ಡಗೌಡ, ಸಣ್ಣೀರಪ್ಪ ಹಳ್ಳೆಪ್ಪನವರ, ಅಶೋಕ ಪಲ್ಯದ, ಲಮಾಣಿ ಜಾನು, ಬಸಣ್ಣ ಬೆಟಗೇರಿ, ಮದನಲಾಲ ಮುಂತಾದವರು ಯಾವಾಗಲೂ ರಾಮಣ್ಣ ಲಮಾಣಿ ಹಿಂದೆ ಸುತ್ತಾಡಿಕೊಂಡಿದ್ದರು. ಅವರೂ ಕೂಡ ಈಗ ಯಾವಾಗ ರಾಮಣ್ಣನ ಅವಧಿ ಮುಗಿಯುತ್ತದೋ, ಯಾವತ್ತು ಈ ರಾಮಣ್ಣ ಲಮಾಣಿಯನ್ನು ಮತ್ತೆ ಕುದ್ರೋಳಿ ತಾಂಡಾದಲ್ಲಿ ದನದ ದಲ್ಲಾಳಿಗಿರಿಗೆ ಕಳುಹಿಸಬಹುದೋ ಎಂದು ಕಾದು ಕೂತಿದ್ದಾರೆ.



ಬೇನಾಮಿ ಹೆಸರಲ್ಲಿ ಪ್ರಾಪರ್ಟಿ

ರಾಜಕೀಯವಾಗಿ ಹೆಬ್ಬೆಟ್ಟು ಗಿರಾಕಿಯಾದ ರಾಮಣ್ಣನಿಗೆ ಲೂಟಿ ರಾಜಕಾರಣದ ಪಾಠ ಹೇಳಿಕೊಟ್ಟವನು ಎಂ.ಡಿ.ಪಾಟೀಲ ಎಂಬ ಖದೀಮ. ಸಧ್ಯ ರಾಮಣ್ಣನ ಅಂಗಳದಲ್ಲೀಗ ಈ ಪಾಟೀಲನದೇ ದರ್ಬಾರು. ರಾಮಣ್ಣ ಲಮಾಣಿ ಲೂಟಿ ಹೊಡೆದ ಕೋಟಿ ಕೋಟಿ ಹಣದಲ್ಲಿ ಈ ಪಾಟೀಲನ ಹೆಸರಿನಲ್ಲಿ ಗದಗ ನಗರದಲ್ಲಿ 35ಕ್ಕೂ ಹೆಚ್ಚು ನಿವೇಶನಗಳನ್ನು ಖರೀದಿಸಲಾಗಿದೆ. ರಾಮಣ್ಣ ತನ್ನ ಸ್ವಂತ ಊರು ಕುದ್ರೋಳಿ ತಾಂಡಾದಲ್ಲಿದ್ದ ಹಾಳು ಹಂಚಿನ ಮನೆಯ ಜಾಗದಲ್ಲೇ ಈಗ ಒಂದೂವರೆ ಕೋಟಿಗೂ ಹೆಚ್ಚು ಬಾಳುವ ಭವ್ಯ ಬಂಗಲೆ ಕಟ್ಟಿಸಿದ್ದಾನೆ. ಅಲ್ಲದೆ, ಬೆಂಗಳೂರಿನಲ್ಲೂ ಒಂದು ಮನೆ ಸೇರಿದಂತೆ ನಿವೇಶನ ಖರೀದಿಸಿರುವ ಈತ ಶಿರಹಟ್ಟಿ ತಾಲೂಕಿನ ಅಲ್ಲಲ್ಲಿ ಒಂದಿಷ್ಟು ಜಮೀನನ್ನೂ ಖರೀದಿಸಿ ಕೋಟಿ ಲೆಕ್ಕದಲ್ಲಿ ತೂಗುತ್ತಿದ್ದಾನೆ.

ಸರ್ಕಾರದ ಯಾವೊಂದು ಯೋಜನೆಯೂ ಇಲ್ಲಿಯ ಜನರಿಗೆ ಪುಕ್ಕಟ್ಟೆಯಾಗಿ ಸಿಕ್ಕಿಲ್ಲ, ಏಕೆಂದರೆ ಶಾಸಕನ ಲೂಟಿಕೋರ ಮಗ ಚಂದ್ರು ಅವುಗಳನ್ನೆಲ್ಲಾ ಮಾರಾಟಕ್ಕಿಟ್ಟಿದ್ದಾನೆ. ಆಶ್ರಯ, ಅಂಬೇಡ್ಕರ್, ಇಂದಿರಾವಾಸ, ದೇವರಾಜ ಅರಸು ಯೋಜನೆಗಳಲ್ಲಿ ಬಡವರಿಗಾಗಿ ನೀಡುವ ಸೂರನ್ನು ತಲಾ ಒಂದಕ್ಕೆ 10 ಸಾವಿರದಂತೆ ಮಾರಿದ್ದಾನೆ.

ಈ ಹಿಂದೆ ಕಳ್ಳಭಟ್ಟಿ ಕುಡಿದು ಜೇಬಿನಲ್ಲಿ ಬಿಡಿಗಾಸಿಲ್ಲದೆ ಕಂಡವರ ಮುಂದೆ ಕೈ ಚಾಚುತ್ತಿದ್ದ ಶಾಸಕ ರಾಮಣ್ಣನ ಅಕ್ಕನ ಮಗ ಪರಮೇಶ ಲಮಾಣಿಯ ಹೆಸರಲ್ಲಿ ಕ್ಲಾಸ್ 1 ಗುತ್ತಿಗೆದಾರರು ಎಂಬ ಲೈಸನ್ಸ್ ಪಡೆಯಲಾಗಿದೆ. ಈಗ ಈತನ ಹೆಸರಿನಲ್ಲೇ ಕಾಮಗಾರಿ ಬಿಲ್ ತೆಗೆಯುತ್ತಿದ್ದಾನೆ ಚಂದ್ರು. ಎಂ.ಎಸ್.ಅಕ್ಕೂರ ಮತ್ತು ಫಕ್ಕೀರೇಶ ಕವಲೂರ ತರಹದ ಚಂದ್ರು ಮಿತ್ರರು ಕೆರೆ ಹೂಳೆತ್ತುವ ನೆಪದಲ್ಲಿ ಹತ್ತಾರು ಕೋಟಿ ನುಂಗಿ ಹಾಕಿದ್ದಾರೆ. ಮೊನ್ನೆಮೊನ್ನೆಯ ತನಕ ಪುಟಗೋಸಿಯಂತಿದ್ದ ಕಾಂಟ್ರ್ಯಾಕ್ಟರ್ ಕವಲೂರ ಇವತ್ತು ಎರಡು ಹಿತಾಚಿ, ಎರಡು ಟಿಪ್ಪರ್‌ಗಳ ಮಾಲೀಕನಾಗಿದ್ದಾನೆ.

ಮಗ್ಗಲು ಮುರಿಯಲು ಸಜ್ಜಾದರು

ತಾನು ಮಳ್ಳನಂತೆ ನಟಿಸುತ್ತಾ, ಕಳ್ಳ ಮಗನನ್ನ ಫೀಲ್ಡಿನಲ್ಲಿಟ್ಟು ಹಗಲು ದರೋಡೆ ನಡೆಸುತ್ತಿರುವ ಶಾಸಕ ರಾಮಣ್ಣ ಲಮಾಣಿಯ ಮಗ್ಗಲು ಮುರಿಯಲು ಎಲ್ಲರೂ ಈಗ ಕಾದು ಕೂತಿದ್ದಾರೆ. ಈ ಹಿಂದೆ ಇವನ ಬೆನ್ನಿಗಿದ್ದ ಮುಕ್ಕಾಲು ಲೀಡರ್‌ಗಳೇ ಈಗ ಅವರ ವಿರುದ್ಧ ಕೆಂಡಕಾರುತ್ತಿದ್ದಾರೆ. ರಾಮಣ್ಣನ ಬಗಲಲ್ಲಿ ಸದಾ ಇರುವ ಆತನ ಪಿಎ ಶೇಖರ ಕುರ್ತುಕೋಟಿ ಎಂಬ ನಸುಗುನ್ನಿ ಮನುಷ್ಯ ಮಾಜಿ ಶಾಸಕರಾದ ಗಂಗಣ್ಣ ಮಹಾಂತ ಶೆಟ್ಟರ ಹಾಗೂ ಜಿ.ಎಸ್.ಗಡ್ಡದೇವರಮಠ ಹತ್ತಿರ ಆಪ್ತ ಸಹಾಯಕನಾಗಿ ಪಳಗಿದ್ದವರು. ಅವನೀಗ ರಾಮಣ್ಣನ ಎಲ್ಲಾ ಕಳ್ಳದಂಧೆಗಳ ಮಾಹಿತಿಯನ್ನು ಇವರಿಬ್ಬರಿಗೂ ದಿನನಿತ್ಯ ರವಾನಿಸುತ್ತಿದ್ದಾನೆ. ಒಂದರ್ಥದಲ್ಲಿ ರಾಮಣ್ಣನ ಚಟ್ಟ ಕಟ್ಟಲು ಇವನೇ ಮೊದಲು ಕಟ್ಟಿಗೆ ತರುವವನಂತಿದ್ದಾನೆ.


ಇನ್ನು ಸಣ್ಣೀರಪ್ಪ ಹಳ್ಳೆಪ್ಪನವರ ತನ್ನ ಸೊಸೆ - ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿದ್ದ - ಜಯಶ್ರೀ ಹಳ್ಳೆಪ್ಪನವರಿಗೆ ಬಿಜೆಪಿ ಪಕ್ಷದ ಬಿ ಫಾರ್ಮ್ ಪಡೆಯಲು ಈಗಿನಿಂದಲೇ ತಯಾರಿ ನಡೆಸಿದ್ದಾರೆ. ಒಂದು ವೇಳೆ ಆಕೆಗೆ ಬಿಜೆಪಿ ಟಿಕೆಟ್ ಸಿಗದಿದ್ದರೆ, ಆಕೆ ಶ್ರೀರಾಮುಲುನ ಹೊಸ ಪಕ್ಷದಿಂದ ಸ್ಪರ್ಧಿಸುವುದು ಗ್ಯಾರಂಟಿ ಎಂಬ ರೂಮರ್‌ಅನ್ನು ತೇಲಿ ಬಿಟ್ಟಿದ್ದಾರೆ. ಇವರ ಬೆಂಬಲಕ್ಕೆ ರಾಮಣ್ಣನ ವಲಯದಿಂದ ಹೊರಬಂದಿರುವ ಎಲ್ಲ ಬ್ರ್ಯಾಂಡ್ ಲೀಡರ್‌ಗಳೂ ನಿಂತಿದ್ದಾರೆ. ಇದನ್ನೆಲ್ಲ ಕಂಡು ಛಳಿ ಹತ್ತಿದವರಂತೆ ಒದ್ದಾಡುತ್ತಿರುವ ರಾಮಣ್ಣನಿಗೆ ಮತ್ತೊಂದು ಶಾಕ್ ಕಾದಿದೆ. ಅದೇನೆಂದರೆ ಆತನ ಮಗ ಚಂದ್ರಶೇಖರನೇ ಮುಂದಿನ ಚುನಾವಣೆಯಲ್ಲಿ ಅಪ್ಪನನ್ನು ಸೈಡಿಗಿಟ್ಟು, ತಾನೇ ಚುನಾವಣೆಗೆ ನಿಲ್ಲುವ ತಯಾರಿ ನಡೆಸುತ್ತಿರುವುದು!

ಒಂದು ವೇಳೆ ಇದು ನಡೆದಿದ್ದೇ ಆದರೆ ಮಳ್ಳನ ಬದಲಾಗಿ ಕಳ್ಳನ ಕೈಗೆ ತಿಜೋರಿಯ ಕೀಲಿ ಕೈ ಕೊಟ್ಟಂತಾಗುವುದರಲ್ಲಿ ಎರಡು ಮಾತಿಲ್ಲ.

• ವಿನಯ

ಸಾರಾಗೆ ಬಾನು ಉತ್ತರ
ಬದುಕಿನುದ್ದಕ್ಕೂ ಗಾಜಿನ ಚೂರುಗಳನ್ನು ಆಯುತ್ತಾ....!





ಸಾರಾರವರೆ,

ನನ್ನ ಎದುರಿಗೆ 2012ನೇ ವರ್ಷದ ಮಾರ್ಚ್ 21, ಮಾರ್ಚ್ 28 ಹಾಗೂ ಏಪ್ರಿಲ್ 11ರ 'ಲಂಕೇಶ್' ವಾರ ಪತ್ರಿಕೆಯ ಸಂಚಿಕೆಗಳು ಇವೆ. ಮಾರ್ಚ್ 21ರ ಸಂಚಿಕೆಯಲ್ಲಿ 'ಬ್ಯಾರಿ' ಚಲನಚಿತ್ರವು 'ಚಂದ್ರಗಿರಿಯ ತೀರದಲ್ಲಿ' ಎಂಬ ನಿಮ್ಮ ಕಾದಂಬರಿಯನ್ನು ಕದ್ದು ಸಿನೆಮಾ ಮಾಡಿರುತ್ತಾರೆ ಎಂತಲೂ, ಅದನ್ನು ನಿರ್ಮಿಸಿರುವವನು ಮೂರನೆಯ ದರ್ಜೆಯ ಗೂಂಡಾ ಎಂತಲೂ ಆರೋಪಗಳನ್ನು ಹೊರಿಸಿರುತ್ತೀರಿ.

ಆ ನಂತರ ಮಾರ್ಚ್ 28ರ ಸಂಚಿಕೆಯಲ್ಲಿ ಬಿ.ಎಮ್. ಬಶೀರ್‌ರವರು ಬರೆದ ಲೇಖನವನ್ನು ಕೂಡಾ ನಾನು ನೋಡಿದ್ದೇನೆ. ಸದರಿ ಲೇಖನದಲ್ಲಿ ಬಶೀರ್‌ರವರು ಬ್ಯಾರಿ ಎಂಬ ಐಡೆಂಟಟಿಯ ಬಗ್ಗೆ ತಮಗೆ ಯಾವ ರೀತಿಯ ಅನಿಸಿಕೆಗಳಿದ್ದವು ಮತ್ತು ಬ್ಯಾರಿ ಎಂಬ ಸಂಬೋಧನೆಯು ತಮಗೆ ಹೇಗೆ ಅವಮಾನಕರವಾಗಿತ್ತು ಎಂಬುದರ ಬಗ್ಗೆ ಹೇಳಿದ್ದಾರೆ. ಅಷ್ಟೇ ಅಲ್ಲದೆ ಅವರಿಗೂ ಕೂಡಾ 'ಬ್ಯಾರಿ' ಸಿನೆಮಾ ನಿಮ್ಮ ಕಾದಂಬರಿಯಿಂದ ಕದ್ದದ್ದು ಎಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ. ಬಿ. ಎಮ್. ಬಶೀರ್‌ರವರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ ಹಾಗೂ ನಾನು ಹೀಗೆ ಹೇಳಲು ನನಗೆ ನಿಮ್ಮ ಅನುಮತಿಯ ಅಗತ್ಯವಿಲ್ಲ.

ಬಶೀರ್‌ರವರ ಲೇಖನವನ್ನು ಓದಿದ ನಂತರ ನನಗನಿಸಿದ್ದು: ನಮ್ಮ ಸಮಾಜದಲ್ಲಿ ಪ್ರಚಲಿತವಾದ ಒಂದು ಸಾಮಾಜಿಕ ನ್ಯಾಯ ವ್ಯವಸ್ಥೆ ಇದೆ. ಸಮುದಾಯದ ಹಿತದ ಎದುರಿಗೆ ವ್ಯಕ್ತಿಯ ಹಿತವನ್ನು ಗೌಣವಾಗಿ ಪರಿಗಣಿಸಲಾಗುತ್ತದೆ. ಸಮಾಜದ ಹಿತ ಮುಖ್ಯವಾದಾಗ ಸಮುದಾಯದ ಹಿತ ಅಮುಖ್ಯವಾಗುತ್ತದೆ. ಹಾಗೆಯೇ ದೇಶದ ಹಿತ ಮುಖ್ಯವಾದಾಗ ಸಮಾಜವು ನೇಪಥ್ಯಕ್ಕೆ ಸರಿಯುತ್ತದೆ. ಇದೊಂದು ಅಲಿಖಿತವಾದ ಶಾಸನ.

ಬಹುಶಃ ಬಶೀರ್ ಈ ಆಶಯದ ಅಡಿಯಲ್ಲಿ 'ಬ್ಯಾರಿ' ನಿರ್ದೇಶಕರ ಕೃತ್ಯವನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ಆದರೆ ಅದೇ ಧ್ವನಿಯಲ್ಲಿ ಸಾರಾಗೆ ಆಗಿರುವ ವೈಯಕ್ತಿಕ ಅನ್ಯಾಯವನ್ನು ಕೂಡಾ ಖಂಡಿಸಿದ್ದಾರೆ. ಇಲ್ಲಿಗೆ ಚರ್ಚೆ ಮುಕ್ತಾಯವಾಗಬಹುದೆಂದು ನಾನು ಅಂದುಕೊಂಡಿದ್ದೆ. ಆದರೆ ಹಾಗಾಗಲಿಲ್ಲ, ಅದಕ್ಕೆ ಬದಲಾಗಿ, ನೀವು ಆಕ್ರಮಣಕಾರಿ ಶೈಲಿಯಲ್ಲಿ ಮತ್ತೊಮ್ಮೆ ಪೆನ್ನಿನ ಮೂಲಕ ತಮ್ಮ ಕತ್ತಿಯನ್ನು ಝುಳಪಿಸಿದ್ದೀರಿ ಮತ್ತು ಅನೇಕರಿಗೆ ಪಂಥಾಹ್ವಾನವನ್ನೂ ನೀಡಿದ್ದೀರಿ. ಅದರಲ್ಲಿ ನಾನೂ ಕೂಡಾ ಒಬ್ಬಳಾಗಿ ಸೇರಿ ಹೋಗಿದ್ದೇನೆ ಎಂಬುದು ತೀರಾ ಆಕಸ್ಮಿಕವಾದ ತಿರುವು ಆಗಿರುತ್ತದೆ.


'ಬ್ಯಾರಿ' ಸಿನೆಮಾದ ನಿರ್ಮಾಪಕನಂತೆ, ಬ್ಯಾರಿ ಸಮುದಾಯದವರಂತೆ, ನಿಮ್ಮ ವಕೀಲರಂತೆ ನಾನೂ ಕೂಡಾ ನಿಮ್ಮ ಆರೋಪಗಳನ್ನು ನಿರ್ಲಕ್ಷಿಸಿ ನನ್ನ ಸಮಯದ ಸದುಪಯೋಗವನ್ನು ಮಾಡಿಕೊಳ್ಳಬಹುದಿತ್ತು, ಆದರೆ ಪಲಾಯನವಾದವನ್ನು ಅನುಸರಿಸುವುದು ನನ್ನ ಜಾಯಮಾನವಲ್ಲ.

ಪತ್ರಿಕೆಯ ಏಪ್ರಿಲ್ 11ರ ಸಂಚಿಕೆಯಲ್ಲಿ ಈ ಯಾವ ವಿಷಯಕ್ಕೂ ಸಂಬಂಧ ಪಡದ ನನ್ನನ್ನು ನೀವು ಏಕೆ ಎಳೆದು ತಂದಿರಿ? ನಿಮ್ಮ ಲೇಖನದಲ್ಲಿ "ನಾನು ಈ ಕಾದಂಬರಿ ಬರೆದ ಬಳಿಕ ಒಂದು ಸಭೆಯಲ್ಲಿ ಬಾನು ಮುಷ್ತಾಕ್ ಕೂಡಾ ಒಂದು ದಿನದ ಮದುವೆಯನ್ನು ಸಮರ್ಥಿಸುತ್ತಾ ಅದು ಆಕೆಯ ಮಾಜಿ ಪತಿಗೆ ಶಿಕ್ಷೆ ಎಂದು ಸಮರ್ಥನೆ ಮಾಡಿದ್ದಾರೆ. ಆಗ ಅವರು ಮೂಲಭೂತವಾದಿ ಸಂಘಟನೆಯ ಪ್ರಭಾವದಿಂದ ಹಾಗಂದಿರಬಹುದು. ಇದು ಇಪ್ಪತ್ತು ವರ್ಷಗಳ ಹಿಂದಿನ ವಿಷಯ" ಎಂದು ನೀವು ಹೇಳಿದ್ದೀರಿ. ದಯಮಾಡಿ ಯಾವ ಸಭೆಯಲ್ಲಿ, ಯಾವ ದಿನಾಂಕದಂದು, ಯಾವ ಸಂದರ್ಭದಲ್ಲಿ, ಯಾರ ಸಮ್ಮುಖದಲ್ಲಿ ನಾನು ಮೇಲ್ಕಂಡ ವಿಷಯವನ್ನು ಸಮರ್ಥನೆ ಮಾಡಿದ್ದೆ ಎಂಬ ಅಂಶವನ್ನು ವಿಷದೀಕರಿಸುತ್ತೀರಾ?

ಸಾರಾರವರೇ... ಅನವಶ್ಯಕವಾಗಿ ಯಾಕೆ ನನ್ನ ಹೆಸರನ್ನು ಎಳೆದು ತಂದಿದ್ದೀರಾ? ನಾನು ಯಾವ ಮೂಲಭೂತವಾದಿ ಸಂಘಟನೆಯ ಪ್ರಭಾವಕ್ಕೆ ಒಳಗಾಗಿದ್ದೇನೆ? ನಿಮಗೆ ಯಾರು ಹಕ್ಕು ಕೊಟ್ಟರು ಈ ರೀತಿಯ ಸುಳ್ಳುಗಳನ್ನು ಪೋಣಿಸಲು? ಇದು ಎಷ್ಟೊಂದು ಮಾನಹಾನಿಕರವಾದ ಲೇಖನ ಆಗಿದೆ ಎಂದು ನಿಮಗೆ ತಿಳಿದಿದೆಯೇ? ವಕೀಲಳಾಗಿ ನಾನು ಮಾನಹಾನಿಪ್ರಕರಣವನ್ನು ದಾಖಲಿಸಿ ನಿಮ್ಮಂತೆ ನಾನು ಅನಗತ್ಯ ಪ್ರಚಾರವನ್ನು ಪಡೆದುಕೊಳ್ಳಬಹುದು. ಆದರೆ ನಾನು ಹಾಗೆ ಮಾಡುವುದಿಲ್ಲ, ಹಾಗೆ ಮಾಡಿದಲ್ಲಿ ನಿಮಗೂ ಮತ್ತು ನನಗೂ ಏನು ವ್ಯತ್ಯಾಸವಿದೆ ಹೇಳಿ. ಅದರ ಬದಲಾಗಿ ನಾನು ಉದಾರವಾಗಿ ನಿಮ್ಮನ್ನು ಕ್ಷಮಿಸಿದ್ದೇನೆ.

ಅದೇ ಲೇಖನದಲ್ಲಿ ನೀವು "ಮಂಗಳೂರಿನಲ್ಲಿ ನಡೆದ ಬ್ಯಾರಿ ಮಹಿಳಾ ಸಮಾವೇಶದಲ್ಲಿ ಜಮಾತೆ ಇಸ್ಲಾಮೀ ಸಂಘಟನೆಯ ಮಹಿಳೆ ವೇದಿಕೆಯಲ್ಲಿ ಧರ್ಮದ ಈ ನಿಯಮದಲ್ಲಿ ತಪ್ಪೇನೂ ಇಲ್ಲ, ಅದು ಆ ಗಂಡನಿಗೆ ಶಿಕ್ಷೆ ಎಂದು ಮಹಿಳೆಯರನ್ನು ತೀರಾ ಅವಮಾನಿಸುವ ಈ ಸಂಗತಿಯನ್ನು ವೇದಿಕೆಯಲ್ಲಿ ಸಮರ್ಥಿಸಿಕೊಂಡಳು. ಆ ಮಹಿಳೆ ಬಹಳ ಸಂತೋಷದಿಂದ ನಗುನಗುತ್ತಾ ವೇದಿಕೆಯಲ್ಲಿ ಈ ರೀತಿ ಭಾಷಣ ಮಾಡಿದ್ದಾಗ ಎದುರಿಗೆ ನಾನು ಮತ್ತು ಬಾನು ಮುಷ್ತಾಕ್ ಕುಳಿತಿದ್ದೆವು" ಎಂದು ನೀವು ಬರೆದಿದ್ದೀರಿ. ಜಮಾತೆ ಇಸ್ಲಾಮಿ ಸಂಘಟನೆಯ ಮಹಿಳೆಯಾಗಲೀ ಅಥವಾ ನೀವಾಗಲೀ, ನಾನಾಗಲೀ ಅಥವಾ ಇನ್ಯಾರೇ ಆಗಲೀ... ಅವರವರ ಅಭಿಪ್ರಾಯವನ್ನು ಅವರು ಹೊಂದಲು ಸ್ವತಂತ್ರರಿದ್ದಾರೆ. ಆಕೆಯು ತನ್ನ ಮುಕ್ತ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಕ್ಷಣ ನಾನು ಮತ್ತು ನೀವು ಇಬ್ಬರೂ ಕೂಡಾ ವೇದಿಕೆಯ ಮೇಲೆ ನೆಗೆದು ಹೋಗಿ ಆಕೆಯ ಗಂಟಲಿನಿಂದ ಧ್ವನಿ ಹೊರಡದಂತೆ ತಡೆಯುವ ಯಾವ ಅಧಿಕಾರವೂ ನಮಗಿಲ್ಲ ಎಂಬ ಅಂಶವನ್ನು ನಿಮಗೆ ನೆನಪಿಸುತ್ತಿದ್ದೇನೆ.

ಈ ಸಂದರ್ಭದಲ್ಲಿ ಒಂದು ಅನುಭವವನ್ನು ನಿಮ್ಮೊಡನೆ ಹಂಚಿಕೊಳ್ಳಬೇಕಿದೆ. ಗುಲಬರ್ಗಾದಲ್ಲಿ ಕೆ.ನೀಲಾ ಮತ್ತವರ ಸ್ನೇಹಿತರು ನನ್ನದೊಂದು ಕಾರ್ಯಕ್ರಮವನ್ನು ಆಯೋಜಿಸಿದ್ದರು. ನಾನು ಅಲ್ಲಿಗೆ ಹೋದಾಗ ಅನೇಕ ವಿದ್ಯಾರ್ಥಿಗಳು "ನಾವು ನಿಮ್ಮನ್ನು ಓದಿದೀವ್ರೀ..." ಎಂದು ನನಗೆ ಹೇಳಿದರು. ನಾನು "ಎಲ್ಲಿ ಓದಿದೀರಿ?" ಎಂದು ಕೇಳಿದಾಗ ಅವರು ತಮ್ಮ ಕಾಲೇಜಿನ ಪಠ್ಯ ಪುಸ್ತಕದಲ್ಲಿ ನನ್ನ ಕಥೆ ಸೇರಿರುವುದಾಗಿ ತಿಳಿಸಿದರು. ನನಗೆ ಒಂದು ಕ್ಷಣ ಬೇಸರವಾಯಿತು. ವಿಶ್ವವಿದ್ಯಾಲಯದ ಪಠ್ಯಪುಸ್ತಕ ಸಮಿತಿಯವರು ನನ್ನ ಕಥೆಯನ್ನು ಪದವಿ ಪಠ್ಯಪುಸ್ತಕದಲ್ಲಿ ಸೇರಿಸಿರುವುದಾಗಿ ಒಂದು ಪತ್ರವನ್ನು ಬರೆದು ಒಂದು ಗೌರವ ಪ್ರತಿಯನ್ನು ಕಳಿಸಿದ್ದರೂ ಸಾಕಿತ್ತಲ್ಲಾ, ಹೀಗ್ಯಾಕೆ ಮಾಡಿದರು... ಎಂಬ ಆಲೋಚನೆಯ ಒಂದು ಕ್ಷಣ ಬಂದಿದ್ದಷ್ಟೇ... ಮರುಕ್ಷಣದಲ್ಲಿಯೇ ಸಾವಿರಾರು ವಿದ್ಯಾರ್ಥಿಗಳು ಓದುತ್ತಾರೆ; ನೂರಾರು ಅಧ್ಯಾಪಕರು ಕಲಿಸುತ್ತಾರೆ... ಮುಂದಿನ ತಲೆಮಾರಿಗೆ ನಾನು ಮತ್ತು ನನ್ನ ಆಲೋಚನೆಗಳು ತಲುಪುತ್ತವೆ; ನನ್ನ ಆಲೋಚನೆಯ ಹೊಳಹು ಯಾವುದೋ ಫಲವತ್ತಾದ ಮನಸ್ಸಿನಲ್ಲಿ ಮೊಳಕೆಯೊಡೆಯಬಹುದು ಎಂಬ ಸಕಾರಾತ್ಮಕ ಭಾವ ಕೂಡಲೇ ಎಚ್ಚೆತ್ತುಕೊಂಡಿತು. ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಒಬ್ಬ ವಿದ್ಯಾರ್ಥಿ ಪುಸ್ತಕವನ್ನು ತಂದುಕೊಟ್ಟ. ಪುಸ್ತಕದ ಬೆಲೆಯನ್ನು ನೀಡಲು ಹೋದಾಗ ಬೇಡವೆಂದು ನನ್ನದೊಂದು ಸಹಿ ಪಡೆದು ಮೊರದಗಲ ನಗೆ ಬೀರಿ ಮಾಯವಾದ. ಇಂತಹದ್ದೇ ಘಟನೆ ತುಮಕೂರಿನಲ್ಲೂ ನಡೆಯಿತು. ಇತ್ತೀಚೆಗೆ ಬಂಗಾರಪೇಟೆಯಿಂದ ಫೋನ್ ಮಾಡಿದ ಮಂಜುಳಾ ಎಂಬ ಉಪನ್ಯಾಸಕಿ, ನನ್ನ ಕೃತಿಗಳ ಬಗ್ಗೆ ಸಂಶೋಧನೆಯನ್ನು ನಡೆಸುತ್ತಿರುವುದಾಗಿ ನುಡಿದು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕ ವಾಗಿರುವ ನನ್ನ ಕಥೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವುದಾಗಿ ತಿಳಿಸಿದರು. ಹಾಗೂ ನನ್ನ ಕೋರಿಕೆಯ ಮೇರೆಗೆ ದಯೆಯಿಟ್ಟು ನನಗೆ ಆ ಪುಸ್ತಕದ ಒಂದು ಪ್ರತಿಯನ್ನು ಕಳಿಸಿಕೊಟ್ಟರು. ನಾನು ಯಾವ ಪಠ್ಯ ಪುಸ್ತಕ ಸಮಿತಿಯವರೊಡನೆಯೂ ತಕರಾರನ್ನು ಮಾಡಿಲ್ಲ, ಇದು ಕೇವಲ ನಿಮ್ಮ ಮಾಹಿತಿಗೆ ಮತ್ತು ಈ ವಿಷಯ ನಿಮಗೆ ಮಾರ್ಗದರ್ಶಿಸೂತ್ರವಲ್ಲ ಎಂಬುದನ್ನು ನಿಮಗೆ ತಿಳಿಸಲು ಇಚ್ಛಿಸುತ್ತೇನೆ.







ಸಾರಾ ಎಂದರೆ ಅಪಾರ ಪ್ರೀತಿ, ಗೌರವ ಮತ್ತು ಅಭಿಮಾನ ಹಾಗೂ ಪುರಸ್ಕಾರಗಳನ್ನು ನೀಡಿ ಜಾತಿಭೇದವನ್ನು ಮೆಟ್ಟನಿಂತ ಕರ್ನಾಟಕದ ಅಪಾರ ಜನಸ್ತೋಮವು ಇದೆಯೆಂಬ ಅಂಶವನ್ನು ನೀವು ಮರೆತಿರುವುದು ನಿಜಕ್ಕೂ ಶೋಚನೀಯ. ನಿಮ್ಮನ್ನು ಸಾಹಿತಿ, ಸಾಮಾಜಿಕ ಜವಾಬುದಾರಿಯುಳ್ಳವರು, ಅಪ್ರತಿಮ ಹೋರಾಟಗಾರ್ತಿ ಹಾಗೂ ಮಹಾನ್ ಚೇತನ ಎಂದು ಗೌರವಿಸಿದ ಈ ಕರ್ನಾಟಕದ ಜನತೆಗೆ ನೀವು 'ನಾನು ಓರ್ವ ವಿಧವೆ' ಎಂದು ಗುರುತಿಸಿಕೊಂಡು ಮಹದುಪಕಾರವನ್ನು ಮಾಡಿದ್ದೀರಿ.

ವಂದನೆಗಳು... ನಿಮ್ಮ ಅಸ್ತಿತ್ವವನ್ನು ಅಷ್ಟರ ಮಟ್ಟಿಗೆ ಸೀಮಿತಗೊಳಿಸಿಕೊಂಡಿದ್ದಕ್ಕೆ.

ಕಳೆದ ಕೆಲವು ವರ್ಷಗಳಿಂದ ಮುಸ್ಲಿಮ್ ಕತೆಯ ಸಿನಿಮಾಗಳಿಗೆ ಪ್ರಶಸ್ತಿ ದೊರೆಯುತ್ತಿದೆ ಎಂದು ನಿಮ್ಮ ಲೇಖನದಲ್ಲಿ ಉದಾತ್ತವಾಗಿ ಕಾಣಿಸಿದ್ದೀರಿ. ಅಷ್ಟೇ ಅಲ್ಲದೆ, ಹಾಗೆ ಪ್ರಶಸ್ತಿ ಬಂದ ಸಿನೆಮಾಗಳಲ್ಲಿ ಬಾನು ಮುಷ್ತಾಕ್‌ನ ಕಥೆಯಾಧಾರಿತ 'ಹಸೀನಾ' ಚಲನಚಿತ್ರವೂ ಇದೆ; ಅದಕ್ಕೆ ಮೂರು ರಾಷ್ಟ್ರ ಪ್ರಶಸ್ತಿಗಳು ಬಂದಿವೆ ಎಂಬ ಅಂಶವನ್ನು ಕಾಣಿಸುವಷ್ಟು ಔದಾರ್ಯತೆ ನಿಮ್ಮಲ್ಲಿ ಇಲ್ಲ ಎಂಬ ಅಂಶ ನನಗೆ ಗೊತ್ತಿದೆ. ಈ ವಿಷಯದ ಪ್ರಸ್ತಾಪವನ್ನು ಈಗ ಯಾಕೆ ಮಾಡಬೇಕಾಯಿತೆಂದರೆ, ನನ್ನ ಕಥೆಯಾದ 'ಕರಿನಾಗರ'ವನ್ನು ಚಿತ್ರೀಕರಿಸುವುದಾಗಿ ಅನುಮತಿಯನ್ನು ಕೋರಲು ಹಾಗೂ ಪೂರ್ವಭಾವಿ ಚರ್ಚೆಯನ್ನು ಮಾಡಲು ಗಿರೀಶ್ ಕಾಸರವಳ್ಳಿಯವರು ಹಾಸನಕ್ಕೆ ನಮ್ಮ ಮನೆಗೆ ಬಂದಿದ್ದರು. ಆಗ ಮಾತಿನ ಸಂದರ್ಭದಲ್ಲಿ ಕನ್ನಡ ಚಲನಚಿತ್ರದ ಚಿತ್ರೀಕರಣ ಹಕ್ಕನ್ನು ನೀಡಲು ಹೆಚ್ಚು ಸಂಭಾವನೆ ನೀಡುವ ಪದ್ಧತಿ ಇಲ್ಲವೆಂಬ ವಿಷಯವನ್ನು ಸೂಚ್ಯವಾಗಿ ತಿಳಿಸಿದ್ದರು.

ಇದಾದ ನಂತರ ನಟಿ ತಾರಾ ನನ್ನನ್ನು ತಮ್ಮ ಮನೆಗೆ ಆಹ್ವಾನಿಸಿ, ಒಂದು ತಟ್ಟೆಯಲ್ಲಿ ಫಲ ತಾಂಬೂಲದ ಜೊತೆಯಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ನನಗೆ ನೀಡಿ ನನ್ನ ಕಾಲಿಗೆ ನಮಸ್ಕರಿಸಿದರು ಮತ್ತು ಆಶೀರ್ವಾದವನ್ನು ಬೇಡಿದರು. ನನ್ನ ಇಡೀ ಜೀವಮಾನದಲ್ಲಿ ನನ್ನ ತಂದೆತಾಯಿಯನ್ನು ಹೊರತುಪಡಿಸಿ ಯಾರ ಕಾಲಿಗೂ ನಮಸ್ಕರಿಸಿಲ್ಲ ಮತ್ತು ಯಾರೂ ನನ್ನ ಕಾಲಿಗೆ ಬಿದ್ದು ನಮಸ್ಕರಿಸಲು ಅವಕಾಶವನ್ನು ನೀಡುವುದಿಲ್ಲ. ಹೀಗಾಗಿ, ಅನಿರೀಕ್ಷಿತವಾಗಿ ನಡೆದ ಈ ಘಟನೆಯಿಂದ ನನಗೆ ಕಕ್ಕಾಬಿಕ್ಕಿಯಾದರೂ ಸಾವರಿಸಿಕೊಂಡು ಆಕೆಯನ್ನು ಅಪ್ಪಿ ನನ್ನ ಶುಭ ಕಾಮನೆಗಳನ್ನು ಹೇಳಿ ಹೊರಬಂದೆ. ಚಿತ್ರೀಕರಣವು ಮುಗಿದು ಸಿನಿಮಾ ಬಿಡುಗಡೆಯ ಹಂತಕ್ಕೆ ಬಂದಾಗ ಅದರ ನಿರ್ಮಾಪಕ ಐ.ಎಮ್. ವಿಠಲಮೂರ್ತಿಯವರು ಸಂಭಾವನೆ ಎಂದು ಮತ್ತೆ ಹತ್ತು ಸಾವಿರ ರೂಪಾಯಿಗಳ ಚೆಕ್ಕನ್ನು ಕಳಿಸಿಕೊಟ್ಟರು. ಈ ಕುರಿತು ನಾನು ಯಾವ ರೀತಿಯ ತಗಾದೆಯನ್ನೂ ತೆಗೆಯಲಿಲ್ಲ. ಈ ವಿಷಯವನ್ನು ಕೂಡಾ ನಿಮ್ಮ ಮಾಹಿತಿಗಾಗಿ ನೀಡುತ್ತಿದ್ದೇನೆಯೇ ಹೊರತು ಎಲ್ಲರೂ ಇದನ್ನೇ ಪಾಲಿಸಬೇಕೆಂಬ ಮಾರ್ಗದರ್ಶಿಸೂತ್ರವನ್ನು ನಾನು ಆದೇಶಿಸುತ್ತಿಲ್ಲ.

ನೀವು ಇದುವರೆವಿಗೂ ಎಲ್ಲಿಯೂ ನನ್ನನ್ನು ಒಮ್ಮೆ ಕೂಡಾ ಸಕಾರಾತ್ಮಕವಾಗಿ ಕೋಟ್ ಮಾಡಿಲ್ಲ, ಇದು ನಾನು ಮಾಡುತ್ತಿರುವ ಆರೋಪವಲ್ಲ, ಆದರೆ ನಮ್ಮಲ್ಲಿ ಇರುವ ಶ್ರೇಷ್ಠತೆಯ ಗೀಳು ಹೇಗೆ ನಮ್ಮನ್ನು ಅಂಧನನ್ನಾಗಿಸುತ್ತದೆ ಮತ್ತು ಹೇಗೆ ನಮ್ಮ ಸರ್ವ ನಾಶಕ್ಕೆ ಕಾರಣವಾಗುತ್ತದೆ ಎಂದು ವಿವೇಚಿಸುವುದೇ ಆಗಿದೆ. ನಾನು ಇನ್ನೊಮ್ಮೆ ನಿಮ್ಮೆದುರಿಗೆ ಸ್ಪಷ್ಟಪಡಿಸುತ್ತೇನೆ, ನಾನು ನಿಮ್ಮ ಸ್ಪರ್ಧಿಯಲ್ಲ, ನಮ್ಮ ನಮ್ಮ ಸಾಹಿತ್ಯದ ಗಟ್ಟಿ ಜೊಳ್ಳುಕಾಳುಗಳನ್ನು ಜರಡಿಯಾಡಿಸುವುದು ಕಾಲವೇ ಹೊರತು ನಮ್ಮ ದುರಹಂಕಾರಗಳಲ್ಲ ಎಂಬ ವಿಷಯವನ್ನು ಹೇಳುತ್ತಿದ್ದೇನೆ.

ಗಾಜಿನ ಮನೆಯಲ್ಲಿ ವಾಸಿಸುತ್ತಿರುವ ಸಾರಾರವರಿಗೆ ಇನ್ನೊಂದು ಗಾಜಿನ ಮನೆಯಲ್ಲಿ ವಾಸಿಸುತ್ತಿರುವ ಬಾನು ಮುಷ್ತಾಕ್ ಹೇಳುವುದೇನೆಂದರೆ "ಸಾರಾರವರೇ, ಕಲ್ಲುಗಳನ್ನು ಬಿಸಾಡಬೇಡಿ ನನ್ನ ಮನೆಯ ಮೇಲೆ. ನಾನು ಮತ್ತು ನೀವು ಉಳಿದ ಬದುಕಿನುದ್ದಕ್ಕೂ ಗಾಜಿನ ಚೂರುಗಳನ್ನು ಆಯುತ್ತಲೇ ಆಯುಷ್ಯವನ್ನು ಸವೆಸಬೇಕಾಗುತ್ತದೆ" ಎಂದು ನೆನಪಿಸುತ್ತಾ ಅದಕ್ಕೆ ಬದಲಾಗಿ ಅರ್ಥಪೂರ್ಣವಾಗಿ ಮತ್ತು ಸೃಜನಶೀಲವಾಗಿ ಸಮಾಜಕ್ಕೆ ಉಪಯುಕ್ತವಾಗಿ ತೊಡಗಿಸಿಕೊಳ್ಳೋಣ ಎಂದು ವಿನಂತಿಸಿಕೊಳ್ಳುತ್ತೇನೆ.

ಸೃಜನಶೀಲತೆಯು ಮನುಷ್ಯಪ್ರೀತಿಯ ಅಭಿವ್ಯಕ್ತಿ ಎಂದು ನಾನು ಭಾವಿಸಿದ್ದೇನೆ. ಮುಸ್ಲಿಮೇತರ, ಬ್ಯಾರಿಯೇತರ ಎಂದು ವಿಭಜಿಸುವ ಮನಸ್ಸು ಕ್ಷೋಭೆಯಿಂದ ಕೂಡಿರುತ್ತದೆ. ದ್ವೇಷವು ಸೃಜನಶೀಲತೆಯನ್ನು ನುಂಗುತ್ತದೆ ಹಾಗೂ ಪ್ರತಿಯೊಬ್ಬರನ್ನೂ, ಪ್ರತಿಯೊಂದನ್ನೂ ಅನುಮಾನದಿಂದ ನೋಡುವುದು ವಿಧ್ವಂಸಕ ಮನಃಸ್ಥಿತಿಯ ದ್ಯೋತಕವೆಂದು ಈ ಹೊತ್ತಿನಲ್ಲಿ ಹೇಳಲು ಇಷ್ಟಪಡುತ್ತೇನೆ.

ಇದೇನು ಈ ಪತ್ರ ನೋಟೀಸಿನ ರೀತಿಯಲ್ಲಿದೆಯಲ್ಲಾ ಅಂತ ಅಂದ್ಕೋಬೇಡಿ. ಇದರಲ್ಲಿ ಒಂದು ವಿಧದ ಆಪ್ತತೆ, ಒಂದಿಷ್ಟು ಜಗಳ, ಸ್ವಲ್ಪ ಕೋಪ, ಹಾಗೆಯೇ ಸ್ವಲ್ಪ ವಾರ್ನಿಂಗ್ ಎಲ್ಲವೂ ಇದೆ. ಹಾಗೆಂದು ನಾನು ಒಂದು ಜಗಳವನ್ನು ಆರಂಭಿಸಿದ್ದೇನೆ ಎಂದು ಅಂದುಕೊಳ್ಳಬೇಡಿ. ನಾನು ಆರಂಭಿಸಿಲ್ಲ; ಮುಂದುವರೆಸಿದ್ದೇನೆ.

ಇಷ್ಟೆಲ್ಲ ಹೇಳಿದ ನಂತರ, ನಾವಿಬ್ಬರು ಎಲ್ಲಾದರೂ ಮುಖಾಮುಖಿ ಭೇಟಿಯಾದಲ್ಲಿ ದ್ವೇಷಾಸೂಯೆಗಳಿಂದ ಮುಕ್ತವಾದ ಪರಿಶುದ್ಧ ಮುಗುಳುನಗೆಯನ್ನು ಬೀರುತ್ತಾ, ಅಸ್ಸಲಾಮ್ ಅಲೈಕುಮ್ ಎಂದು ಪರಸ್ಪರ ಅಭಿವಾದನೆಯನ್ನು ಮಾಡುತ್ತಾ ಒಂದಿಷ್ಟು ಯೋಗಕ್ಷೇಮವನ್ನು ವಿಚಾರಿಸುವ ಹಾಗೂ ಪರಸ್ಪರರ ಕೃತಿಗಳಿಗೆ ಪುರಸ್ಕಾರವೇನಾದರೂ ದೊರಕಿದ್ದಲ್ಲಿ ಅಭಿನಂದನೆಯನ್ನು ಸಲ್ಲಿಸುವ ಸಹೃದಯತೆಯನ್ನು ಮತ್ತು ವಿವೇಕವನ್ನು ಉಳಿಸಿಕೊಳ್ಳೋಣವೆಂದು ನಿಮ್ಮಲ್ಲಿ ಕೋರುತ್ತೇನೆ. ಏಕೆಂದರೆ, ಮೂರು ದಿನಗಳಿಗಿಂತ ಹೆಚ್ಚಿನ ಕಾಲ ಒಬ್ಬರೊಡನೆ ಒಬ್ಬರು ಮಾತು ಬಿಟ್ಟಲ್ಲಿ ಪ್ರಾರ್ಥನೆ ಸಿದ್ಧಿಸುವುದಿಲ್ಲ ಎಂಬ ಇಸ್ಲಾಮಿನ ಬೋಧನೆ ನಮ್ಮಿಬ್ಬರಿಗೂ ತಿಳಿದಿದೆ.

ಪ್ರೀತಿಯಿಂದ,
ಬಾನು ಮುಷ್ತಾಕ್

ಅಪರೂಪದ ಫೋಟೋ



ಡಾ.ಬಿ.ಆರ್.ಅಂಬೇಡ್ಕರ್, ತಮ್ಮ ಪತ್ನಿ ಹಾಗೂ ಕಿರಿಯ ಗೆಳೆಯನೊಂದಿಗೆ... ಅಂಬೇಡ್ಕರ್‌ರವರ ಪ್ರೀತಿಯ ನಾಯಿಯೂ ಜೊತೆಗಿದೆ

ವಿ.ಸೂ.: ಓದುಗರೇ ನಿಮ್ಮಲ್ಲಿಯೂ ಅಪರೂಪದ ಫೋಟೋಗಳ ಸಂಗ್ರಹವಿದ್ದರೆ ನಮಗೆ ಅಡಿಟಿಪ್ಪಣಿಯೊಂದಿಗೆ ಇಮೇಲ್ ಮಾಡಿ ಅಥವಾ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿಕೊಡಿ... ಆಯ್ಕೆಯಾದವುಗಳನ್ನು ಪ್ರಕಟಿಸಲಾಗುವುದು. –ಸಂ.

ಮಿಸ್ಟರ್ ಮೋಹನ್ ದಾಸ್, ನೀವು ಭಾರತಕ್ಕೆ ಹೋಗುವುದರಿಂದ ಪ್ರಯೋಜನವೂ ಇಲ್ಲ. ಅಲ್ಲಿ ನಿಮ್ಮನ್ನೀಗ ಯಾರೂ ...ಸುವುದಿಲ್ಲ ಎಂಬ ಸತ್ಯವನ್ನು ಮನಗಂಡು ನಿಮ್ಮ ಪ್ರವಾಸಕ್ಕೆ ...ತಿಯನ್ನು ನಿರಾಕರಿಸಲಾಗಿದೆ."

...ರ್ಗಲೋಕದ ಅಧಿಕಾರಿಗಳ ಮಾತಿಗೆ ಪ್ರತಿಕ್ರಿಯಿಸದ ...ನದಾಸರು ಮೌನವಾಗಿ ತಮ್ಮ ಕೊಠಡಿಯತ್ತ ನಡೆದರು.

...ಶಕ್ಕೆ ಹೋಗಲಾರದ ನೋವು ಒಳಗಿದ್ದರೂ ಹೊರಗೆ ...ಕೊಳ್ಳದೆ ತಮ್ಮ ಪಾಡಿಗೆ ಚರಕದಲ್ಲಿ ನೂಲು ತೆಗೆಯುತ್ತ ಕೂತ ...ನದಾಸರನ್ನು ಮಾತಾಡಿಸುವ ಧೈರ್ಯ ಕೃಷ್ಣಸ್ವಾಮಿಯವರಿಗಾಗಲ್ಲ, ...ತಾನೇ ಇಲ್ಲಿಗೆ ಬಂದ ತಾನು ದೇಶದಲ್ಲಿ ನಡೆಯುತ್ತಿರುವ ಎಲ್ಲ ...ನಗಳನ್ನು ಮೋಹನದಾಸರಿಗೆ ಹೇಳಬಾರದಿತ್ತು. ಅದನ್ನೆಲ್ಲ ...ಮೇಲೆಯೇ ಅವರು ದೇಶಕ್ಕೆ ಹೋಗಬೇಕೆಂದು ಹಠ ...ಬವುದು ಅನ್ನಿಸಿ ಮುಜುಗರವಾಯಿತು. ಹಾಗಿರುವಾಗಲೇ ...ಟ್ಟು ಕೃಷ್ಣಸ್ವಾಮಿಯವರು ಮಲಗಿದ್ದ ಹಾಸಿಗೆಯ ಪಕ್ಕ ...ಕೂತ ಮೋಹನದಾಸರು "ನಿಜ ಹೇಳಿ ದೇಶದ ಜನ ...ನಿಜಕ್ಕೂ ಮರೆತಿದ್ದಾರೆಯೇ? ಇಲ್ಲ. ಇಲ್ಲಿಂದ ... ಇಷ್ಟವಿರದ ಈ ಲೋಕದ ಅಧಿಕಾರಿಗಳು ಸುಳ್ಳು ...ದ್ದಾರೆಯೇ?"

...ಿ ಮೋಹನದಾಸರೆ ಮಾತು ಶುರು ...ದ್ದರಿಂದ ಕೃಷ್ಣಸ್ವಾಮಿಯವರು ಉತ್ತರಿಸಲೇ ...ತು.

...ಮಿಸಿ ಬಾಪು, ಮೊನ್ನೆ ಬಂದ ನಾನು ... ದೇಶದ ಕತೆಯನ್ನೆಲ್ಲ ನಿಮಗೆ ...ರದಿತ್ತು. ಅಧಿಕಾರಿಗಳು ಹೇಳಿದ್ದು ...ತ್ಯ ಮಾತ್ರ! ನಿಮ್ಮನ್ನು ಗುರುತಿಸಲಾಗದ ಒಂದು ...ಯೇ ದೇಶದಲ್ಲಿದ್ದರೂ, ತೀರಾ ಅಗೌರವಿಸುವಂತವರೇನಲ್ಲ ...ಯರು. ಈಗಲೂ ದೇಶದ ಸಾಮಾನ್ಯ ಜನತೆ ನಿಮ್ಮ ಬಗ್ಗೆ ... ಭಾವನೆ ಹೊಂದಿದ್ದಾರೆ."

...ಷ್ಣಸ್ವಾಮಿಯವರ ಮಾತು ಕೇಳಿ ಮೋಹನದಾಸರ ಮುಖದಲ್ಲಿ ...ಹಾಸ ಮೂಡಿತು. ತಮ್ಮ ಎಂದಿನ ಲವಲವಿಕೆಯ ಶೈಲಿಯಲ್ಲಿ "...ಸ್ವಾಮಿಯವರೆ, ಇದನ್ನು ಕೇಳಿದ ಮೇಲೆ ನಾನು ದೇಶಕ್ಕೆ ...ಲೇಬೇಕೆನ್ನಿಸಿದೆ. ಇದು ನನ್ನ ದೃಢ ನಿರ್ಧಾರ! ಅಧಿಕಾರಿಗಳು ... ಕೊಡುವವರೆಗೂ ನಾನು ಉಪವಾಸ ನಡೆಸುತ್ತೇನೆ, ಅದೂ ಈ ...ದ! ದಯಮಾಡಿ ಈ ವಿಚಾರವನ್ನು ಅವರ ಗಮನಕ್ಕೆ ತಂದುಬಿಡಿ" ...ು.

...ೋಹನದಾಸರ ಉಪವಾಸ ಸತ್ಯಾಗ್ರಹದ ವಿಷಯ ಕೇಳಿದ ...ರಿಗಳು ಗಲಿಬಿಲಿಗೊಂಡರು. ಏನು ಮಾಡುವುದೆಂದು ತೋಚದೆ ... ತಿಳಿಸಿದ ಕೃಷ್ಣಸ್ವಾಮಿಯವರನ್ನೇ ಪರಿಹಾರ ತೋರಿಸಲು ...ದರು. ಅದಕ್ಕವರು:

"...ಬಾಪು ಒಂದು ಸಾರಿ ತೆಗೆದುಕೊಂಡ ನಿರ್ಧಾರವನ್ನು ಯಾವ ...ಕ್ಕೂ ಬದಲಾಯಿಸುವುದಿಲ್ಲವಾದ್ದರಿಂದ ಅವರನ್ನು ಕೆಲದಿನಗಳ ...ಗೆ ಭಾರತಕ್ಕೆ ಕಳಿಸುವುದೇ ಒಳ್ಳೆಯದು" ಅಂದರು.

...ಂತರ ನಡೆದ ಅಧಿಕಾರಿಗಳ ಸಭೆಯಲ್ಲಿ ಸುದೀರ್ಘ ಚರ್ಚೆಯ ... ಭಾರತಕ್ಕೆ ಭೇಟಿ ನೀಡಲು ಮೋಹನದಾಸರಿಗೆ ಅನುಮತಿ ...ು ನಿರ್ಧರಿಸಲಾಯಿತು.

...ಮಾರನೇ ದಿನ ಬೆಳಿಗ್ಗೆ ಮೋಹನದಾಸರು ...ಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ...ಗ ನಗರ ಆಗತಾನೆ ಮೈಮುರಿದು ...ತ್ತು. ಇಮಿಗ್ರೇಷನ್ ವಿಭಾಗದಲ್ಲಿ ಅವರ ...ಪೋರ್ಟ್ ಪರಿಶೀಲಿಸಿದ ಅಧಿಕಾರಿಗೆ ...ಧಾನವಾಗಲಿಲ್ಲ.

"ಮಿಸ್ಟರ್ ಮೋಹನ್‌ದಾಸ್, ಈ ...ಟೋಗೂ ತಮಗೂ ಯಾವುದೇ ...ಲಿಕೆಯಾಗುತ್ತಿಲ್ಲ. ಅದೂ ಅಲ್ಲದೆ ಇದು ...ದೋ ಹಳೇ ಪಾಸ್‌ಪೋರ್ಟ್! ವಿಚಾರಣೆ ... ನಮ್ಮ ಅನುಮಾನ ನಿವಾರಣೆಯಾಗುವ ... ನೀವು ಕಸ್ಟಡಿಯಲ್ಲಿರಬೇಕಾಗುತ್ತದೆ" ಎಂದ ...ರಿ.

...ಮೋಹನದಾಸರು ಮುಗುಳ್ನಗುತ್ತ "ಹೌದು, ನೀವು ...ದ ಹಾಗೆ ಇದು ಬಹಳ ವರ್ಷಗಳ ಹಿಂದಿನ ಫೋಟೋ. ... ದಕ್ಷಿಣ ಆಫ್ರಿಕಾಕ್ಕೆ ಹೋಗಬೇಕಾದಾಗ ತೆಗೆಸಿದ್ದು" ಎಂದರು.


"ಈ ರೀತಿಯ ಹೇಳಿಕೆಗಳನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ, ...ಸೂದ ದಾಖಲೆಗಳಿಲ್ಲದೆ ದೇಶದೊಳಕ್ಕೆ ನುಸುಳಲು ಯತ್ನಿಸಿದ್ದೀರಿ ...ಿ ಆಪಾದಿಸಿ ಭಯೋತ್ಪಾದಕ ನಿಗ್ರಹ ಕಾನೂನಿನ ಅನ್ವಯ ನಿಮ್ಮನ್ನು ...ಸಬಹುದಾಗಿದೆ. ಆದರೆ ವಯಸ್ಸಾಗಿರುವ ನಿಮ್ಮ ಸ್ಥಿತಿಯನ್ನು ...ಣಿಸಿ ನಿಮಗೊಂದು ಕೊನೆಯ ಅವಕಾಶ ನೀಡುತ್ತೇವೆ. ಅದೆಂದರೆ, ...ದಾರರ ಗುರುತಿನ ಚೀಟಿ, ಕನಿಷ್ಠ ನೀವು ವಾಸಿಸುವ ಊರಿನ ವಾಸ ...ಕರಣ ಪತ್ರವನ್ನಾದರು ನೀವು ನೀಡಿದರೆ ನಿಮ್ಮ ಕೇಸನ್ನು ...ಸಹಾನುಭೂತಿಯಿಂದ ಪರಿಶೀಲಿಸಬಹುದು. ಹೇಳಿ ಏನು ಮಾಡುತ್ತೀರಿ?" ... ಅಧಿಕಾರಿ.

"ಮಾನ್ಯ ಅಧಿಕಾರಿಗಳೆ, ಈ ವಿಷಯವನ್ನು ನಾನೇ ಹೇಳಿಕೊಳ್ಳುವುದು ...ತವಲ್ಲವೆಂದು ಇದುವರೆಗೂ ಸುಮ್ಮನಿದ್ದೆ, ಆದರೆ ಹೇಳಲೇಬೇಕಾದ ...ಸ್ಥಿತಿ ಸೃಷ್ಟಿಯಾಗಿರುವುದರಿಂದ ಹೇಳುತ್ತಿದ್ದೇನೆ. ನನ್ನ ಪೂರ್ಣ ಹೆಸರು ...ಹನ್‌ದಾಸ್ ಕರಮಚಂದ್ ಗಾಂಧಿ ಎಂದು. ಜನ ನನ್ನನ್ನು ಬಾಪು ...ೂ ಕರೆಯುತ್ತಾರೆ. ಇನ್ನು ತಾವು ಹೇಳಿದ ದಾಖಲೆಗಳ್ಯಾವುವು ನನ್ನಲ್ಲಿಲ್ಲ, ಯಾಕೆಂದರೆ, ನಾನೀ ದೇಶದಲ್ಲಿದ್ದ ಸಮಯದಲ್ಲಿ ಅಂತಹ ದಾಖಲೆಗಳನ್ನು ಕೊಡುವ ಯಾವ ಕಾಯಿದೆಯೂ ಇರಲಿಲ್ಲ."

ಮೋಹನ್‌ದಾಸರ ಮಾತುಗಳನ್ನು ಅಸಹ್ಯೆಯಿಂದ ಆಲಿಸಿದ ಅಧಿಕಾರಿ ವ್ಯಂಗ್ಯವಾಗಿ ನಕ್ಕ, "ಹಾಗಾದರೆ ನಿಮ್ಮನ್ನು ಬಂಧಿಸದೆ ವಿಧಿಯಿಲ್ಲ" ಎಂದ ಅಧಿಕಾರಿ. ಅವರನ್ನು ದೆಹಲಿಯ ಕೇಂದ್ರ ಕಾರಾಗೃಹದಲ್ಲಿರಿಸಿದರು.

ರಾಷ್ಟ್ರಪತಿಯ ಚಿನ್ನದ ಪದಕ ಪಡೆಯುವ ಆಸೆಯಲ್ಲಿದ್ದ ಅಧಿಕಾರಿ ತಾನು ವಿಮಾನ ನಿಲ್ದಾಣದಲ್ಲಿ ಅಂತರರಾಷ್ಟ್ರೀಯ ಭಯೋತ್ಪಾದಕನನ್ನು ಬಂಧಿಸಿದ್ದಾಗಿ ಪತ್ರಿಕೆಗಳಿಗೆ ಹೇಳಿಕೊಂಡದ್ದರ ಪರಿಣಾಮವಾಗಿ ದೇಶದ ಎಲ್ಲ ಟಿ.ವಿ. ವಾಹಿನಿಗಳಲ್ಲಿ ದಪ್ಪಕ್ಷರಗಳ ಬ್ರೇಕಿಂಗ್ ನ್ಯೂಸ್ ಒಂದು ಬಿತ್ತರಗೊಳ್ಳತೊಡಗಿತು. ದೆಹಲಿಯ ವಿಮಾನ ನಿಲ್ದಾಣದಲ್ಲಿ ವಯೋವೃದ್ಧನಾದ ಅಂತರರಾಷ್ಟ್ರೀಯ ಭಯೋತ್ಪಾದಕನನ್ನು ಬಂಧಿಸಿ ವಿಚಾರಣೆಗೊಳಪಡಿಸಲಾಗಿದೆ.

ಕತೆ




ಮೋಹನದಾಸನೆಂಬ ಮುದುಕನೂ, ಭಾರತವರ್ಷವೂ

ವಿಶೇಷವೆಂದರೆ ಆತ ತನ್ನನ್ನು ಬಾಪು, ಮಹಾತ್ಮಾ ಗಾಂಧಿ ಎಂದು ಹೇಳಿಕೊಳ್ಳುತ್ತಿರುವುದು!



ರಾಷ್ಟ್ರಾದ್ಯಂತ ಸಂಚಲನ ಸೃಷ್ಟಿಸಿದ ಈ ಸುದ್ದಿ ಸರ್ಕಾರವನ್ನು ಸಂದಿಗ್ದಕ್ಕೆ ಸಿಲುಕಿಸಿತು. ಆದ್ದರಿಂದ ಪರಿಸ್ಥಿತಿ ತಹಬಂದಿಗೆ ಬರುವತನಕ ಮೋಹನದಾಸರನ್ನು ಕೋರ್ಟಿಗೆ ಹಾಜರು ಪಡಿಸದಿರಲು ನಿರ್ಧರಿಸಲಾಯಿತು. ಇದನ್ನೇ ಕಾಯುತ್ತಿದ್ದ ವಿರೋಧ ಪಕ್ಷಗಳು ಸರಿಯಾದ ಮಾಹಿತಿ ನೀಡಲು ಸರ್ಕಾರವನ್ನು ಒತ್ತಾಯಿಸತೊಡಗಿದವು.



ಆಗ ಸರ್ಕಾರ ಮೋಹನದಾಸರ ನೈಜ ಗುರುತು ಪತ್ತೆಹಚ್ಚಲು ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಲು ನಿರ್ಧರಿಸಿತು. ಜೊತೆಗೆ ಸೂಕ್ತ ನ್ಯಾಯಾಧೀಶರನ್ನು ಗುರುತಿಸಲು ಒಬ್ಬ ನಿವೃತ್ತ ಐಎಎಸ್ ಅಧಿಕಾರಿಯ ಏಕಸದಸ್ಯ ಸಮಿತಿಯೊಂದನ್ನು ರಚಿಸಿ ವರದಿ ನೀಡಲು ಅದಕ್ಕೆ ತೊಂಭತ್ತು ದಿನಗಳ ಗಡುವು ನೀಡಿತು. ಇದೆಲ್ಲದರ ನಡುವೆ ಮೋಹನ್‌ದಾಸರು ಸೆರೆ ಸೇರಿ ಇಪ್ಪತ್ತು ದಿನಗಳು ಕಳೆದುಹೋಗಿದ್ದವು. ಸರ್ಕಾರದ ಈ ಕ್ರಮಗಳಿಂದ ಸಂತುಷ್ಟವಾಗದ ವಿರೋಧ ಪಕ್ಷಗಳು ಮೋಹನ್‌ದಾಸರನ್ನು ಕೋರ್ಟಿಗೆ ಹಾಜರುಪಡಿಸಲು ಮತ್ತು ಸದನಸಮಿತಿಯೊಂದನ್ನು ರಚಿಸಲು ಪಟ್ಟುಹಿಡಿದು ಕೂತವು. ಇದಕ್ಕೆ ಸರ್ಕಾರ ಮಣಿಯದಿದ್ದಾಗ ವಿರೋಧಪಕ್ಷಗಳು ರಾಷ್ಟ್ರವ್ಯಾಪಿ ಬಂದ್‌ಗೆ ಕರೆ ನೀಡಿದವು.


ಬಂದ್ ವೇಳೆ ನಡೆದ ಹಿಂಸಾಚಾರದಲ್ಲಿ ನಲವತ್ತೈದು ಜನ ಮೃತಪಟ್ಟು, ಸುಮಾರು ಎರಡು ಸಾವಿರ ಕೋಟಿಗಳ ಸಾರ್ವಜನಿಕ ಆಸ್ತಿ ನಷ್ಟವಾಗಿದೆಯೆಂದು ಸರ್ಕಾರವೇ ಅಧಿಕೃತವಾಗಿ ಘೋಷಿಸಿತು. ಇಂತಹ ಸಮಾಜವಿರೋಧಿ ಬಂದ್‌ಗೆ ಪ್ರತಿಯಾಗಿ ತಾನೂ ಒಂದು ದಿನದ ಮುಷ್ಕರ ನಡೆಸಲು ಸರ್ಕಾರ ತೀರ್ಮಾನಿಸಿತು. ಆ ಬಂದ್‌ನಲ್ಲಿ ಸಹ ಸುಮಾರು ಐವತ್ತು ಜನ ಬಲಿಯಾಗಿ ಕೋಟ್ಯಂತರ ರೂಪಾಯಿಯ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಯಿತು.

ಕಾರಾಗೃಹದಲ್ಲಿದ್ದ ಮೋಹನ್‌ದಾಸರು ಮಾತ್ರ ಇದ್ಯಾವುದರ ಪರಿವೆಯಿಲ್ಲದೆ ಬಿಡುಗಡೆಯ ಹಾದಿ ಕಾಯುತ್ತ ಕೂತಿದ್ದರು.

ಇದೇ ಸಮಯಕ್ಕೆ ಸರಿಯಾಗಿ ಕೇಂದ್ರ ಚುನಾವಣಾ ಆಯೋಗ ಸಂಸತ್ತಿಗೆ ಚುನಾವಣೆಗಳನ್ನು ಘೋಷಿಸಿ ದಿನಾಂಕಗಳನ್ನು ಪ್ರಕಟಿಸಿತು. ಈ ನಡುವೆ ಟಿವಿ ಮತ್ತು ಪತ್ರಿಕೆಗಳು ಬಂಧಿತರಾದ ಮೋಹನ್‌ದಾಸರು ನಿಜವಾದ ಗಾಂಧಿ ಹೌದೋ ಅಲ್ಲವೋ ಎಂಬ ಬಗ್ಗೆ ಎಸ್‌ಎಂಎಸ್‌ಗಳನ್ನು ಆಹ್ವಾನಿಸಿ, ಮೊಬೈಲ್ ಕಂಪನಿಗಳ ಆದಾಯ ಹೆಚ್ಚಿಸಿ ತಾವೂ ಭರ್ಜರಿಯಾದ ಪಾಲು ಪಡೆದುಕೊಳ್ಳತೊಡಗಿದವು.

ಚುನಾವಣೆ ಬಂದಿರುವುದರಿಂದ ಆದಷ್ಟು ಬೇಗ ಮೋಹನ್‌ದಾಸರ ಸಮಸ್ಯೆಯನ್ನು ಬಗೆಹರಿಸುವಂತೆ ಆಡಳಿತ ಪಕ್ಷದ ಸದಸ್ಯರು ಸರ್ಕಾರದ ಮೇಲೆ ಒತ್ತಡ ತರತೊಡಗಿದರು. ಈ ಒತ್ತಡಕ್ಕೆ ಮಣಿದ ಕೇಂದ್ರ ಗೃಹ ಸಚಿವರು ಪ್ರಧಾನಿಗಳ ಒಪ್ಪಿಗೆ ಮೇರೆಗೆ ತಮ್ಮ ಇಲಾಖೆಯ ಉನ್ನತಾಧಿಕಾರಿಗಳ ತುರ್ತುಸಭೆ ಕರೆದರು.

ಆ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸನ್ಮಾನ್ಯ ಸಚಿವರು "ಮಿತ್ರರೆ, ಬಂಧಿತರಾಗಿರುವ ಮೋಹನ್‌ದಾಸರು ನಿಜವಾದ ಗಾಂಧಿಯೇ ಅಲ್ಲವೇ ಅನ್ನುವುದು ಮುಖ್ಯವಲ್ಲ, ಬದಲಿಗೆ ಜನರ ಮನಸ್ಸಿನಿಂದ ಈ ವಿಷಯವನ್ನು ಮರೆ ಮಾಡುವುದೇ ಅತ್ಯಂತ ಗಹನವಾದ ವಿಚಾರವಾಗಿದೆ. ಯಾಕೆಂದರೆ ಅವರು ನಿಜವಾದ ಗಾಂಧಿಯೇ ಆಗಿದ್ದರೂ ನಮಗೆ ಸಮಸ್ಯೆ ತಪ್ಪಿದ್ದಲ್ಲ! ಅವರು ಕೇಳಬಹುದಾದ ಪ್ರಶ್ನೆಗಳಿಗೆ ನಮ್ಮಲ್ಲಿ ಉತ್ತರವಿಲ್ಲ. ಅವರು ತೋರಿಸಿದ ಮತ್ತು ಮುಂದೆ ತೋರಬಹುದಾದ ದಾರಿಯಲ್ಲಿ ನಡೆಯಲು ನಮ್ಮಿಂದಾಗುವುದಿಲ್ಲ. ಆದ್ದರಿಂದ ಅವರು ನಿಜವಾಗಿಯೂ ಗಾಂಧಿಯೇ ಅಲ್ಲವೇ ಎಂದು ಗುರುತಿಸಿ ನಮಗೇನು ಆಗಬೇಕಾಗಿಲ್ಲ. ಆದ್ದರಿಂದ ಈ ವಿಷಯವಾಗಿ ನೀವೇನು ಮಾಡಬೇಕೆಂಬುದರ ಬಗ್ಗೆ ಸೂಚನೆಯನ್ನು ಇಂದು ರಾತ್ರಿ ಹತ್ತು ಗಂಟೆಯ ಒಳಗೆ ನೀಡಲಾಗುತ್ತದೆ ಮತ್ತು ನೀವು ಅಲ್ಲಿಯವರೆಗೂ ತಾಳ್ಮೆಯಿಂದಿರಿ" ಎಂದು ಹೇಳಿ ಸಭೆಯನ್ನು ಬರಕಾಸ್ತುಗೊಳಿಸಿದರು.



ಮಾರನೇ ದಿನ ಬೆಳಗ್ಗೆ ರಾಷ್ಟ್ರೀಯ ಟಿವಿ ವಾಹಿನಿಗಳಲ್ಲಿ ಬ್ರೇಕಿಂಗ್ ನ್ಯೂಸ್ ಎಂಬ ತಲೆಬರಹದಡಿಯಲ್ಲಿ ಸುದ್ದಿಯೊಂದು ಬಿತ್ತರವಾಗತೊಡಗಿತು. ಅದು ಹೀಗಿತ್ತು:

"ಇತ್ತೀಚೆಗೆ ದೆಹಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲ್ಪಟ್ಟಿದ್ದ ಮೋಹನ್‌ದಾಸನೆಂಬ ವಯೋವೃದ್ಧ ಭಯೋತ್ಪಾದಕ ನಿನ್ನೆ ರಾತ್ರಿ ಕಾರಾಗೃಹದಿಂದ ತಪ್ಪಿಸಿಕೊಂಡಿದ್ದಾರೆಂದು ಹೇಳಲಾಗಿದೆ. ಅವರ ನಿಗೂಢ ಕಣ್ಮರೆ ಬಗ್ಗೆ ತನಿಖೆ ಮುಂದುವರೆದಿದೆ. ಈ ಸಂಬಂಧ ಜೈಲಿನ ಉನ್ನತಾಧಿಕಾರಿಗಳನ್ನು ಅಮಾನತು ಮಾಡಲಾಗಿದೆ."

-ಕು.ಸ. ಮಧುಸೂಧನ್

ಸೋತು ಗೆದ್ದ ಬಿಷಪ್ ಮೊರಾಸ್



ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಕಮ್ಮನಹಳ್ಳಿ ಚರ್ಚ್ ಭೂವಿವಾದ ಒಂದು ಸುಖಾಂತ್ಯ ಕಂಡಿದೆ. ಜನಪರ ಹೋರಾಟಗಳು ಪ್ರಾಮಾಣಿಕವಾಗಿದ್ದಲ್ಲಿ ಜಯ ಖಂಡಿತ ಎಂಬ ಸಂದೇಶವನ್ನು ಈ ಭೂಹಗರಣದ ಬೆಳವಣಿಗೆ ಸಾಬೀತುಮಾಡಿವೆ.

ಬಿಷಪ್ ಬರ್ನಾಡ್ ಮೊರಾಸರು ಗೋಲ್ಡ್‌ಲೈನ್ ಬಿಲ್ಡರ್ಸ್‌ಗೆ ನೀಡಿದ್ದ ಕಮ್ಮನಹಳ್ಳಿ ಚರ್ಚ್‌ಗೆ ಸೇರಿದ 38,000 ಚದರ ಅಡಿ ಜಾಗದ ಗುತ್ತಿಗೆಯನ್ನು ರದ್ದುಪಡಿಸಲು ಮುಂದಾಗಿದ್ದಾರೆ. ಕಮ್ಮನಹಳ್ಳಿಯಲ್ಲಿ ಧರಣಿ, ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ, ಶುಭಶುಕ್ರವಾರವನ್ನು ಒಳಗೊಂಡಂತೆ ಒಂದು ವಾರಕ್ಕಿಂತ ಹೆಚ್ಚು ಕಾಲ ಚರ್ಚ್ ಪೂಜೆಗಳ ಬಹಿಷ್ಕಾರ ಈ ಎಲ್ಲಾ ಹೋರಾಟ ಸಕಾರಾತ್ಮಕ ಫಲ ನೀಡಿದೆ. ಏಪ್ರಿಲ್ 11ರಂದು ಧರ್ಮಾಧ್ಯಕ್ಷರ ಮನೆಯಲ್ಲಿ ಜನ ಮತ್ತು ವಿವಿಧ ಸಮಿತಿಗಳ ಗುರುಗಳ ಸಮ್ಮುಖದಲ್ಲಿ ಇದಕ್ಕೆ ಸಂಬಂಧಿಸಿದ ಸಭೆ ನಡೆಯಿತು.

ಕಮ್ಮನಹಳ್ಳಿ ಜನ ತಮ್ಮ ಮೇಲೆ ಮಾಡಿರುವ ಆರೋಪ ಸುಳ್ಳು ಎಂದು ಕ್ಷಮೆ ಕೇಳಬೇಕು ಮತ್ತು ತಮ್ಮ ಮೇಲೆ ಹಾಕಿರುವ ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕು ಎಂಬ ಎರಡು ಷರತ್ತುಗಳನ್ನು ಹಾಕಿದ್ದಾರೆ. ತಮ್ಮದೇನು ತಪ್ಪಿಲ್ಲದಿದ್ದರೂ ಕಮ್ಮನಹಳ್ಳಿ ಜನ ಪ್ರತಿಷ್ಠೆ ಬಿಟ್ಟು ಈ ಎರಡು ಷರತ್ತುಗಳನ್ನು ಒಪ್ಪಿಕೊಳ್ಳಲು ಸಿದ್ಧರಿದ್ದಾರೆ. ಆದರೆ ಅದಕ್ಕೆ ಮೊದಲು ಲೀಸ್ ಡೀಡ್ ರದ್ದಾಗಬೇಕು ಎಂಬುದು ಅವರ ಬೇಡಿಕೆ. ಇತ್ತ ಮಹಾಧರ್ಮಾಧ್ಯಕ್ಷರು ಸಮಸ್ಯೆ ಇತ್ಯರ್ಥಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿರುವುದು ಕೂಡ ಶ್ಲಾಘನೀಯ.

- ರೀಟಾ ರೀನಿ

ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ...

37 ಹುಳಿಮಾವು ಮತ್ತು ನಾನು



• ಇಂದಿರಾ ಲಂಕೇಶ್

ಲಂಕೇಶರ ಅನಾರೋಗ್ಯದ ಸುದ್ದಿ ಎಲ್ಲೆಡೆ ಕಾಡ್ಗಿಚ್ಚಿನಂತೆ ಹರಡಿತು. ಪ್ರತಿ ದಿನ ಸಂಜೆ ಬಹಳಷ್ಟು ಜನ ಆಸ್ಪತ್ರೆಗೆ ಬಂದು ಅವರನ್ನು ಮಾತನಾಡಿಸಿ ಹೋಗಲಾರಂಭಿಸಿದರು. ಜನ ಹೀಗೆ ಬರುತ್ತಿದ್ದರಿಂದ ಲಂಕೇಶರಿಗೆ ತುಂಬಾ ಕಸಿವಿಸಿಯಾಗುತ್ತಿತ್ತು. ಎಲ್ಲರ ಪ್ರಶ್ನೆಗಳಿಗೆ ಉತ್ತರ ಕೊಡಬೇಕು, ತಮ್ಮ ದೈಹಿಕ ನೋವಿನ ನಡುವೆಯೂ ಬಂದವರನ್ನು ಮಾತನಾಡಿಸಬೇಕು... ಇದೆಲ್ಲ ಅವರಿಗೆ ಕೋಪ ಬರಿಸುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ತಾವು ಆಸ್ಪತ್ರೆಯ ಮಂಚದ ಮೇಲೆ ಅಸಹಾಯಕರಾಗಿ ಬಿದ್ದಿರುವುದನ್ನು ಬೇರೆಯವರು ನೋಡುವುದು ಅವರಿಗೆ ಇಷ್ಟವಿರಲಿಲ್ಲ.

ಜಯದೇವ ಆಸ್ಪತ್ರೆ ಹೃದ್ರೋಗ ನಿವಾರಣೆಗೆ ಹೆಸರುವಾಸಿಯಾಗಿತ್ತು. ಹಾಗೆಯೇ ಡಾ. ಪ್ರಭುದೇವ್ ಕೂಡ ಹೃದ್ರೋಗ ತಜ್ಞರು. ಆದರೆ ಲಂಕೇಶರಿಗೆ ಹೃದ್ರೋಗ ಇರದಿದ್ದರಿಂದ ಅವರ ಲಿವರ್ ಸಮಸ್ಯೆಗೆ ಸೂಕ್ತ ಚಿಕಿತ್ಸೆ ಕೊಡಿಸಲು ಬೇರೆ ಕಡೆಗೆ ಕಳುಹಿಸಬೇಕಿತ್ತು. ಆದರೆ ಎಲ್ಲಿಗೆ ಕಳುಹಿಸುವುದು? ಅವರನ್ನು ಸರಿಯಾಗಿ ನೋಡಿಕೊಳ್ಳಬಲ್ಲ ವೈದ್ಯರು ಬೆಂಗಳೂರಿನಲ್ಲಿ ಎಲ್ಲಿದ್ದಾರೆ? ಲಿವರ್ ಟ್ರಾನ್ಸ್‌ಪ್ಲಾಂಟ್ ಮಾಡಿಸುವುದು ಯಾವ ವಿದೇಶಿ ಆಸ್ಪತ್ರೆಯಲ್ಲಿ, ಅದರ ಬಗ್ಗೆ ನಮಗೆ ಸೂಕ್ತ ಮಾರ್ಗದರ್ಶನ ನೀಡುವವರು ಯಾರು?

ಇಂತಹ ಪ್ರಶ್ನೆಗಳು ನಮ್ಮನ್ನು ಕಾಡುತ್ತಿರುವಾಗಲೇ ಲಂಕೇಶರ ಅನಾರೋಗ್ಯದ ಸುದ್ದಿ ಎಲ್ಲೆಡೆ ಕಾಡ್ಗಿಚ್ಚಿನಂತೆ ಹರಡಿತು. ಪ್ರತಿ ದಿನ ಸಂಜೆ ಬಹಳಷ್ಟು ಜನ ಆಸ್ಪತ್ರೆಗೆ ಬಂದು ಅವರನ್ನು ಮಾತನಾಡಿಸಿ ಹೋಗಲಾರಂಭಿಸಿದರು. ಜನ ಹೀಗೆ ಬರುತ್ತಿದ್ದರಿಂದ ಲಂಕೇಶರಿಗೆ ತುಂಬಾ ಕಸಿವಿಸಿಯಾಗುತ್ತಿತ್ತು, ಎಲ್ಲರ ಪ್ರಶ್ನೆಗಳಿಗೆ ಉತ್ತರ ಕೊಡಬೇಕು, ತಮ್ಮ ದೈಹಿಕ ನೋವಿನ ನಡುವೆಯೂ ಬಂದವರನ್ನು ಮಾತನಾಡಿಸಬೇಕು... ಇದೆಲ್ಲ ಅವರಿಗೆ ಕೋಪ ಬರಿಸುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ತಾವು ಆಸ್ಪತ್ರೆಯ ಮಂಚದ ಮೇಲೆ ಅಸಹಾಯಕರಾಗಿ ಬಿದ್ದಿರುವುದನ್ನು ಬೇರೆಯವರು ನೋಡುವುದು ಅವರಿಗೆ ಇಷ್ಟವಿರಲಿಲ್ಲ.

ನಮ್ಮ ಮಕ್ಕಳು ದೊಡ್ಡವರಾಗಿದ್ದರು. ಅದರಲ್ಲೂ ಗೌರಿ ಮತ್ತು ಬೇಬಿ ಹೊರಗಿನ ಪ್ರಪಂಚವನ್ನು ತಿಳಿದಿದ್ದರು. ನಮ್ಮ ಮಗ ಅಜಿತ್ ಕೂಡ ದೊಡ್ಡವನಾಗಿದ್ದರೂ ಅವನನ್ನು ನಾವೆಲ್ಲ ಚಿಕ್ಕವನು ಎಂದೇ ನೋಡುತ್ತಿದ್ದೆವು. ಅವನು ಕೂಡ ಅಕ್ಕಂದಿರು ಏನು ತೀರ್ಮಾನ ತೆಗೆದುಕೊಂಡರೂ ಸರಿ ಎನ್ನುತ್ತಿದ್ದ. ಇದೆಲ್ಲದರ ಮಧ್ಯೆ, ನಾನು ಅಸಹಾಯಕಿಯಾಗಿದ್ದೆ. ನಾನಾಯಿತು, ನನ್ನ ಮನೆ ಮತ್ತು ಅಂಗಡಿ ಆಯಿತು ಎಂದು ಬದುಕಿದ್ದವಳು ನಾನು. ಹೀಗಿರುವಾಗ ಯಾವ ಆಸ್ಪತ್ರೆ, ಯಾವ ಡಾಕ್ಟರ್, ಎಂತಹ ಚಿಕಿತ್ಸೆ ಒಂದೂ ನನಗೆ ಗೊತ್ತಿರಲಿಲ್ಲ.

ಆಗ ಡಾಕ್ಟರ್ ಫಿಲಿಪ್ ವರ್ಘೀಸ್ ಅವರ ಬಗ್ಗೆ ಗೊತ್ತಾಯಿತು. ಅವರು ಬೆಂಗಳೂರಿನಲ್ಲಿರುವ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಖ್ಯಾತ ಯಕೃತ್ ತಜ್ಞರಾಗಿದ್ದರು. ಅವರಿಗೆ ಫೋನ್ ಮಾಡಿದ ಗೌರಿ "ನೀವು ದಯವಿಟ್ಟು ಜಯದೇವ ಆಸ್ಪತ್ರೆಗೆ ಬಂದು ನಮ್ಮ ಅಪ್ಪನನ್ನು ನೋಡಿ, ಮುಂದಿನ ಕ್ರಮದ ಬಗ್ಗೆ ಸಲಹೆ ಕೊಡುತ್ತೀರಾ?" ಎಂದು ಕೇಳಿದಳು.

ಆದರೆ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಒಂದು ನಿಯಮವಿದೆ. ಅದೇನೆಂದರೆ ಅಲ್ಲಿ ಕೆಲಸ ಮಾಡುವ ವೈದ್ಯರು ಬೇರೆ ಆಸ್ಪತ್ರೆಗಳಿಗೆ ಹೋಗಿ ರೋಗಿಗಳನ್ನು ನೋಡುವಂತಿಲ್ಲ ಮತ್ತು ಖಾಸಗಿಯಾಗಿಯೂ ಪ್ರಾಕ್ಟೀಸ್ ಮಾಡುವಂತಿಲ್ಲ, ಆದ್ದರಿಂದ ಡಾ. ವರ್ಘೀಸ್ ಅವರು "ನಾನು ಅಲ್ಲಿಗೆ ಬರುವಂತಿಲ್ಲ, ನಿಮ್ಮ ತಂದೆಯವರನ್ನು ನಮ್ಮಲ್ಲಿಗೆ ಕರೆದುಕೊಂಡು ಬನ್ನಿ. ಇಲ್ಲೇ ನೋಡುತ್ತೇನೆ" ಎಂದರು.

ಲಂಕೇಶರನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ವರ್ಗಾಯಿಸುವುದು ಎಂದು ಗೌರಿ ಮತ್ತು ಬೇಬಿ ನಿರ್ಧರಿಸಿದರು. ಆಗ ಡಾ. ಪ್ರಭುದೇವ್ ಅವರು "ಲಂಕೇಶರ ಆರೋಗ್ಯ ಸೂಕ್ಷ್ಮವಾಗಿರುವುದರಿಂದ ಅವರು ಕಾರಿನಲ್ಲಿ ಹೋಗುವುದು ಬೇಡ. ಅವರನ್ನು ಆಂಬುಲೆನ್ಸ್‌ನಲ್ಲಿ ಕಳುಹಿಸುತ್ತೇನೆ" ಎಂದರು. ಬೇಬಿ ಅವರೊಂದಿಗೆ ಆಂಬುಲೆನ್ಸ್ ಏರಿದಳು. ಅದು ಬೆಂಗಳೂರಿನ ರಸ್ತೆಗಳಲ್ಲಿ "ಪಿಯ್ಯೂ ಪಿಯ್ಯೂ" ಎಂದು ಚೀರಿಕೊಳ್ಳುತ್ತಾ ಹೋದಾಗ ಲಂಕೇಶರಿಗೆ ಎಷ್ಟು ಕೋಪ ಬಂದಿತ್ತೆಂದರೆ "ಈ ದರಿದ್ರ ಆಂಬುಲೆನ್ಸ್‌ನಲ್ಲಿ ಯಾಕೆ ನನ್ನನ್ನು ಕರೆದುಕೊಂಡು ಹೋಗುತ್ತಿರುವುದು. ನಾನು ನನ್ನ ಕಾರಿನಲ್ಲೇ ಮಲಗಿಕೊಂಡು ಬರುತ್ತಿದ್ದೆ. ಇನ್ನೆಂದೂ ನನ್ನನ್ನು ಆಂಬುಲೆನ್ಸ್‌ಗೆ ಹತ್ತಿಸಬೇಡಿ" ಎಂದಿದ್ದರು.



1996ರಲ್ಲಿ ಪತ್ರಿಕೆ ತಂಡದ ಸದಸ್ಯರಾಗಿದ್ದ ಈ.ಚಂದ್ರ ತಾಳಿಕಟ್ಟೆ, ಎನ್.ಎಸ್.ಶಂಕರ್, ಇಂದ್ರಜಿತ್, ಸದಾಶಿವ ಶೆಣೈ, ಎಸ್.ಸತೀಶ್ ಮತ್ತು ಬಸವರಾಜು ಜೊತೆ ಲಂಕೇಶ್...

ಸೇಂಟ್ ಜಾನ್ಸ್‌ನಲ್ಲಿ ಹಲವಾರು ಟೆಸ್ಟ್‌ಗಳನ್ನು ಮಾಡಿದ ನಂತರ ಅಲ್ಲೇ ಅವರನ್ನು ಅಡ್ಮಿಟ್ ಮಾಡಿಕೊಳ್ಳಲಾಯಿತು. ಡಾ. ವರ್ಘೀಸ್ ಅವರು "ಸದ್ಯಕ್ಕೆ ಲಿವರ್ ಟ್ರಾನ್ಸ್‌ಪ್ಲಾಂಟ್‌ನ ಅವಶ್ಯಕತೆ ಇಲ್ಲ, ಅವರ ದೇಹದಲ್ಲಿ ಶೇಖರಣೆಗೊಂಡಿರುವ ನೀರನ್ನು ಹೊರಗೆ ತೆಗೆಯಬೇಕು. ಅದಕ್ಕೆ ಮೊದಲು ಪ್ರಯತ್ನಿಸೋಣ" ಎಂದರು. ಜೊತೆಗೆ ಲಂಕೇಶರಿಗೆ "ನಿಮ್ಮ ಆರೋಗ್ಯ ತುಂಬಾ ಕೆಟ್ಟಿಲ್ಲ, ಅದೆಷ್ಟೋ ಜನ ಡಯಾಬಿಟೀಸ್ ಇರುವವರು ಹೆಚ್ಚೂಕಮ್ಮಿ ಆಗಿ ಕೋಮಾ ಸ್ಥಿತಿಗೆ ಹೋಗುತ್ತಾರೆ. ಲಿವರ್ ಸಮಸ್ಯೆ ಇರುವವರು ತಾವು ಎಲ್ಲಿದ್ದೇವೆ, ಏನು ಮಾಡುತ್ತಿದ್ದೇವೆ ಎಂಬ ಅರಿವನ್ನೂ ಕಳೆದುಕೊಳ್ಳುತ್ತಾರೆ. ನಿಮಗೆ ಅಂತಹದ್ದು ಏನೂ ಆಗಿಲ್ಲ, ನಿಮ್ಮ ಎಂದು ಹೇಳಿ ಲಂಕೇಶರಲ್ಲಿ ಧೈರ್ಯ ತುಂಬಿದರು.

ಲಂಕೇಶರು ಕೆಲ ದಿನಗಳ ಕಾಲ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿರಬೇಕಾಗುತ್ತದೆ ಎಂದು ದೃಢವಾಯಿತು. ಆಗ ಆಸ್ಪತ್ರೆಯಲ್ಲಿ ಲಂಕೇಶರಿಗೆ ಬೋರ್ ಆಗಕೂಡದೆಂದು ಅವರಿದ್ದ ಆಸ್ಪತ್ರೆಯ ರೂಮಿಗೆ ಒಂದು ಟಿವಿ ಸೆಟ್, ವಿಸಿಆರ್ ಪ್ಲೇಯರ್ ಮತ್ತು ಹಲವಾರು ಸಿನಿಮಾ ಕ್ಯಾಸೆಟ್‌ಗಳನ್ನು ತೆಗೆದುಕೊಂಡು ಹೋಗಿ ಇಡಲಾಯಿತು. ಜೊತೆಗೆ ಎಂದಿನಂತೆ ನಾವು ಮದುವೆಯಾದಾಗ ಖರೀದಿಸಿದ್ದ ಸ್ಟೀಲ್ ಲೋಟಗಳು, ಅದರೊಂದಿಗೆ ದಿಂಬು, ಹೊದಿಕೆ, ಬಟ್ಟೆ, ಪುಸ್ತಕ, ಪತ್ರಿಕೆ, ಇತ್ಯಾದಿಗಳನ್ನೂ ಇಡಲಾಯಿತು.

ಲಿವರ್ ಸಮಸ್ಯೆಯಿಂದಾಗಿ ಕಾಲುಗಳಲ್ಲಿ ಸಂಗ್ರಹಗೊಳ್ಳುವ ನೀರನ್ನು ಹೊರತೆಗೆಯಲು ಸಾಮಾನ್ಯವಾಗಿ ಹೊಟ್ಟೆಯಲ್ಲಿ ಒಂದು ರಂಧ್ರವನ್ನು ಕೊರೆಯುತ್ತಾರಂತೆ. ಆದರ ಲಂಕೇಶರಿಗೆ ಡಯಾಬಿಟೀಸ್ ಕೂಡ ಇದ್ದಿದ್ದರಿಂದ ಹಾಗೆ ಮಾಡದೆ ಕೇವಲ ಔಷಧಿಗಳ ಮೂಲಕ ಆ ಸಮಸ್ಯೆಯನ್ನು ನಿವಾರಿಸಲು ವೈದ್ಯರು ನಿರ್ಧರಿಸಿದರು. ಪ್ರತಿ ದಿನ ಲಂಕೇಶರು ವೈದ್ಯರು ನಿಗದಿಪಡಿಸಿದ್ದಕ್ಕಿಂತ ಹೆಚ್ಚು ನೀರನ್ನಾಗಲಿ, ಇತರೆ ಪಾನಕಗಳನ್ನಾಗಲಿ ಕುಡಿಯುವಂತಿರಲಿಲ್ಲ. ಜೊತೆಗೆ ಅವರ ಮೂತ್ರ ವಿಸರ್ಜನೆಯ ಮೇಲೆ ನಿಗಾ ಇಟ್ಟು ಅದನ್ನು ಅಳತೆ ಮಾಡಿ ಲೆಕ್ಕ ಇಡಬೇಕಿತ್ತು, ಇದನ್ನೆಲ್ಲ ಪ್ರತಿ ದಿನ ಗೌರಿ ಅಥವಾ ಬೇಬಿ ಮಾಡುತ್ತಿದ್ದರು. ಅದೆಲ್ಲಕ್ಕಿಂತ ಲಂಕೇಶರಿಗೆ ಹೆಚ್ಚು ಕಷ್ಟಕೊಟ್ಟದ್ದು ಅವರ ಮಲಗುವ ಮಂಚದ ಕೆಳ ಭಾಗವನ್ನು ಏರಿಸುವ ಮೂಲಕ ಅವರ ಕಾಲುಗಳು ತಲೆಗಿಂತ ಹೆಚ್ಚಾಗಿ ಎತ್ತರದಲ್ಲಿ ಇರುವಂತೆ ಮಾಡಿದ್ದು. ಇದರಿಂದಾಗಿ ಲಂಕೇಶರಿಗೆ ಪುಸ್ತಕವನ್ನು ಓದುವುದು, ಟೀವಿ ನೋಡುವುದು ಎಲ್ಲ ಕಷ್ಟವಾಗುತ್ತಿತ್ತು.

ಆದರೂ ಲಂಕೇಶರು ಸುಮ್ಮನಿರುತ್ತಿರಲಿಲ್ಲ. ಮನೆಯಲ್ಲಿ ಮಾಡುವಂತೆ ಬೆಳಗ್ಗೆಯೇ ಎದ್ದು ಶೇವ್ ಮಾಡಿಕೊಂಡು, ಕಾಫಿ ಕುಡಿದು, ಸ್ನಾನ ಮಾಡಿ, ಆಫೀಸಿಗೆ ಹೋಗುವವರಂತೆ ಆಸ್ಪತ್ರೆಯಲ್ಲೂ 'ರೆಡಿ' ಆಗುತ್ತಿದ್ದರು. ಹಾಗೆ ರೆಡಿ ಆದವರು ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿಕೊಂಡೇ ಪತ್ರಿಕೆಯ ಕೆಲಸಗಳನ್ನು ಮಾಡುತ್ತಿದ್ದರು. ಪತ್ರಿಕೆಯ ಸಿಬ್ಬಂದಿ ಆಸ್ಪತ್ರೆಗೆ ಬಂದು "ಸಾರ್, ನಿಮ್ಮ ಕಾಲಂ ಅನ್ನು ಡಿಕ್ಟೇಟ್ ಮಾಡಿ, ನಾವು ಬರೆದುಕೊಳ್ಳುತ್ತೇವೆ" ಎಂದರು. ಆಗ ಲಂಕೇಶರು "ಏನು ಬೇಡ. ನಾನೇ ಬರೆಯುತ್ತೇನೆ" ಎಂದರು. ಲಂಕೇಶರ ಕಾಲುಗಳನ್ನು ಎತ್ತರದಲ್ಲಿರಿಸಿದ್ದರಿಂದ ಬೇಬಿ ಒಂದು ಸಣ್ಣ ಮರದ ಟೇಬಲ್ ತಂದು ತನ್ನ ಅಪ್ಪನಿಗೆ ಕೊಟ್ಟಳು. ಆ ಟೇಬಲ್‌ಅನ್ನು ತಮ್ಮ ದೇಹದ ಮೇಲಿಟ್ಟುಕೊಂಡು ಲಂಕೇಶರು ತಮ್ಮ ಎಲ್ಲಾ ಅಂಕಣಗಳನ್ನು ಬರೆಯುತ್ತಿದ್ದರು. ಎಷ್ಟರಮಟ್ಟಿಗೆ ಅಂದರೆ 'ಕಣ್ಣಾ ಮುಚ್ಚಾಲೆ' ಕಾಲಂಗೆ ಪೋಸ್ಟ್‌ಕಾರ್ಡ್‌ಗಳ ಮೂಲಕ ಬರುತ್ತಿದ್ದ ಪ್ರಶ್ನೆಗಳಿಗೂ ಲಂಕೇಶರೇ ಉತ್ತರಗಳನ್ನು ಆ ಕಾರ್ಡುಗಳ ಮೇಲೆ ಬರೆಯುತ್ತಿದ್ದರು.

ಎಂದಿನಂತೆ ಆಸ್ಪತ್ರೆ ಮತ್ತು ಆಫೀಸಿನ ನಡುವೆ ಅವರ ನೆಚ್ಚಿನ ಗಿರಿ ಮತ್ತು ಡ್ರೈವರ್ ರೇವಣ್ಣ ಸೇತುವೆಯಾಗಿ... ಪ್ರತಿವಾರದ ಪತ್ರಿಕಾ ತಂಡದ ಸಭೆ ಕೂಡ ಆಸ್ಪತ್ರೆ... ನಡೆಯುತ್ತಿತ್ತು, ಲಂಕೇಶರು ಆಸ್ಪತ್ರೆಯಲ್ಲಿದ್ದರೂ ... ಒಂದು ದಿನ ಪತ್ರಿಕೆ ಮುದ್ರಣಕ್ಕೆ ಹೋಗುವುದಾ... ಮಾರುಕಟ್ಟೆಗೆ ಬರುವುದಾಗಲಿ ತಡವಾಗಲಿಲ್ಲ.

ನಾನು ಪ್ರತಿ ದಿನ ಊಟ ಕೊಡಲು ಆ... ಹೋದಾಗ ಲಂಕೇಶರನ್ನು ನೋಡಿಕೊಂಡು ಬರು... ಆಗ ಲಂಕೇಶರೊಂದಿಗೆ ಹೆಚ್ಚಾಗಿ ಆಸ್ಪತ್ರೆಯಲ್ಲಿ ಸ... ಕಳೆದದ್ದು ಗೌರಿ ಮತ್ತು ಬೇಬಿ. ಹಗಲು ಒಬ್ಬರು, ... ಒಬ್ಬರು ಎಂದು ಸರದಿ ಮೇಲೆ ಅವರಿಬ್ಬರು ಅಪ್ಪನೊ... ಇರುತ್ತಿದ್ದರು. ಹಲವೊಮ್ಮೆ ಇವರಿಬ್ಬರಿಗೆ ಬ್ರೇಕ್ ಕೊ... ಗಿರಿ ಅಥವಾ ಬೇರೆ ಯಾರನ್ನಾದರೂ ಲಂಕೇ... ತಮ್ಮೊಂದಿಗೆ ಆಸ್ಪತ್ರೆಯಲ್ಲಿ ಇರಲು ಕೇಳಿಕೊಳ್ಳುತ್ತಿದ್ದ...

ಲಂಕೇಶರು ತಮ್ಮ ದೇಹದೊಳಗಾಗುತ್ತಿರುವ ನೋ... ಇತರರಿಗೆ ಹೆಚ್ಚು ತೋರಿಸಿಕೊಳ್ಳುತ್ತಿರಲಿಲ್ಲ, ಆದರೆ ಅ... ಅದರಿಂದಾಗಿ ದೈಹಿಕವಾಗಿಯೂ ಮಾನಸಿಕವಾಗಿ... ತತ್ತರಿಸಿದ್ದರು. ನಿದ್ದೆ ಎಂಬುದೇ ಅವರಿಗೆ ಮರೀಚಿಕೆಯಾ... ಹಿಂದೆಲ್ಲ ಸರಿಯಾದ ಸಮಯಕ್ಕೆ ನಿದ್ದೆ ಮಾಡಿ, ಬೆಳಗ್... ಎದ್ದೇಳುತ್ತಿದ್ದವರು ಆಸ್ಪತ್ರೆಯಲ್ಲಿ ನಿದ್ದೆ ಇ... ಕಂಗಾಲಾಗುತ್ತಿದ್ದರು. ಮಧ್ಯ ರಾತ್ರಿ ಎದ್ದು ಗಂಟೆಗ... ಓದುವುದು, ಅಥವಾ ತಮಗಿಷ್ಟವಾದ ಸಿನಿಮಾದ ಕ... ಹಾಕಿಸಿಕೊಂಡು ನೋಡುವುದು, ಇವೆಲ್ಲ ನಡೆಯು...

ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲೂ ಜನ ಅವ... ನೋಡಲು ಬರುತ್ತಿದ್ದರು. ಅಷ್ಟು ಹೊತ್ತಿಗೆ 'ಲಂಕೇ... ಇನ್ನು ಹೆಚ್ಚು ದಿನ ಇರಲ್ವಂತೆ. ಈಗಲೇ ಅವರನ್ನು ನೋ... ಬಂದರೆ ವಾಸಿ' ಎಂಬ ಮಾತು ಎಲ್ಲೆಡೆ ಹ... ಇದರಿಂದಾಗಿ ಅದೆಷ್ಟೋ ವರ್ಷಗಳ ಕಾಲ ಲಂಕೇಶ... ಮಾತನಾಡಿಸದಿದ್ದ ಅವರೊಂದಿಗೆ ಜಗಳವಾಡಿ ದೂರವಾ... ಜನರೂ ಆಸ್ಪತ್ರೆಗೆ ಬಂದು ಹೋಗಲಾರಂಭಿಸಿದ್ದರು. ... ಬಂದವರು ಚಿಂತಾಕ್ರಾಂತರಾದ ಮುಖಹೊತ್ತು ... ಎದುರು ಕೂರುತ್ತಿದ್ದದ್ದು ಲಂಕೇಶರಲ್ಲಿ ಒಂದು ರೀತಿ... ಕೋಪವನ್ನೂ, ಇನ್ನೊಂದು ರೀತಿಯಲ್ಲಿ ತಮ್ಮ ಭವಿ... ಬಗ್ಗೆಯೇ ಆತಂಕವನ್ನೂ ಮೂಡಿಸುತ್ತಿತ್ತು, ಆಗ ಅ... ಚಡಪಡಿಸಲಾರಂಭಿಸುತ್ತಿದ್ದರು.

ಇದೆಲ್ಲದರ ಮಧ್ಯೆಯೂ ಅವರು ತಮ್ಮ ... ಪ್ರಜ್ಞೆಯನ್ನು ಉಳಿಸಿಕೊಂಡಿದ್ದರು. ಒಮ್ಮೆ "ನ... ಅವರೊಂದಿಗೆ ಆಸ್ಪತ್ರೆಯಲ್ಲಿದ್ದಾಗ ದಲಿತ ಕವಿ ಸಿದ್ದಲಿಂ... ಬಂದರು. ಆಗ ಲಂಕೇಶರು "ಏನ್ರೀ ಸಿದ್ದಲಿಂಗಯ್ಯ, ... ನನ್ನ ಬಗ್ಗೆ ಏನನ್ನುತ್ತಿದ್ದಾರೆ?" ಎಂದು ಕೇಳಿದರು. ಆ... ಸಿದ್ದಲಿಂಗಯ್ಯನವರು "ಲಂಕೇಶ್ ತುಂಬಾ ಮೆತ್ತಗಾಗಿ... ಎಲ್ಲರೊಂದಿಗೆ ಚೆನ್ನಾಗೇ ಮಾತನಾಡುತ್ತಿದ್ದಾರೆ. ... ಮೇಲೂ ರೇಗಾಡುತ್ತಿಲ್ಲ ಎನ್ನುತ್ತಿದ್ದಾರೆ" ಎಂದರು.

ಅದನ್ನು ಕೇಳಿ ನಕ್ಕ ಲಂಕೇಶರು "ಎಲ್ಲರೂ ಇ... ಹೋಗೇ ಬಿಡ್ತಾನೆ ಅಂತಾ ಸಂತೋಷಪಡುತ್ತಿರಬಹು... ನಾನು ಅಷ್ಟು ಬೇಗ ಹೋಗುವುದಿಲ್ಲ, ಕೆಲವರಿಗೆ ಇ... ಇನ್ನೂ ಬದುಕೇ ಇದ್ದಾನೆ ಅಂತ ಬಹಳ ನಿರಾಶೆ ಆಗ... ಎಂದು ಉತ್ತರಿಸಿದರು.

(ಮುಂದುವರೆಯುವುದು)

ಶ್ರೀ ಶ್ರೀ ರವಿಶಂಕರರವರಿಗೆ...

ನಾವು ನಕ್ಸಲರಲ್ಲ ಸ್ವಾಮಿ
ಎರಡು ಅಕ್ಷರ ಕಲಿಯಲು ಹಂಬಲಿಸಿದವರು
ಭಕ್ಷಕರೇ ತುಂಬಿದ ಜಗದಲ್ಲಿ
ಶಿಕ್ಷಿತರಾಗುವ ಕನಸ ಹೊತ್ತು ನಡೆದವರು


ನಿತ್ಯ ದಹಿಸುವ ಹಸಿವಿಗೆ ಹೆದರಿ
ಒಂದೊತ್ತಿನ ತುತ್ತಿಗಾಗಿ ಶಾಲೆ ಸೇರಿದವರು

ಬಿಸಿ ಊಟದಲ್ಲಿನ ಬಾಲು ಹುಳುಗಳ
ಹೆಕ್ಕಿ ತೆಗೆದು ಖುಷಿಯಿಂದಲೇ ಉಂಡವರು

ಮದ್ದು ಗುಂಡುಗಳ ಮಾತೆಲ್ಲಿ? ಆಡುವ
ಗೋಲಿಗುಂಡುಗಳ ಕೊಳ್ಳಲಾಗದವರಲ್ಲಿ
ಎಚ್ಚರಗೊಳ್ಳುತ್ತವೆ ಹಳ್ಳದಲ್ಲಿ ಸಿಕ್ಕಿದ
ಗಜ್ಜುಗಗಳ ಉಜ್ಜಿ-ಉಜ್ಜಿ ಬಿಸಿ ಮುಟ್ಟಿಸಿಕೊಂಡು

ಬಡತನದಲ್ಲಿಯೇ ಬೆಂದವರ ಕೈಯಲ್ಲಿ
ಎಲ್ಲಿಂದ ಬರಬೇಕು ಬಂದೂಕು?
ನಿಮ್ಮ ಧ್ಯಾನದ ತರಗತಿಗಳ ನೆರವಿರದೆ
ಹಿಂಸೆಗಿಳಿಯದೇ, ಶಾಂತವಾಗಿಯೇ ಗೆಲ್ಲುತ್ತೇವೆ ಈ ಬದುಕು!

ಚಿತ್ರುಗಳು ಇರದ ಶಾಲೆಗಳಲ್ಲಿ ಚಿತ್ತವಿಟ್ಟು
ಕಲಿತ, ಅಂಬೇಡ್ಕರ್, ವಿಶ್ವೇಶ್ವರಯ್ಯರಂತಾಗ ಬಯಸಿದವರು
ನಾವು ನಕ್ಸಲರಲ್ಲ ಸ್ವಾಮಿ
ಎರಡು ಅಕ್ಷರ ಕಲಿಯಲು ಹಂಬಲಿಸಿದವರು



• ವಾಗೀಶ ಪಾಟೀಲ

ಈ ಮೇಷ್ಟ್ರು ಮಾಡೋ ಕ್ಯಲಸಕ್ಕೆ ಅರ್ಧ ಸಂಬಳ ಕೊಡಬೇಕು

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ರಬಿದ್ದ ಜಾಗ ನೋಡಲು ರಾಜಕಾರಣಿಗಳು ...ಡುತ್ತಿರುವ ಸುದ್ದಿ ಕೇಳಿದ ಕಾಳಮಾವ,

"ಈಗೋಡಾಡಿದರೇನು ಬತ್ನ ಆರು ತಿಂಗಳಿಂದೆ ...ರಾಗಬೇಕಾಗಿತ್ತು" ಎಂದ.

"ಈಗ್ಲು ಸುಮ್ಮನೆ ಓಡಾಡ್ತ ಅವುರೆ ಕಣಮಾವ. ಇವ್ರುರ ...ಏನೂ ಆಗದಿಲ್ಲ, ಯಾಕೆ ಅಂದ್ರೆ ಇವುರು ಯಾವ ...ದಲ್ಲಿ ಯಾವ ಸಮಸ್ಯೆ ಬಗೆಹರಿಸಿದ್ದರೂ?" ಎಂದ

"ಆ ಎಡೂರಪ್ಪಾಕ್ಲ ಅಂಗಾಡ್ತ ಅವ್ರುನೆ?" ಎಂದ ಸೀರ.

"ಅಡದೇನೂ ಅವುನಿರದೇ ಅಂಗಲವೇನೊ. ಆ ಬಿಜೆಪಿ ...ತಿರಗ ಕರದು ತನ್ನ ಮುಖ್ಯಮಂತ್ರಿ ಮಾಡ್ತರೆ ...ಂಡವುನಲ್ಲಾ ಅವುನಿಗಿಂತ ದಡ್ಡ ಯಾರಿದ್ದರೂ ಅಂತ."

"ಅಂಗರೆ ಮಾಡಕುಲ್ಲ ಅಂತಿಯಾ."

"ಯಾವ ಕಾರಣಕೂ ಮಾಡದಿಲ್ಲ. ಮುಗಿತು ಇವುನ ... ಇನ್ನೇನಿದ್ರು ಸನ್ಮಾನ ಮಾಡಿಸಿಗಂಡು ...ರಿವುರಕೋಗದೆ ಬೆಪ್ಪು."

"ಅಲ್ಲಾ, ಈಗ ಬರಗಾಲ ಬಂದಿರೊ ಊರ ...ತಿಕ್ಕಂಡೋಯ್ತನೆ ಅಂದ್ರೆ, ಇವುನು ...ಖ್ಯಮಂತ್ರಿಯಾಗಿದ್ದಾಗ ಏನು ಕ್ಕಿಸಿತಿದ್ದ?"

"ಅಂತ ಪ್ರವಾಹ ಬಂದು ಜನಗಳ್ಯಲ್ಲಿ ...ಗಂಡೋದಾಗ್ಲೆ ಅವುನು ಸುತ್ತೂರು ಮಠದಲ್ಲಿ ...ಖ ತಗಿತಿದ್ದ ಕಣಮಾವ. ಅವುನಿಗೆ ಅವುನ ...ಕ್ಕೆ ಮುಂದೆ ಯಾವುದು ಏನೂ ಅನ್ನಸದಿಲ್ಲ ...ಮಾವ. ಅಲ್ಲಾ, ಬರಗಾಲದ ಜಾಗದಲ್ಲಿ ...ಗಾಡಿ ಅಷ್ಟು ದುಡ್ಡು ಕೊಡಿ ಇಷ್ಟು ದುಡ್ಡು ... ಅಂತ ಸದಾನಂದ ಗೌಡನಿಗೆ ಸಲಹೆ ...ತ್ತೆನೆ. ಅದೋಗ್ಲಿ ಸದಾನಂದ ವಳ್ಳೆ ಕ್ಯಲಸ ...ತ್ತನೆ ಅಂತ ಹೊಗಳುತಲೇ ನಾನು ತಿರಗ ...ಖ್ಯಮಂತ್ರಿ ಆಯ್ತಿನಿ ಅಂತನಲ್ಲ, ಕೇಳಿಸಿಗಂಡ ...ಸದಾನಂದನೆ ಇರಲಿ ಅನ್ನಕುಲವೆ."

"ಸದಾನಂದ ಗೌಡ ವಳ್ಳೆ ಮನುಸ್ನಂಗವುನೆ ..." ಎಂದ ಕಾಳಮಾವ.

"ಅವುನ್ನ ಅವುನೆ ಹೊಗಳಿಕಂಡವುನೆ ...ಮಾವ."

"ಏನಂತವಾ?"

"ನಾನು ಅಹಂಕಾರ ಮಾಡುವುದಿಲ್ಲ, ...ನೂ ಅಲ್ಲ ಅಂತ ನಗಾಡಿಕಂಡೆ ಹೊಗಳಿಕಂಡವುನೆ."

"ಅವುನು ಆ ಮಾತಂತನೆ ಅಂದ್ರೆ ಯಾರಿಗೊ ...ರತನೆ."

"ಎಡೂರಪ್ಪನ ಕುರತೆ ಹೇಳಿರೊ ಮಾತದು. ಸದಾನಂದ ...ಯಾವಾಗ್ಲು ನೇರವಾಗಿ ಹೇಳದಿಲ್ಲ, ಆದ್ರು ಮಾವ ...ವಾಗ್ಲು ಅರಾಜಕ ಸರಕಾರ ಅಂದ್ರೆ ಇದೆಯಾ."

"ಅಂಗಂತಿಯಾ?"

"ಊ ಕಣಮಾವ. ಯಾವ ಮಂತ್ರಿನೂ ಸದಾನಂದ ಗೌಡನ ಹಿಡತದಲ್ಲಿಲ್ಲ. ಅವುರಷ್ಟಕವುರು ಅರಾಮಾಗ್ಯವುರೆ. ಇನ್ನು ಎಮ್ಮೆಲ್ಲೇಗಳಂತೂ ಮೇಷ್ಟ್ರೇ ಇಲ್ಲದ ಕ್ಲಾಸಲ್ಲಿ ಹುಡುಗರು ಹ್ಯಂಗಿರತರೊ ಅಂಗವುರೆ. ಅಂಗಾಗಿ ಇತ್ತ ಮಂತ್ರಿಗಳು, ಎಮ್ಮೆಲ್ಲೆಗಳ ಅರ್ಧಕರ್ಧ ಸಪೋರ್ಟಿಲ್ದೆಯಿದ್ರು ಮುಖ್ಯಮಂತ್ರಿಯಾಗಿ ನಗಾಡಿಕಂಡು ಹೋಯ್ತಾ ಅವುನೆ, ಇದಕೇನೇಳ್ತಿ."

"ನೋಡು ಮತ್ತೆ, ಇವುನ್ಯಂಥಾ ಇವುನಿದ್ದನೂ."


"ಯಾರ ಸುದ್ದಿನಪ್ಪ ಮಾತಾಡ್ತಯಿರದು ನೀವು?" ಎಂದುಕೊಂಡು ವಾಟಿಸ್ಸೆ ಬಂದ.

"ಸದಾನಂದ ಗೌಡ್ರ ಸುದ್ದಿ ಕಂಡ್ಯ" ಎಂದಳು ಜುಮ್ಮಿ.

"ನೀನೇನಕ್ಕ ಜೆಡಿಎಸ್‌ನೋರ ತರ ಸದಾನಂದ ಗೌಡ್ರು ಅಂತಿಯಲ್ಲಾ?"

"ಅಂಗರೆ ಜೆಡಿಎಸ್‌ನೋರು ಭಾಳ ಗೌರವ ಕೊಟ್ಟರೆ?"

"ದ್ಯಾವೇಗೌಡ್ರು ಹೇಳಿದ ಕ್ಯಲಸ ಮಾಡೋರಿಗ್ಯಲ್ಲ ಜೆಡಿಎಸ್‌ನೋರು ರೆಸ್ಪೆಕ್ಟ್ ಕೊಡ್ತರೆ. ನೋಡು ಎಡೂರಪ್ಪ ಇದ್ದಾಗ ಅವುರಿವರ ಭುಜದ ಮ್ಯಾಲೆ ಕೈಯಾಯ್ಕಂಡು, ಚೆತ್ತಾದ ಯಣ್ಣೆ ಪಾರ್ಟಿ ತರ ನೈಸ್ ರಸ್ತೆ ಹುಡಿಕ್ಕಂಡೋಯ್ತಿದ್ದ



ದ್ಯಾವೇಗೌಡ್ರು ಈಗ ಮುದ್ದೆ ತುತ್ತು ಗಂಟ್ಯಲ್ಲಿ ಸಿಗಾಯ್ಕಂಡತಂಗೆ ಸುಮ್ಮನಾಗ್ಯವುರೆ. ಕುಮಾರಣ್ಣ ಬಿಜೆಪಿ ಬುಟ್ಟು ಕಾಂಗ್ರೆಸ್ ಚೈತ ಕುಂತವುನೆ. ದಿಸೀಸ್ ವಂಡ್ರುಪುಲ್ ಪಾಲಿಟಿಕ್ಸ್."

"ಕುಮಾರಸ್ವಾಮಿಯ ಪೊಲೀಸ್‌ನೋರ್ಯಾಕ್ಲ ಅರೆಸ್ಟು ಮಾಡಕ್ಕೋಗಿದ್ರು?" ಎಂದ ಸೀರ.

"ಅರೆಸ್ಟು ಮಾಡಕ್ಕೆ ಹೋಗಿರಲಿಲ್ಲ ಚಿಗಪ್ಪ. ಅರೆಸ್ಟು ಮಾಡಬವುದು ಅಂತ ಮದ್ಲೆ ಹೋಗಿ ಆಂಟಿಸಿಪೇಟರಿ ಬೇಲ್ ತಗಂಡವುನೆ ಅಂದ್ರೆ ಅದಿನ್ಯಂಥಾ ಕ್ಯಲಸ ಮಾಡಿದ್ದ ಲ್ಯಕ್ಕ ಹಾಕು."

"ನೋಡು ಮತ್ತೆ, ಮಹಾ ಸಾಬಸ್ತನಂಗೆ ಮಾತಾಡ್ತನೆ."

"ಅಂತದೇನು ಮಾಡಿದ್ದುನ್ಲ?" ಎಂದಳು ಜುಮ್ಮಿ.

"ಅಂತದ್ದೇನು ಮಾಡಿದ್ದ ಅನ್ನಬ್ಯಾಡ ಕಣಕ್ಕ, ಮಾಡಿದ ಕ್ಯಲಸ್ಯಲ್ಲ ಅರೆಸ್ಟಾಗೊ ಅಂತವೆಯಾ. ಇದ್ದ ಇಪ್ಪತ್ತು ತಿಂಗಳಲ್ಲೇ ಟೋಟಲ್ಲಿ ಇಪ್ಪತ್ತು ತಿಂಗಳು ಜ್ಯೈಲಿಗೋಗೊ ಕ್ಯಲಸ ಮಾಡ್ಯವುನಲ್ಲಾ, ಇನ್ನೇನಾರ ಎಡೂರಪ್ಪನಂಗೆ ಮೂರೂವರೆ ವರ್ಷ ಇದ್ರೆ ಎಡೂರಪ್ಪನ್ನು ಮೀರುಸ್ತಿದ್ದನೇನಪ್ಪ."

"ಎಡೂರಪ್ಪನ್ನ ಜ್ಯೈಲಿಗೆ ಕಳಿಸಿರೊ ಲೋಕಾಯುಕ್ತ ಜಡಜು, ನೋಡಿದೇಟಿಗೆ ಹೆದ್ರಿಕಂಡು ಬೇಲ್ ತಗಂಡವುನೆ ಕಣೊ ವಾಟಿಸ್ಸೆ" ಎಂದ ಉಗ್ರಿ.

"ಎಜ್ಜಾಕ್ಟ್ಲಿ ಕರಟ್. ರೇವಣ್ಣ ಧರಮಸಿಂಗನ ಜೊತೆ ಸೇರಿಕಂಡು ಜ್ಯೈಲು ದಾರಿ ನೋಡ್ತಯಿದ್ರೆ, ಇವುನು ಚೆನ್ನಿಗಪ್ಪನ ಮಾತ ಕೇಳಿ ಸಿಗಾಯ್ಕಂಡವುನೆ. ಆ ಚೆನ್ನಿಗಪ್ಪನಂಥೋರ ಮಾತುನೂ ಕೇಳ್ತನೆ ಅಂದ್ರೆ, ಅವುನೆ ದಬ್ಬೆದಾರ, ಇವುನೆ ಕಾನಸ್‌ಟೇಬಲ್ಲು ಅನ್ನಂಗಾಯ್ತಪ್ಪ."

"ಅವುರ ಸುದ್ದಿ ಅಂಗಿರ್ಲಿ, ಇಸುಗೂಲು ಮೇಷ್ಟ್ರಾಕ್ಲ ಹುಡುಗರ ಪಾಸು ಪೇಲು ಮಾಡದಿಲ್ಲ ನೀವೆ ಮಾಡಿಕಳಿ ಅಂತ ಶಡತಗಂಡಿದ್ದರಂತೆ" ಎಂದ ಕಾಳಮಾವ.

"ನಮ್ಮ ಕಾಳದೊಡಪ್ಪ ಸ್ಕೂಲಿಗೋಗದೆಯಿದ್ರು ಸ್ಕೂಲುಡ್ರು ಬಗ್ಗೆ ಕಾಳಜಿ ವಯಿಸಿರೊ ಕಾಲುಭಾಗ ಈ ಪಾಠ ಹೇಳೋ ಮೇಷ್ಟ್ರಿಗಿದ್ರು ಸಾಕಾಗಿತ್ತು ಕಂಡ್ರೊ. ಈ ಮುಂಡೆಮಕ್ಕಳು ಈ ತರ ಸರಕಾರವ ಬ್ಲಾಕ್‌ಮೇಲ್ ಮಾಡ್ತಿರಲಿಲ್ಲ."

"ಅಂಗರೆ ಬ್ಲಾಕ್‌ಮೇಲ್ ಮಾಡಿದ್ದರೆ?"

"ಊ ಕಣೊ ಉಗ್ರಿ. ಮದ್ಲೆ ಕ್ವಶ್ಚನ್‌ಪೇಪರ್ ಔಟಾಗಿ ಹುಡ್ರು ಹೆದ್ರಿಕಂಡು ಏನೇನು ಬರದಿದ್ದವ್ರೊ. ಅಂತದ್ರುಲಿ ಇವುರ್ ಬ್ಯಾರೆ ನಮ್ಮ ಸಂಬಳ ಹೆಚ್ಚು ಮಾಡಿದ್ರೆ ಮಾತ್ರ ಆನ್ಸರ್ ಪೇಪರ್ ನೋಡ್ತಿವಿ, ಇಲ್ಲ ಅಂದ್ರೆ ಇಲ್ಲ ಅಂತರೆ ಅಂದ್ರೆ. ಈ ನನಮಕ್ಕಳಿಗೆ ಮಕ್ಕಳ ಭವಿಷ್ಯಕಿಂತ ಇವುರ ಸಂಬಳನೇ ಮುಖ್ಯ ಆಯ್ತಲವೆ? ಇದು ಬ್ಲಾಕ್‌ಮೇಲಲವೆ?"

"ಮೇಷ್ಟ್ರುಗಳ್ಯಾಕ್ಲ ಅಂಗೆ ಬೈತಿ?"

"ಬೈಸಿಗಳೊ ತರ ಅವುರೆ ಕಣಕ್ಕ."

"ಯಾಕಂಗವುರೆ?"

"ಸಂಬಳ ಜಾಸ್ತಿ ಆಗಿರದ್ಕೆ ಕಣಕ್ಕ. ಅವುರ ಕ್ಯಲಸಕ್ಕೆ ಪಕ್ಕ ಸಂಬಳ ಕೊಟ್ಟಿದ್ರೆ ನಮ್ಮಂಗೆ ಇರೋರು. ಯಾವಾಗ ಜೇಬು ತುಂಬ ಸಂಬಳ ಸಿಕ್ತೋ, ಆಗ್ಲಿಂದ ಜೆಪ್ರುಣಿ ಬಡ್ಡಿಮಕ್ಕಳಾಗ್ಯವುರೆ. ಬಾರ್ ಅಂಡ್ ರೆಸ್ಟೋರೆಂಟಿಗೋಗಿ ಕೂತ್ರೆ ಕುಡುದುಬುಟ್ಟು ಮಾತಾಡ್ತರೆ ವರತು ಬಿಲ್ ಬಂದಾಗ ಜೇಬಿಗೆ ಕೈಯಾಕದಿಲ್ಲ ಗೊತ್ತ?"

"ವಾಟಿಸ್ಸೆಗೆ ಸಿಟ್ಯಾಕೆ ಅಂತ ಗೊತ್ತಾಯ್ತೇನೆ?" ಎಂದ ಉಗ್ರಿ.

"ನಂದು ನಿಜವಾದ ಸಿಟ್ಟು ಕಣೊ ಉಗ್ರಿ. ಎಪ್ಪತ್ತು ಎಂಭತ್ತು ಸಾವುರ ಸಂಬಳ ತಗಳೊ ಕೆಲವರು ಒಂದು ಪೇಪರ್ ತಗಳದಿಲ್ಲ, ಒಂದು ಹೊಸ ಪುಸ್ತಕ ತಗಳದಿಲ್ಲ, ನಮ್ಮಂಥೋರು ಜೊತೆಲೋಗಿ ಕುಡುದು ಇವುರ ನಗಿಸಿದ್ರು ಕೂಡ ಬಿಲ್ ಕೊಡದಿಲ್ಲ, ಕೊಟ್ರು ಸಪ್ಲೈ ಮಾಡಿದ ಹುಡುಗರಿಗೆ ಟಿಪ್ಸ್ ಕೊಡದಿಲ್ಲ."

"ಯಲ್ಲಾರು ಅಂಗೆ ಇದ್ದರೇನೊ? ವಳ್ಳೆ ಮೇಷ್ಟ್ರೂ ಅವುರೆ."


"ಅವುರ ಪರಸಂಟೇಜ್ ಕಮ್ಮಿ ಆದೆ ಕಣೊ ಉಗ್ರಿ. ಇವುರು ಮಾಡೋ ಕ್ಯಲಸಕೆ ಅರ್ಧ ಸಂಬಳ ಕೊಡಬೇಕು. ಯಾಕಪ್ಪ ಅಂದ್ರೆ ಇವುರು ಪಾಠ ಮಾಡದೆ ಆರು ತಿಂಗಳು ಗೊತ್ತ?"

"ಅದ್ಯಂಗೇಳ್ತಿಯೋ?"

"ನೋಡೋ ಉಗ್ರಿ, ಸ್ಕೂಲ್ ಅಡಮಿಷನ್ ಮುಗಿದ ಮ್ಯಾಲೆ ಇವುರು ನಿಜವಾಗ್ಲು ಪಾಠ ಮಾಡದು ಜುಲೈ ತಿಂಗಳಿಂದ ಡಿಸೆಂಬರ್ ತಿಂಗಳವರಿಗೆ. ಅಲ್ಲಿಗೆ ಆರು ತಿಂಗಳಾಯ್ತು. ವರ್ಷದ ಸಂಬಳ ಯಂಗೆ ತಗತ್ತರೆ ಅಂತ? ಸರಕಾರ ಇನ್ನು ಮುಂದೆ ಪಾಠ ಮಾಡಿದೋನು ಅದೇ ಸಂಬಳದಲ್ಲಿ ವ್ಯಾಲುವೇಷನ್ ಕೂಡ ಮಾಡಬೇಕು. ಇಲ್ಲ ಅಂದ್ರೆ ವಜಾ ಮಾಡ್ತಿವಿ ಅನ್ನಬೇಕು. ಕರ್ನಾಟಕ ಬರಗಾಲ ಬಂದು ಜನಗಳಿಗೆ ಕುಡಿಯಕ್ಕೆ ನೀರಿಲ್ಲ, ದನಗಳಿಗೆ ಮೇವಿಲ್ಲ, ಬಡುವುರು ರಾಜ್ಯನೆ ಬುಟ್ಟು ಮಾರಾಷ್ಟ್ರ ಆಂದ್ರ, ಬೆಂಗಳೂರು ಕಡಿಕೆ ಹೋಯ್ತಾಯಿರುವಾಗ ಇವುರು ಜಾಸ್ತಿ ಕೂಲಿ ಕೊಡಿ ಅಂತ ಸ್ಟ್ರೈಕ್ ಮಾಡ್ತರೆ ಅಂದ್ರೆ. ನಾನೆ ಮುಖ್ಯ ಮಂತ್ರಿಯಾಗಿದ್ರೆ ಎಸ್ಮಾ ಜಾರಿ ಮಾಡಿ ಎಗ್‌ಜಾಂ ಬರದ ಹುಡುಗರ ಕೈಲೇ ವ್ಯಾಲಿವೇಷನ್ ಮಾಡಿಸಿ, ರೆಕಾಲ್ಡ್ ಮಾಡತಿದ್ದೆ. ದಡ್ಡ ಸರ್ಕಾರ. ಮೈಗಳ್ಳ ಮೇಷ್ಟ್ರುಗಳಿಗೆ ಬಗ್ಗಿಬುಡ್ತು. ರಿಯಲಿ ಇವುರು ಟೀಚರ್ ಕ್ಯಲಸಕ್ಕೆ ಯೋಗ್ಯರಲ್ಲ, ಇದನ್ನ ಆ ಮೇಷ್ಟ್ರುಗಳಿಗೆ ಹೇಳೊ ಉಗ್ರಿ" ಎಂದು ವಾಟಿಸ್ಸೆ ವಾಲಾಡುತ್ತ ಹೋದ. ✿

...ಬ್ಬರು 'ಪತ್ರ'ಕರ್ತರು


...ಯಾರೋ ಈ 'ಧರ್ಮಕಾರಣ'ದ ಗದ್ದಲ ಕುರಿತು ಕೆ.ವಿ. ಸುಬ್ಬಣ್ಣನವರು ...ಪತ್ರಿಕೆಗಳಲ್ಲಿ ಬರೆದಿರುವ ಪತ್ರವನ್ನು ಓದಿದಿರಾ ಅಂದರು. ನಾನು ಓದಿದ್ದೆ. ...ರಲ್ಲಿ ವಿಶೇಷವೇನಿರಲಿಲ್ಲ. ಇದರಲ್ಲಿಯ ಒಂದೆರಡು ...ಹೀಗಿವೆ: 'ಧರ್ಮಕಾರಣ' ಪುಸ್ತಕಕ್ಕೆ ಸಂಬಂಧಿಸಿ ...ವಿವಾದವು ಸಾಹಿತ್ಯ ಮೂಲವಾದದ್ದಲ್ಲ. ಅದು ...ಾಂಧತೆಯ ಮೂಲದಿಂದ ಬಂದದ್ದು.... ಒಂದೆರಡು ...ಕಗಳ ಬಗ್ಗೆ ವಿವಾದ ಆರೋಪಗಳು ಈಗಲೂ ...ಯುತ್ತಲೇ ಇವೆ. ಅವುಗಳಿಗೆ ಸಂಬಂಧಿಸಿದ ಕ್ರಮ ...ಳ್ಳದಿರುವ ಸರ್ಕಾರವು ಈ ಪುಸ್ತಕದ ಬಗ್ಗೆ ವಿವಾದ ...ದ್ದ ೧೫-೨೦ ದಿನದೊಳಗೆ ಇಂಥ ಧೃಷ್ಟ ಕ್ರಮವನ್ನು ...ಂಡಿರುವುದು ಸರ್ವಥಾ ಅಸಮರ್ಥನೀಯ...." ಇವು ಸುಬ್ಬಣ್ಣನವರ ಮುಖ್ಯ ಮಾತುಗಳು.



...ಗಳಲ್ಲಿ ಅಂಥ ವಿಶೇಷವೇನಿಲ್ಲ; ನಮ್ಮಲ್ಲೇ ಅದೆಲ್ಲ ಬಂದಿದೆ. ಆದರೆ ಇಲ್ಲಿ ...ಡು ಅಂಶ ಕಾಣಿಸಬೇಕೆಂದು ನನಗೆನ್ನಿಸಿದೆ. ರಾಮಕೃಷ್ಣ ಹೆಗಡೆಯವರು ...ಖ್ಯಮಂತ್ರಿಯಾಗಿದ್ದಾಗ ಈ ಸುಬ್ಬಣ್ಣಗಳು ಬಾಟ್ಲಿಂಗ್, ರೇವಜೀತು ಕುರಿತಾಗಿಯಾಗಲಿ, ...ಡೆ ತಮ್ಮ ಜಾತಿಯ ಸಮ್ಮೇಳನದಲ್ಲಿ ಭಾಗವಹಿಸಿದಾಗಲಾಗಲಿ ಉಸಿರೆತ್ತಿಲ್ಲ; ಮತ್ತು ...ತ ಸಾಹಿತ್ಯ'ದ ವೇದಿಕೆಯಿಂದ ಮಾತಾಡುತ್ತಾ ಇದೇ ಸುಬ್ಬಣ್ಣ ನಾವೆಲ್ಲ ಬೊಮ್ಮಾಯಿ, ...ಡೆ ತರಹ ಮಹಾನಾಯಕರಾಗಬೇಕೆಂದು ಹೇಳಿ ನಮ್ಮನ್ನು ಆಶೀರ್ವದಿಸಿದರು; ...ಸ್ಕೃ ಸಂವೇದನೆಯಲ್ಲಿ ಹೆಗಡೆ ಮಾತನಾಡುವ ಕಾರ್ಯಕ್ರಮವಿದ್ದು ಅವರು ...ರೀಕ್ಷಿತವಾಗಿ ದೆಲ್ಲಿಗೆ ಹೋದದ್ದರಿಂದ ಕಾರ್ಯಕ್ರಮ ರದ್ದಾಯಿತು. ಆವತ್ತು ...ಾಯಿಸಿದ ಸುಬ್ಬಣ್ಣಗಳನ್ನು ನೋಡಿ ನಾನು ಚಕಿತನಾದೆ. ಅದೆಲ್ಲ ಇರಲಿ, ಮೇಲಿನ ...ಣ್ಣನವರ ಪತ್ರದಲ್ಲಿದ್ದ ಒಂದು ಮಾತು ನನ್ನನ್ನು ದಂಗುಬಡಿಸಿತು. ಅದು ಸರ್ಕಾರದ ...ಷ್ಟ" ನಿರ್ಧಾರ ಎನ್ನುವುದು. ಈ ಧೃಷ್ಟಕ್ಕೆ, ಅತಿಶಯದ, ದಿಟ್ಟವಾದ, ನಿರ್ಲಜ್ಜ ...ದೆ ಒಳ್ಳೆಯ, ಕೆಟ್ಟ ಎರಡೂ ಬಗೆಯ ಅರ್ಥಗಳಿರುವುದನ್ನು ನೋಡಿ ನಾನು ...ಂದಲಿಗೊಂಡೆ. ಸುಬ್ಬಣ್ಣನವರಿಗೆ ಕೆಟ್ಟ ನಿರ್ಧಾರ ಎನ್ನಲು ಹಿಂಜರಿಕೆ, ಒಳ್ಳೆಯ ...ರ ಅನ್ನಲು ಇಷ್ಟವಿಲ್ಲ ಅಂದುಕೊಂಡೆ. ಸುಬ್ಬಣ್ಣಗಳ ಮಿದುಳಿನ ಸ್ಥಿತಿಯ ಬಗ್ಗೆ ... ಹೇಳಬೇಕಾಗಿಲ್ಲ, ಅಲ್ಲವೆ? ✿

ದುರುಳ ಸಾವಾಸ


ಸಾವಿರಾರು ಮುಗ್ಧ ಹುಡುಗರು ನಮ್ಮ ಪತ್ರಿಕೆಯನ್ನು ಎಷ್ಟು ಹಚ್ಚಿಕೊಂಡಿರುತ್ತಾರೆ ಅಂದರೆ ಅದು ಅವರ ಬದುಕಿನ ಮುಖ್ಯ ಭಾಗವಾಗಿ ಹೋಗಿರುತ್ತದೆ. ಒಮ್ಮೆ ಹುಬ್ಬಳ್ಳಿಯ ಒಂದು ಸರ್ಕಾರಿ ಇಲಾಖೆಯಲ್ಲಿ ಹಂಗಾಮಿ ನೌಕರನಾಗಿದ್ದ ತರುಣನೊಬ್ಬ ತನ್ನ ಕಚೇರಿಯಲ್ಲಿ ನಡೆಯುತ್ತಿದ್ದ ಭ್ರಷ್ಟತೆ ನೋಡಿ ತಡೆದುಕೊಳ್ಳಲಾಗದೆ ಪ್ರತಿಭಟಿಸಿದ; ಅವನ ಖಂಡನೆಗೆ ಕೋಪಗೊಂಡ ಅಧಿಕಾರಿಗಳು ಅವನನ್ನು ಕೆಲಸದಿಂದ ಕಿತ್ತುಹಾಕಿದರು. ಕುರುಬ ಜನಾಂಗಕ್ಕೆ ಸೇರಿದ್ದ ಈ ಹುಡುಗ ತಂದೆ ಇಲ್ಲದವನು; ತಾಯಿ ಕಷ್ಟಪಟ್ಟು ಓದಿಸಿದ್ದಳು. ಒಬ್ಬನೇ ಮಗ. ಏನು ಮಾಡುವುದೆಂದು ತೋಚದೆ ಆ ಹೆಣ್ಣುಮಗಳು ತನ್ನ ದಿಗ್ಭ್ರಮೆಗೊಂಡ ಮಗನನ್ನು ಕರೆದುಕೊಂಡು ಬಂದು ನನ್ನನ್ನು ಕಂಡು, 'ನಾವೀಗ ಏನು ಮಾಡಬೇಕು ನೀವೇ ಹೇಳಿ' ಅಂದಳು. ನನಗೆ ಆತನನ್ನು ನೋಡಿ ಏನು ಹೇಳುವುದೆಂದು ಗೊತ್ತಾಗಲಿಲ್ಲ; ನಮ್ಮ ಕಚೇರಿಯಲ್ಲಿ ಅವನಿಗೆ ಕೊಡುವಂಥ ಕೆಲಸವಿರಲಿಲ್ಲ. ಆದ್ದರಿಂದ ಬೆಂಗಳೂರಲ್ಲಿ ಒಬ್ಬಿಬ್ಬರು ಗೆಳೆಯರನ್ನು ಕೇಳಿ ಅವರಲ್ಲಿಯೂ ಸದ್ಯಕ್ಕೆ ಕೆಲಸವಿಲ್ಲವೆಂದು ತಿಳಿದು ಹಂಪಿಯಲ್ಲಿ ವೈಸ್ ಛಾನ್ಸಲರ್ ಆಗಿದ್ದ ಕಂಬಾರರಿಗೆ ಫೋನ್ ಮಾಡಿದೆ.




ಮಹಾ ಹಿಂದುಳಿದವರ ನೇತಾರನಂತೆ ಮಾತಾಡಿದ ಈ ಅವಿವೇಕಿ ಕಂಬಾರ 'ಕಳಿಸಿಕೊಡಿ' ಎಂದು ಆಗ ಹೇಳಿ ಆತ ಅಲ್ಲಿಗೆ ಹೋದಾಗ ಅವನು ಕೊಟ್ಟ ನನ್ನ ಕಾಗದವನ್ನಾಗಲಿ, ಆವನನ್ನಾಗಲಿ ಕಣ್ಣೆತ್ತಿ ಕೂಡ ನೋಡಲಿಲ್ಲ. ಈಗ ಆ ಕಾಗದ ಇಟ್ಟುಕೊಂಡ ಕಂಬಾರ 'ಲಂಕೇಶ ಯಾವನಿಗೋ ಕೆಲಸ ಕೊಡಿಸ'ಲು ಕಳಿಸಿದ್ದ, ನಾನು ಕೊಡಲು ನಿರಾಕರಿಸಿದ್ದಕ್ಕೆ ನನ್ನನ್ನು ಟೀಕಿಸುತ್ತಾನೆ' ಎಂದು ನನ್ನ ಪತ್ರ ಹಿಡಿದು ಹೇಳುತ್ತಿದ್ದಾರಂತೆ. ಆಮೇಲೆ ,ಆ ಹುಡುಗನಿಗೆ ನಾನು ತಿಂಗಳಿಗೆ ಇಂತಿಷ್ಟು ಹಣ ಕೊಡುವುದಾಗಿ ಹೇಳಿ ನಾನು ಅವನಿಗಾಗಿ ಕೆಲಸ ಹುಡುಕುವುದು ಮುಂದುವರೆಸಿದೆ. ಆದರೆ ಆ ಹುಡುಗ ಎಂಥಾ ಸ್ವಾಭಿಮಾನಿಯೆಂದರೆ, 'ಸರ್, ನೀವು ನನ್ನ ಹಿತಚಿಂತನೆ ಮಾಡ್ತೀರಿ ಅನ್ನೋದೇ ನನಗೆ ಹೆಮ್ಮೆ. 'ಇಷ್ಟು ಸಾಕು' ಎಂದು ಬೇರೊಂದು ಖಾಸಗಿ ಕೆಲಸ ಹಿಡಿದು ಆದಷ್ಟೂ ನೆಮ್ಮದಿಯಾಗಿ ಬದುಕತೊಡಗಿದ. ನನಗೆ ಕಂಬಾರರ ಹುಟ್ಟುಗುಣ ಗೊತ್ತಾದದ್ದು ಹಾಗೆ.

ನನಗೆ ಸಿಟ್ಟು ಬರಲು ಕಾರಣ, ಅದೇ ಸಮಯದಲ್ಲಿ ಕಂಬಾರ ತನಗೆ ಮೇಯಲು ನೆರವಾಗುವ ರಾಜಕಾರಣಿಗಳ ಅಭ್ಯರ್ಥಿಗಳಿಗೆಲ್ಲ ಕೆಲಸ ಕೊಟ್ಟರು; ಹಂಪೆಯಲ್ಲಿ ಅನೇಕ ಪಾತಕಗಳಲ್ಲಿ ಮುಳುಗಿದರು. ನಮ್ಮಲ್ಲಿ ಬಂದ ವರದಿಗಳನ್ನು ಇಲ್ಲಿ ಮತ್ತೆ ಹೇಳಬೇಕಿಲ್ಲ. ಆದರೆ ಇತ್ತೀಚೆಗೆ ಬೆಂಗಳೂರಿನ ಸಿ.ಜಿ.ಕೃಷ್ಣಸ್ವಾಮಿ ಕಂಬಾರರನ್ನು ಕುರಿತ ಒಂದು ಸಮಾರಂಭ ಏರ್ಪಡಿಸಿ ನಾನು ಭಾಗವಹಿಸಬೇಕೆಂದು ಕೇಳಿದಾಗ 'ಅಲ್ಲಿ ನಾನು ಏನು ಹೇಳಲು ಸಾಧ್ಯ? ಎಂದು "ಆಗುವುದಿಲ್ಲ". ಅಂದೆ. ಕೊನೆಗೆ ಯಾವುದೋ ಗೊಂದಲದಲ್ಲಿ ಕಂಬಾರರ ಹುಟ್ಟುಹಬ್ಬದ ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರು ಹಾಕಿದರು. ನನಗೆ ರೇಗಿಹೋಯಿತು. ಅಲ್ಲಿ ನಾನು ಹೇಗೆ ಮುಖ ತೋರಿಸುವುದು, ನೀವೇ ಹೇಳಿ.

ಏಪ್ರಿಲ್ 16, 1997



ಕುಮಾರಣ್ಣನ ಭ್ರಷ್ಟಾಚಾರ ಪುರಾಣವೂ



ಎಚ್.ಎಲ್. ಕೇಶವಮೂರ್ತಿ

ಅಣಕ

ಭೂಸೇನಾ ಮುಖ್ಯಸ್ಥ ವಿ.ಕೆ. ಸಿಂಗ್ ಅವರಿಗೆ ಯಾರೋ ಒಬ್ಬ ತಮ್ಮ ಕಂಪನಿಯ 'ದಕಮೊ ಮಾದೆಲ್' ಟ್ರಕ್ಕುಗಳನ್ನು ಖರೀದಿಸುವಂತೆ ಆಮಿಷ ತೋರಿಸಲು ಹದಿನಾಲ್ಕು ಕೋಟಿ ರೂಪಾಯಿ ಕೊಡ್ತೀನಿ ಅಂದಿದ್ದನಂತೆ. ತಗಂದಿದ್ರೆ ವಿಷಯ ಹೊರಗೇ ಬರುತ್ತಿರಲಿಲ್ಲ, ಯಾವುದೋ ಪಾಪಿ ...ಂದೇಗಂಡ ಹಿಂಗೆ ಮಾಡಲು ಬಂದಿದ್ದಾನೆ ಎ... ಉಗಿದು ಉಪ್ಪಿನಕಾಯಿ ಹಾಕಿ ...ನಿದ್ದರೂ ಆಗುತ್ತಿತ್ತು. ...ದೂ ...ಯಾಗುತ್ತಿರಲಿಲ್ಲ. ಮೇಜರ್ ಸಾಹೇಬರಿಗೆ ತಾನು ಶುದ್ಧಹಸ್ತದವ ಅನ್ನೋದ ಪ್ರಚುರ ಮಾಡಬೇಕಾಗಿತ್ತೋ ಏನೋ. ಹಿಂಗಿಂಗೆ ಆಯ್ತು ಅಂತಾವ ಡಾಣಾ ಡಂಗೂರ ಹೊಡೆದರು.

ಎಚ್.ಡಿ. ಕುಮಾರಸ್ವಾಮಿಯೋರು ಎಂಪಿ ಆಗಿರೋದು ಅಲ್ವಾ. ಮಾಜಿ ಪ್ರಧಾನಿ ಮಗ ಅನ್ನೋ ಕಿರೀಟ ಬೇರೆ ಇದೆ. ಇಂತಹ ವ್ಯವಹಾರವೆಲ್ಲ ಅಳೆದು ಸುರಿದಿರೋರು. ಈ ಸುದ್ದಿ ಮುಟ್ಟುತ್ತಿದ್ದಂಗೆ ಚುರುಕಾದರು. 'ಇದೇನು ಘನಂದಾರಿ ಸುದ್ದಿ ಅಂತ ಹೇಳ್ತಾ ಅವ್ನೆ ಆ ಮೇಜರು. ಮಿಲಿಟರೀಲಿ ಇದು ಕಾಲದಿಂದಲೂ ಇದ್ದದ್ದೇಯ' ಎಂದು ಲಂಚ ಪುರಾಣವನ್ನು ಕೃಷ್ಣ ಮೆನನ್ನರ ಜೀಪ್ ಹಗರಣದವರೆಗೂ ಎಳೆದುಕೊಂಡು ಹೋದರು. 'ಅಷ್ಟೇ ಯಾಕೆ, ನಮ್ಮಪ್ಪ ಪ್ರಧಾನಿ ಆಗಿದ್ದಾಗಲೂ ಇಂತಹವನೊಬ್ಬ ನನ್ನ ಹತ್ತಿರ ಬಂದಿದ್ದ' ಅಂತಾನೂ ಹೇಳಿದರು. ಮಾಧ್ಯಮದವರಿಗೆ ಬಾಂಬ್ ಎಸೆದ ಹಾಗೆ ಕಾಣಿಸಿತಂತೆ. ಹಾಗೆ ಬರೆದರು ಕೂಡ. ಅಂತೂಇಂತೂ ಇದನ್ನೆಲ್ಲ ಕುಮಾರಣ್ಣೋರು ರೋಚಕವಾಗಿ ಮಾಧ್ಯಮಗೋಷ್ಠಿಯಲ್ಲಿ ಹೆಮ್ಮೆಯಿಂದ ಹೇಳಿದರು.

ಯಾವ ವಿಷಯ ಯಾರಿಗೆ ಯಾವಾಗ ಬಾಂಬ್ ಆಗುತ್ತೋ ಹೇಳುವುದಕ್ಕೆ ಬರುವುದಿಲ್ಲ.



ಮಾಧ್ಯಮಗೋಷ್ಠಿಯಲ್ಲಿ, ಬಾಯಿಮುಚ್ಚಿಕೊಂಡು ಇದ್ದರೂ ನಡೆಯುತ್ತಿತ್ತು, ಕುಮಾರಣ್ಣೋರು ತಮ್ಮ ಮಾತ ಕೇಳಿ ಜನ ಎಲ್ಲ ಭೇಷ್ ಭೇಷ್ ಅಂತಾರೆ ಅಂದುಕೊಂಡಿದ್ದರು. ಆದರೇನಾಯಿತು ಅಂತೀರಿ. ಭ್ರಷ್ಟಾಚಾರದ ವಿಷಯ ಪ್ರಸ್ತಾಪಿಸಿದರೂ ಪ್ರಧಾನಿ ಹೇಗೆ ಸುಮ್ಮನೆ ಇದ್ದರು? ಅವರ ಮೇಲೆ ಕಾನೂನುಕ್ರಮ ಏಕೆ ತೆಗೆದುಕೊಳ್ಳಲಿಲ್ಲ ಅಂತ ದೇವೇಗೌಡರಿಗೆ ಅಮರಿಕೊಂಡರು. ದೇವೇಗೌಡರು ಎಷ್ಟೇ ಆಗಲಿ ನುರಿತ ರಾಜಕಾರಣಿ. ಹಾಳಾದ ಮಗ ಇರಲಾರದೆ ಇರುವೆ ಬಿಟ್ಟುಕೊಂಡು ನನಗೂ ಕೆರಕಳೊಹಂಗೆ ಮಾಡವ್ನಲ್ಲಾ ಅಂತ ಇರುಸುಮುರುಸು ಆದರೂ ತೋರ್ಪಡಿಸಲಿಲ್ಲ. ಬಹಿರಂಗವಾಗಿ ಮಾತ್ರ 'ನನಗೆ ಇದು ತಿಳಿದೇ ಇರಲಿಲ್ಲ' ಅಂತ ಉಪಾಯವಾಗಿ ಜಾರಿಕೊಂಡರು. ಈವಯ್ಯನ ಹತ್ತಿರ ಸಿಗೋದು ಇಷ್ಟೇಯ ಅಂತಾವ ಅವರೆಲ್ಲ ಕುಮಾರಣ್ಣನ ಬೆನ್ನು ಬಿದ್ದರು. ಅವರಿಗೂ ತಾನು ಪೆದ್ದುಪೆದ್ದಾಗಿ ಹಿಂಗೆ ಬಡಾಯಿಕೊಚ್ಚಿಕೊಳ್ಳಬಾರದಿತ್ತು ಅನ್ನಿಸಿರಬೇಕು. 'ನಮ್ಮ ತಂದೆಯವರೆಗೂ ಅದು ಹೋಗಿರಲಿಲ್ಲ, ನಾನೇ ಅವನ್ನ ಉಗಿದು ಹೊರಗಟ್ಟಿದೆ' ಎಂದು ತಿಪ್ಪೆ ಸಾರಿಸುವ ಕೆಲಸಕ್ಕೆ ಕೈಹಾಕಿದರು. ಅವರ ಪುಣ್ಯ ಚೆನ್ನಾಗಿತ್ತು. 'ಭ್ರಷ್ಟಾಚಾರದ ವಿಷಯ ಯಾಕೆ ಬಯಲಿಗೆಳೆಯಲಿಲ್ಲ' ಅಂತ ಕೆದಕಿಕೆದಕಿ ಯಾರೂ ಕೇಳಲಿಲ್ಲ. ಮಾಧ್ಯಮದವರೂ ನಮ್ಮ ಜನ ಇದ್ದಂಗೇ ಅಲ್ವಾ. ವಸಿ ದಿವಸ ಗುಸಗುಸ ಅಂದ್ರು. ಆಮೇಲೆ ತೆಪ್ಪಗಾದ್ರು.

ಇದು ಹೆಂಗೋ ಮರೀತು ಅಂತಿದ್ದಂಗೆ ರಾಜ್ಯಸಭೆ ಚುನಾವಣೆ ಬಂದೊ. ಕುದುರೆ ವ್ಯಾಪಾರಿಗಳಿಗೆ, ದುಡ್ಡಿರೋ ಕುಳಗಳಿಗೆ ಸೀಟು ಮಾರಿಕೊಳ್ಳುವುದು ಜಾತ್ಯತೀತ ಜನತಾದಳದ ಜಾಯಮಾನ. ಈಗಲೂ ಹಂಗೇ ಮಾಡಿದ್ರು. ಊರಿಗೇ ಗೊತ್ತಿರೋ ಸಂಗತಿ ಇದು. ಅದೇ ಗರಡಿಯಲ್ಲಿ ಪಳಗಿದ್ದ ಸಿದ್ಧರಾಮಯ್ಯನವರಿಗೆ ಗೊತ್ತಿರಲ್ವಾ. ಆದರೂ ಕೆಣಕಾನ ಅಂತಲೋ ಏನೋ ಜಾತ್ಯತೀತ ಜನತಾದಳ ಅಂದ್ರೆ ಪಾಳೆಗಾರಿಕೆ ವಂಶದ ದರ್ಬಾರು ನಡೆಯೋ ಪಕ್ಷ. ರಾಜ್ಯಸಭೆ ಸೀಟು ಮಾರಿಕೊಂಡದೆ ಆ ಪಕ್ಷ ಅಂದುಬಿಟ್ಟರು! ಅಲ್ಲಾ ಸುಳ್ಳನ್ನು ಸುಳ್ಳು ಅಂದ್ರೆ, ಕಳ್ಳನ್ನ ಕಳ್ಳ ಅಂದ್ರೆ ಯಾರಿಗೆ ಸಿಟ್ಟು ಬರುವುದಿಲ್ಲ ಹೇಳಿ. ದುಡ್ಡು ಕೊಟ್ಟಿರೋದೂ ನಿಜ. ತಗೊಂಡಿರೋದು ನಿಜ. ಅದಕ್ಕೆ ಹಂಗಂತ ಎಲ್ಲರ ಮುಂದೂ ಅನ್ಬುಡೋದ ಕುಮಾರಣ್ಣಾರಿಗೂ ರೇಗೋಯ್ತು. ಅವರಿಗೆ ತಿಳಿದಿರಲಿಲ್ವಾ ಇದು ಕದ್ದುಮುಚ್ಚಿ ಮಾಡೋ ವ್ಯವಹಾರ, ಸಾಕ್ಷಿ ಇರಲ್ಲ ಅಂತಾವ. ರಾಜ್ಯಸಭಾ ಮೆಂಬರೇನು ಸಿದ್ಧರಾಮಯ್ಯ ಮಧ್ಯಸ್ಥಿಕೆಯಲ್ಲಿ ಹಣ ಎಣಿಸಿದ್ನ? ಇಲ್ವಲ್ಲ. ಊರಿಗೆಲ್ಲ ಗೊತ್ತಾಗೋ ಹಂಗೆ ವ್ಯವಹಾರ ಮಾಡೋಕೆ ಇವರೇನು ದಡ್ಡರಾ. ಐವತ್ತು ವರ್ಷಗಳ ಕಾಲ ರಾಜಕೀಯದಲ್ಲೇ ಮುಳುಗಿರೋ ವಂಶ ಅದು! ಇವನು ಬಾಂಬ್ ಹಾಕಿದಂಗೇ ನಾನೂ ಒಂದು ಬಾಂಬ್ ಹಾಕ್ತೀನಿ ಅಂತಾವ ಕುಮಾರಣ್ಣಾರು ಏನು ಮಾಡಿದ್ರು 'ಯಡ್ಯೂರಪ್ಪ ಸಿದ್ಧರಾಮಯ್ಯಗೆ ಇಪ್ಪತ್ತು ಕೋಟಿ ಕೊಟ್ಟವ್ರೆ' ಅಂದುಬುಟ್ರು! ಯಾಕೆ ಕೊಟ್ಟವ್ರೆ ಅಂದ್ರೆ ಉಪಚುನಾವಣೇಲಿ ಕಾಂಗ್ರೆಸ್ ಸೋಲಿಸೋಕೆ! ಅರೆ ಹಂಗೆ ಆರೋಪ ಮಾಡಿದರೆ ಆಗಿಹೋಯಿತಾ. ಆದಕ್ಕೆ ಸಾಕ್ಷಿ, ಪುರಾವೆ ಬೇಡವಾ ಅಂದರೆ ಸಿದ್ಧರಾಮಯ್ಯ ಪುರಾವೆ ಸಹಿತ ಆರೋಪ

ಕಣ್ಣೀರು ತರಿಸಿದ ಆಫ್ರಿನ್ ಕತೆ



ಹೆಣ್ಣು ಎನ್ನುವ ಕಾರಣಕ್ಕೆ ಎಳೆಯ ಜೀವವೊಂದು ಬದುಕುವ ಹಕ್ಕನ್ನೇ ಕಳೆದುಕೊಳ್ಳುತ್ತದೆ ಎಂದರೆ ಈ ಲೋಕ ಎಂತಹದ್ದಿರಬಹುದು. ಈ ಗಂಡಸರು ತಮ್ಮ ಪೌರುಷವನ್ನು ಹೆಣ್ಣಿನ ಮೇಲಷ್ಟೇ ಏಕೆ ತೋರಿಸುತ್ತಾರೆ? ಜಗದ ಕಾನೂನು ತಮ್ಮ ಪರವಾಗಿಯೇ ಇದೇ ಎನ್ನುವ ಕಾರಣಕ್ಕಾ? ಅಥವಾ ಹೆಣ್ಣು ಎಲ್ಲವನ್ನು ಸಹಿಸಿಕೊಳ್ಳಲು ಹುಟ್ಟಿದ ಜೀವ ಎನ್ನುವುದಕ್ಕಾ? ಇಡೀ ಹೆಣ್ಣು ಕುಲವನ್ನು ಹೊಡೆದು, ಬಡಿದು, ಹಿಂಸಿಸಿ ಕೊಲ್ಲಲು ಗಂಡಸರು ಪೇಟೆಂಟ್ ಏನನ್ನಾದರೂ ಪಡೆದಿರುವರಾ?

ಹೆಂಡತಿಯೆಂದರೆ ನಾಲ್ಕು ಗೋಡೆಯ ಮಧ್ಯೆ ಇನ್ನೊಂದು ಗೋಡೆ ಎಂದು ತಿಳಿದುಕೊಂಡಿರುವ ಕೊಳಕು ಮನಸುಗಳಿರುವಾಗ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಿಲ್ಲವೆನಿಸುತ್ತದೆ. ಗಾಜು ಚೂರುಗಳನ್ನು ನೆಲದಮೇಲೆ ಹಾಕಿ ಅದರ ಮೇಲೆ ಕುಣಿಯುವಂತೆ ಆಕೆಗೆ ಆದೇಶಿಸುವ ತಿರಬೋಕಿಗಳು ನರರಾಕ್ಷಸರೇ ಹೊರತೂ ಮತ್ತೇನು ಅಲ್ಲ. ಇಷ್ಟು ದಿನ ಮಹಿಳೆಯರ ಮೇಲೆ ಹಲ್ಲೆಗಳು, ಕೊಲೆಗಳು ನಡೆಯುತ್ತಿದ್ದವು. ಅದರ ತೀವ್ರತೆ ಈಗ ಮಕ್ಕಳನ್ನು ಆಪೋಶನ ತೆಗೆದುಕೊಳ್ಳುವ ಮಟ್ಟಕ್ಕೆ ವಿಕೃತಿ ಮುಂದುವರೆದಿರುವುದು ತಲೆ ತಗ್ಗಿಸುವಂತಹ ವಿಷಯ.

ಗೌರಿ ಮೇಡಂ ಅವರ ಪುಟ್ಟ ಆಫ್ರಿನ್ ಕುರಿತು ಬರೆದ ಅಕ್ಷರಗಳನ್ನು ಓದುತ್ತಿದ್ದಂತೆ ಅಳು ತಡೆಯಲಾಗಲಿಲ್ಲ. ಈ ಜಗತ್ತು ಎಳ್ಳು ಕಾಳಷ್ಟು ಪಾಪ ಮಾಡದ, ದ್ರೋಹ ಬಗೆಯದ ಮನುಷ್ಯರನ್ನೇಕೆ ಬಲಿತೆಗೆದುಕೊಳ್ಳುತ್ತದೆ ಒಂದೂ ಅರ್ಥವಾಗಲಿಲ್ಲ.

- ಬಸವರಾಜ ಹಳ್ಳಿ, ಹನುಮಕಲ್

ಏಪ್ರಿಲ್ 23ರ ಸಂಚಿಕೆಯಲ್ಲಿ 'ನಮಗೆಲ್ಲ ಧಿಕ್ಕಾರ ಹೇಳಿ ಹೋದ ಕಂದ ಆಫ್ರಿನ್' ಲೇಖನವನ್ನು ಓದುತ್ತಿದ್ದಂತೆ ಕಣ್ಣೀರು ಬಂತು.

ವೈಜ್ಞಾನಿಕವಾಗಿ ಹೇಳುವುದಾದರೆ ಮಹಿಳೆಯರ ಗರ್ಭದಲ್ಲಿ ಇರುವ ಅಂಡಾಣುವಿನಲ್ಲಿ 'ಎಕ್ಸ್' ಕ್ರೋಮಸೋಮ್ ಮಾತ್ರ ಇರುತ್ತದೆ. ಆದರೆ ಪುರುಷರ ವೀರ್ಯದಲ್ಲಿ 'ಎಕ್ಸ್' ಮತ್ತು 'ವೈ' ಎಂಬೆರಡು ರೀತಿಯ ಕ್ರೋಮಸೋಮ್‌ಗಳಿರುತ್ತವೆ. ಅಂಡಾಣುವನ್ನು ಪುರುಷನ 'ಎಕ್ಸ್' ಕ್ರೋಮಸೋಮ್ ಫಲಿತ ಮಾಡಿದರೆ ಹೆಣ್ಣು ಮಗು ಹುಟ್ಟುತ್ತದೆ. ಹಾಗೆಯೇ 'ವೈ' ಕ್ರೋಮಸೋಮ್ ಫಲಿತ ಮಾಡಿದರೆ ಗಂಡು ಮಗು ಹುಟ್ಟುತ್ತದೆ. ಇದರ ಅರ್ಥ ಓರ್ವ ಮಹಿಳೆಗೆ ಗಂಡು ಮಗು ಹುಟ್ಟುತ್ತದೋ, ಹೆಣ್ಣು ಮಗು ಹುಟ್ಟುತ್ತದೋ ಎಂಬುದನ್ನು ನಿರ್ಧರಿಸುವುದು ಪುರುಷನ ವೀರ್ಯದಲ್ಲಿರುವ ಕ್ರೋಮಸೋಮ್ ಹೊರತು ಮಹಿಳೆಯ ಗರ್ಭದಲ್ಲಿರುವ ಅಂಡಾಣುವಲ್ಲ. ಆದರೂ ಮಹಿಳೆಯೊಬ್ಬಳು ಹೆಣ್ಣು ಮಗುವಿಗೆ ಜನ್ಮ ನೀಡಿದರೆ ಆಕೆಯನ್ನೇ ದೂಷಿಸುವುದು ಎಷ್ಟು ಸರಿ?

ತಾಯಿಗೆ ಹುಟ್ಟುವುದು ಗಂಡೋ, ಹೆಣ್ಣೋ ಎಂಬುದಕ್ಕಿಂತ ಹೊಸದಾಗಿ ಜನ್ಮವೆತ್ತಿರುವ ಮಗುವಿನ ಆರೋಗ್ಯ ಮಾತ್ರ ನಮ್ಮ ಜನರಿಗೆ ಮುಖ್ಯವಾಗಬೇಕು. ಅಂತಹ ಮನಃಸ್ಥಿತಿಯೊಂದು ನಮ್ಮ ಸಮಾಜದಲ್ಲಿ ಮನೆ ಮಾಡಿದಾಗ ಮಾತ್ರ ಆಫ್ರಿನ್ ತರಹದ ಹೆಣ್ಣು ಕೂಸುಗಳು ನಮ್ಮ ಸಮಾಜಕ್ಕೆ ಧಿಕ್ಕಾರ ಹೇಳಿ ಹೋಗುವುದಿಲ್ಲ.

- ಶಶಿಕಲಾ. ಎಂ. ತರೀಕೆರೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

'ನಮಗೆಲ್ಲ ಧಿಕ್ಕಾರ ಹೇಳಿ ಹೋದ...' ಲೇಖನ ನಮ್ಮ ಸಮಾಜದ ಕ್ರೂರ ಮುಖವನ್ನು ಪರಿಚಯಿಸುತ್ತದೆ. ಅದನ್ನು ಓದುವಾಗ ಕಣ್ಣುಗಳು ಒದ್ದೆಯಾದವು.

- ರವಿ. ಕೋಲಾರ

ಪುಟ್ಟ ಆಫ್ರಿನ್ ಕತೆ ಕಣ್ಣೀರು ತರಿಸಿತು. ಆಕೆಯ ಸಾವು ನಮ್ಮ ಸಮಾಜ ಕ್ರೌರ್ಯಕ್ಕೆ ಹಿಡಿದ ಕನ್ನಡಿ.

- ಮಹೇಂದ್ರ ಕುಮಾರ್, ಬಳ್ಳ...

ಅಳು-ನಗು


ಗೌರಿ ಮೇಡಂ, ಯಾಕೆ ನೀವು ಈ ರೀತಿ ಬರೆಯುತ್ತೀರಿ? ನಿಜವಾಗಲ... 'ಕಂಡಹಾಗೆ' ಲೇಖನದ ಮೊದಲ ಪ್ಯಾರಾ ಓದುವಾಗಲೇ ದುಃಖದ ಕ... ಒಡೆಯಿತು. ಫತ್ವಾ ನೀಡುವ ಮುಲ್ಲಾಗಳ ಕಡು ವಿರೋಧಿಯಾದ ನಾ... ಮೊನ್ನೆ 'ಆಫ್ರಿನ್‌ಳನ್ನು ಕೊಂದವನನ್ನು ಕಲ್ಲು ಹೊಡೆದು ಸಾಯಿಸಿ' ಎಂ... ಹೇಳಿದ ಬೆಂಗಳೂರಿನ ಇಮಾಮರನ್ನು ಈ ವಿಷಯದಲ್ಲಿ ಬೆಂಬಲಿಸುತ್ತೇ... ಆಫ್ರಿನಳ ಕತೆ ಓದಿ ಅತ್ತೆ.



ನಂತರ 'ಬಿಡಿಚಿತ್ರ'ದ... ಪಾರ್ವತೀಶ ಅವರು ಬರೆ... ಪಾರ್ವತವ್ವ-ರಾಜೇಸಾಬರ ಪ್ರೇಮ ಕ... ನನ್ನಲ್ಲಿ ಸಂತೋಷ ತರಿಸಿತು. ಅವ... ಸಂತಾನ ಎಲ್ಲೆಲ್ಲೂ ಹುಟ್ಟಲಿ. ಇಂತ... ಮಾನವೀಯತೆ ತುಂಬಿರುವ ಸ... ಕತೆಗಳನ್ನು ಇನ್ನಷ್ಟು ಪ್ರಕಟಿ... ಯುವಜನರ ಕಣ್ಣು ತೆರೆಸುವ ಇಂತ... ಕೆಲಸ ನಿರಂತರವಾಗಿರಲಿ.

ನೂರು ಮತದ ಹೊಟ್ಟು ತೂರಿ,
ಎಲ್ಲ ಮತದ ಸತ್ವ ಹೀರಿ...

- ಇಸ್ಮತ್ ಫಜೀರ್, ಮಂಗಳೂ...



ಹಸನ್ ನಯೀಂ ಸುರಕೋಡರು ನನಗ... ಪಾರ್ವತವ್ವ-ರಾಜೇಸಾಬರ ಈ ಕತೆ ಹೇಳಿದ್ದರು. ಪಾರ್ವತೀಶ... ಲೇಖನ ಮತ್ತೊಮ್ಮೆ ಕಂಬನಿ ತರಿಸಿತು.

-ಸರ್ಜಾಶಂಕರ ಹರಳೀಮಠ, ಶಿವಮೊ...

ಕ್ರಿಮಿನಲ್ ಮತ್ತು ಕ್ರೈಂ ಪತ್ರಕರ್ತರು

'ನರಭಕ್ಷಕ ಹುಲಿ, ಚಂದಪ್ಪ ಹರಿಜನನ ಹೆಸರಲ್ಲಿ ನರಿಗಳ ಕಚ್ಚಾಟ... ಎಂಬ ವರದಿಯಲ್ಲಿ ಕ್ರೈಂ ಪತ್ರಕರ್ತ ರವಿ ಬೆಳಗೆರೆಯ ಪೊಳ್ಳುತನವ... ಸರಿಯಾಗಿ ಗುರುತಿಸಿ ಹೇಳಿದ್ದೀರಿ. ಅದೇ ವೇಳೆ ಸುವರ್ಣ ಚಾನೆಲ್‌ನಲ್ಲಿ ರ... ಬೆಳಗೆರೆಯ ವಿರುದ್ಧ ಮಾತನಾಡುವಾಗ ಕೆಲವರು ಕೆಟ್ಟ ಪದಗಳಲ್ಲಿ ಬೈಯ್ದಿದ್ದ... ನೀವು ಆಕ್ಷೇಪಿಸಿದ್ದೂ ಸರಿಯಾಗಿದೆ.

- ಸುಮಿತ್ರ ದಾವಣಗ...

...ದಿದ್ರಾ? ಇಲ್ಲಲ್ಲ, ಇವರೂ ಹಂಗೇ ಮಾಡವ್ರೆ! ...ಗೆಯೇ ಸಾಕ್ಷಿ!

...ಕಾದಸೀಸದಂತೆ ಕಿವಿಗೆ ಬಿದ್ದ ಮಾತುಗಳಿಂದ ...ಕೆಂಡವಾದ ಸಿದ್ಧರಾಮಯ್ಯ, ಅಕಟಕಟಾ ಈ ...ಯನೇನೆಂಬೇನು, 'ಕುಮಾರಸ್ವಾಮಿ ಸುಳ್ಳುಗಾರ' ...ದುಬಿಡೋದೆ! ಅಂದರೆ ಅವರ ನಾಲಿಗೆಗೆ ಬೆಲೆ ... ಅಂದ ಹಾಗಾಯಿತು! ಇನ್ನೂ ಮುಂದುವರೆದು ...ನು ಇಪ್ಪತ್ತು ಕೋಟಿ ಪಡೆದಿದ್ದನ್ನು ಸಾಬೀತು ...ಡಿದರೆ ವಿಧಾನಸೌಧದ ಎದುರು ನೇಣು ...ಕೊಳ್ಳುತ್ತೇನೆ' ಎಂಬ ವೀರ ಶಪಥ ಮಾಡಿದರು!

...ಸಿದ್ಧರಾಮಯ್ಯ ನೇಣಿನ ವಿಷಯ ಪರಿಶೀಲಿಸೋಣ. ...ನ್ನರು 'ವಿಧಾನಸೌಧದ ಎದುರು ನೇಣು ಬಿಗಿದು ...ಳ್ಳುತ್ತೇನೆ' ಎಂದು ಪ್ರಕಟಪಡಿಸಿದ್ದಾರೆಯೇ ಪರಂತು ...ಣಿನ ಕುರಿತು ವಿವರ ತಿಳಿಸಿಲ್ಲ. ಬಹಿರಂಗವಾಗಿ ... ನೇಣುಬಿಗಿದುಕೊಳ್ಳುತ್ತಾರೆಯೋ ಅಥವಾ ಗುಪ್ತ ... 'ಜೀವಾರ್ಪಣೆ' ಮಾಡುತ್ತಾರೆಯೋ ಎಂಬುದರ ...ತೂ ಏನನ್ನೂ ಹೇಳಿಲ್ಲ. ಅಂತೂ ಇಂತೂ ...ವಾರ್ಪಣೆಗೆ' ಸಿದ್ಧರಿರುವುದೆಂಬುದು ಖಚಿತವಾಗಿದೆ. ...ದ್ಯಕೀಯ ವಿಜ್ಞಾನ ಬಹಳ ಮುಂದು ವರೆದಿದೆ. ...ಹತ್ಯಾಗ ಮಾಡಲು ಸುಲಭೋಪಾಯ ಗಳು ...ದಿವೆ. ಅವುಗಳಲ್ಲಿ ಯಾವುದಾದರೂ ಒಂದನ್ನು ...ಸುತ್ತಿಸಿರಬಹುದೆಂದು ನನ್ನ ನಮ್ರ ವಿನಂತಿ!

... ಈ ಹಾಳಾದವನು ಸತ್ತರೆ ಸಾಯಲಿ ಎಂದು ...ಮಾರಣ್ಣ ನಿಶ್ಚಿಂತೆಯಿಂದ ಇರಬಹುದಾಗಿತ್ತು. 'ನೇಣು ...ದುಕೊ. ನಾನೆ ಹಗ್ಗ ತಂದುಕೊಡುತ್ತೇನೆ' ಎಂದು ...ವಂತ ನಾಯಕನಂತೆ ಹೇಳಿ ಟಿವಿಗಳಲ್ಲಿ ...ಚಬಹುದಾಗಿತ್ತು. ಆದರೆ ಹಾಳಾದ ಚುನಾವಣೆಯು ...ಯ ಹತ್ತಿರ ಬಂದಿದೆ. ಮೊದಲೇ ಕುರುಬರು. ...ಲ್ಲ 'ಸಿದ್ಧರಾಮಯ್ಯನೇ ನಮ್ಮ ನಾಯಕ' ಎಂದು ...ತವೆ. ಈಗ ವಿರೋಧ ಕಟ್ಟಿಕೊಳ್ಳುವ ಹಾಗಿಲ್ಲ. ...ದು ವೇಳೆ ಸಿದ್ಧರಾಮಯ್ಯ ತನ್ನ ಮಾತಿನಂತೆ ...ದುಕೊಂಡೇಬಿಟ್ಟರೆ ಕುರುಬರ ಒಂದು ಓಟೂ ತಮ್ಮ ...ಕ್ಷಕ್ಕೆ ಬೀಳಲ್ಲ ಎಂದೆಲ್ಲ ಯೋಚಿಸಿದ ಕುಮಾರಣ್ಣ ...ಶದವರೆಗೂ ತುಂಬಿದ್ದ ದ್ವೇಷವನ್ನು ಹೊರಗೆಡವಲಿಲ್ಲ. ...ಭೇ ನಾನು ಸಿದ್ಧರಾಮಯ್ಯ ಲಂಚ ತಗೊಂಡರು ...ತ ಹೇಳಿಲ್ಲ. ಅವರ ಪಕ್ಷದವರು ತಗೊಂಡಿದಾರೆ. ...ರು ತೆಗೆದುಕೊಂಡಿದಾರೆ ಅನ್ನುವುದು ಅವರಿಗೆ ...ದಿದೆ. ಮಾಧ್ಯಮಗಳಲ್ಲಿ ತಪ್ಪಾಗಿ ವರದಿಯಾಗಿದೆ' ಎಂದು ಮಾಧ್ಯಮದವರ ಮೇಲೇ ಗೂಬೆ ಕೂರಿಸಿದರು!

ತಮ್ಮ ಹೇಳಿಕೆಗೇ ಉಲ್ಟಾ ಹೊಡೆದರು ನಿಜ. ಆದರೂ ಒಳಗುದಿ ಇತ್ತಲ್ಲ, ಬೇರೆದಾರೀಲಿ ಹೊರ ಹಾಕಿದರು. 'ಈ ಸಿದ್ಧರಾಮಯ್ಯ ದುರಹಂಕಾರಿ. ದೇವೇಗೌಡರಿಗೇ ಕಾಲು ತೋರಿಸಿದ' ಅಂದುಬಿಟ್ಟರು. ಅರೆರೆ ಎಲ್ಲಾದರೂ ಉಂಟಾ. ದೇವೇಗೌಡರ ವಯಸ್ಸೇನು? ಸಿದ್ಧರಾಮಯ್ಯ ವಯಸ್ಸೇನು? ಹಿರಿಯರು ಅನ್ನೋ ಗೌರವ ಭಾವನೆ ಬೇಡವಾ? ಯಾವಾಗಪ್ಪ ಹಂಗೆ ಮಾಡಿದ ಈ ದುರಹಂಕಾರಿ, ಎಲ್ಲಿ ಮಾಡಿದನಪ್ಪ ಈ ಪಾಪಕೃತ್ಯಾನ ಅಂದರೆ ವೇದಿಕೆ ಮೇಲೆ ಅಕ್ಕಪಕ್ಕ ಕುಳಿತಿದ್ದಾಗ ಅಂತೆ! ಕಾಲಮೇಲೆ ಕಾಲು ಹಾಕಿ ಕುಳಿತಿದ್ದ ಸಿದ್ಧರಾಮಯ್ಯ ಪಾದ ದೇವೇಗೌಡರ ಕಡೆಗೆ ಇತ್ತಂತೆ!

ಭ್ರಷ್ಟಾಚಾರದ ಕುರಿತು ಕುಮಾರಣ್ಣನ ವ್ಯಾಖ್ಯಾನಾನೆ ಬೇರೆ. ರಾಜ್ಯಸಭೆ ಚುನಾವಣೆಗೆ ಕೋಟ್ಯಾಧೀಶರಿಗೇ ಸೀಟು ಕೊಟ್ಟಿದ್ದು ನಿಜ. ಆದರೆ ಹಣ ತೆಗೆದುಕೊಂಡು ಕೊಟ್ಟಿಲ್ಲವಂತೆ! ಪಕ್ಷ ಕಟ್ಟಬೇಕಾದರೆ ಹಣಬೇಕು. ಸಿದ್ಧರಾಮಯ್ಯ ಏನು 'ಕರಿಕೋಟು' ಧರಿಸಿ ಸಂಪಾದಿಸಿದ ಹಣದಲ್ಲಿ ಚುನಾವಣೆ ಮಾಡ್ತಾರಾ ಎಂಬುದು ಅವರ ಸವಾಲು. ಇವರೂ ಹಾಗೇನೆ ಚುನಾವಣೆ ಬಂದಾಗ ರಾಜ್ಯಸಭೆ ಸದಸ್ಯರಿಂದ 'ವಂತಿಗೆ' ಪಡೆಯುತ್ತಾರಂತೆ!

ಭೇಷ್ ಕುಮಾರಣ್ಣ ಭೇಷ್!

ಮುಗಿಯದ ಸಾವು

ಐದಾರು ವರ್ಷಗಳ ಹಿಂದಿನ ಮಾತು. ಹೆಣ್ಣುಭ್ರೂಣ ಹತ್ಯೆ ಮಾಡುವುದರಲ್ಲಿ ಬೆಳಗಾವಿ ಜಿಲ್ಲೆಗಿಂತ ತಾನು ಮುಂದಿರಬೇಕು ಎಂದು ಮಂಡ್ಯ ಜಿಲ್ಲೆ; ಏನಾದರೂ ಆಗಲಿ ಮೊದಲನೆ ಸ್ಥಾನ ಬಿಟ್ಟು ಕೊಡಲೇಬಾರದು ಅಂತ ಬೆಳಗಾವಿ ಜಿಲ್ಲೆ ಪೈಪೋಟಿಯಲ್ಲಿದ್ದ ಹಾಗೆ ಇತ್ತು. 'ಸಕ್ಕರೆ ನಗರ' ಎಂಬ ಮಂಡ್ಯ 'ಹೆಣ್ಣುಭ್ರೂಣ ಹತ್ಯೆ ನಗರ' ಎಂಬ ಹೆಸರನ್ನು ಪಡೆಯುವ ಹಂತ ತಲುಪಿತ್ತು. ಮಲ್ಲಾಜಮ್ಮ ವಿಧಾನ ಪರಿಷತ್ ಸದಸ್ಯೆ ಆಗಿದ್ದರು. ನಾಗಮಣಿ ನಾಗೇಗೌಡ ವಿಧಾನಸಭೆ ಸದಸ್ಯೆಯಾಗಿದ್ದರು. ಇವರಿಬ್ಬರಿಗೂ ಮಂಡ್ಯದ ಈ ಬೆಳವಣಿಗೆ ಆತಂಕ ತಂದಿರಬೇಕು. ಸ್ಥಳೀಯ ಪ್ರಗತಿಪರರು, ಸಂಸ್ಥೆಗಳು ಜೊತೆ ಮಾತನಾಡಿದರು. ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೆರವಣಿಗೆ ಜಿಲ್ಲಾ ಆಸ್ಪತ್ರೆ ಆವರಣದಿಂದ ಜಿಲ್ಲಾಧಿಕಾರಿ ಕಚೇರಿಯವರೆವಿಗೆ ಇತ್ತು. ಪ್ರಾರಂಭದಲ್ಲಿ ಇಬ್ಬರು ಇಬ್ಬರು ಸಾಲಿನಲ್ಲಿ ಬರುತ್ತಿದ್ದರು. ಯಾವಾಗ ಟಿವಿ ಕ್ಯಾಮೆರಾ ಬಂದಿತೋ ಇಲ್ಲವೋ, ಪಾಪ ತಮ್ಮ ಮೂತೀನೂ ಟಿವಿ ಪರದೆ ಮೇಲೆ ಬರಲಿ ಅನ್ನೊ ಆಸೆ ಇರಲ್ವಾ, ಸಾಲು ಹಾಳಾಯಿತು. ಗುಂಪಾಯಿತು. ಅಂತೂ ಹೇಗೋ ಗುಂಪುಗುಂಪಾಗಿಯೇ ಜಿಲ್ಲಾಧಿಕಾರಿ ಕಚೇರಿ ಆವರಣ ಸೇರಿತು. ಬೆಂಗಳೂರಿನಿಂದ ಬಂದಿದ್ದ ಪ್ರಮೀಳಾ ನೇಸರ್ಗಿ, ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರೂ ಸೇರಿಕೊಂಡರು. ಹೆಣ್ಣುಭ್ರೂಣ ಹತ್ಯೆ ವಿರೋಧಿ ಘೋಷಣೆಗಳು ಮುಗಿಲುಮುಟ್ಟಿದ್ದವು. ಇದನ್ನೆಲ್ಲ ಕೇಳುತ್ತಿದ್ದ ಮಹಿಳೆಯೊಬ್ಬರು 'ಹೂಂ ಸಾಯಿಸಬೇಡಿ. ಹಂಗೇ ಬುಟ್ಬುಡಿ. ಮದುವೆ ಮಾಡೋ ಕಾಲಕ್ಕೆ ಇವರು ಬರ್ತಾರೆ' ಅಂದರು! ಆಕೆಯ ಮಾತಿನಲ್ಲಿ ಬೇಸರ, ಆಕ್ರೋಶ, ಜಿಗುಪ್ಸೆ ಎಲ್ಲ ತುಂಬಿತ್ತು. ಆಕೆ ಓರ್ವ ಜಾಡಮಾಲಿ ಹೆಂಗಸು!

ಮೂರು ತಿಂಗಳ ಹಸುಳೆ ಆಫ್ರಿನ್ ಕೊಲೆಯಾದಳಲ್ಲಾ, 'ಪಾಪಿ ಅಪ್ಪ', 'ಕೊಲೆಗಡುಕ ತಂದೆ' ಮುಂತಾದ ವಿಶೇಷಣಗಳನ್ನು ಸೇರಿಸಿ ಸುದ್ದಿ ಬಿತ್ತರಿಸಿದರಲ್ಲಾ, ಪತ್ರಿಕೆಗಳು ರೀಮುಗಟ್ಟಳೆ ಕಣ್ಣೀರು ಸುರಿಸಿದರಲ್ಲಾ, ಪರಪ್ಪನ ಅಗ್ರಹಾರದ ಖೈದಿಗಳೂ ಮಗುವಿನ ತಂದೆಗೆ ಹೊಡೆಯಲು ಸಿದ್ಧರಿದ್ದರಂತಲ್ಲಾ ಅದನ್ನೆಲ್ಲ ನೋಡಿದಾಗ ಮೇಲಿನ ಘಟನೆ ನೆನಪಾಯಿತು.

ಭಾವನಾತ್ಮಕವಾಗಿ ಏನೋ ಹೇಳಬಹುದು. ವಾಸ್ತವಿಕ ಸ್ಥಿತಿ ಬೇರೆಯೇ ಇದೆ. ನಳ್ಳೆಚ್ಚಿ ಹೊಲ ಹಾಳು ಹೆಣ್ಣೆಚ್ಚಿ ಮನೆ ಹಾಳು ಎಂಬ ಗಾದೆ ಮಾತೇ ಪ್ರಚಲಿತದಲ್ಲಿದೆ ಎಂದೇ ಆಫ್ರಿನ್ ತಂದೆ ಹೆಂಡತಿಗೆ ಮೊದಲೇ ಕಟ್ಟಪ್ಪಣೆ ಮಾಡಿದ್ದ- 'ನೀನು ಹೆಣ್ಣುಮಗು ಹೆರಲೇಬಾರದು.' ಆದರೆ ಅವಳು ಹೆಣ್ಣೇ ಹೆತ್ತಳು! ಮಗು ಹೆಣ್ಣೋ ಗಂಡೋ ಎನ್ನುವುದರ ನಿರ್ಧಾರ ಗಂಡನ ವೀರ್ಯಾಣು ಅವಲಂಬಿಸಿದೆಯಂತೆ. ಆದರೆ ಆತನಿಗೆ ಅದು ಬೇಕಿರಲಿಲ್ಲ. ಅಥವಾ ಅಂತಹ ತಿಳುವಳಿಕೆಯೂ ಇರಲಿಲ್ಲ. ತನ್ನ ಮಾತನ್ನು ಧಿಕ್ಕರಿಸಿ ಹೆಣ್ಣೇ ಹೆತ್ತಳಲ್ಲ ಇವಳಿಗೆ ಎಷ್ಟು ಧಿಮಾಕು? ಇದು ಹೆಂಡತಿಯ ಅಕ್ಷಮ್ಯ ಅಪರಾಧವಾಗಿ ಗೋಚರಿಸಿತು. ಆಕೆಗೆ ಚಿತ್ರಹಿಂಸೆ ನೀಡಿದ. ತೃಪ್ತಿಯಾಗಲಿಲ್ಲ, ಮಗುವನ್ನೇ ಕೊಂದ!

ಮುಗ್ಧ ಕಂದಮ್ಮನ ಮರಣಕ್ಕೆ ಯಾರು ಹೊಣೆ?

ಇಂತಹ ಸಾವಿಗೆ ಕೊನೆಯೇ ಇಲ್ಲವೆ?

ತಡೆಯಲು ಸಾಧ್ಯವೇ ಇಲ್ಲವೆ?

ಇಂತಹ ಪ್ರಶ್ನೆಗಳು ನಿರಂತರ....




ಅವಮಾನಗೊಂಡ ಪರಿ

ಇದೊಂದು ಬೇಸರದ ವಿಷಯ.

ಅದೇನೆಂದರೆ, ಸುಧೀರ್ ಅತ್ತಾವರ ನಿರ್ದೇಶನದ 'ಪರಿ' ಚಿತ್ರತಂಡ ಮುಂಬೈನಲ್ಲಿ ಚಿತ್ರದ ಪ್ರೀಮಿಯರ್ ಶೋವನ್ನು ಏರ್ಪಡಿಸಿ ದಾಖಲೆ ನಿರ್ಮಿಸಲು ಹೊರಟಿತ್ತು. 'ಪರಿ' ಚಿತ್ರವನ್ನು ಮುಂಬೈನಲ್ಲಿ ವೀಕ್ಷಿಸಲು ಅಮೀರ್‌ಖಾನ್, ಶಬನಾ ಆಜ್ಮಿ, ವಿದ್ಯಾ ಬಾಲನ್ ತರಹದ ಅನೇಕ ಬಾಲಿವುಡ್‌ನ ದಿಗ್ಗಜರು ಬರುತ್ತಾರೆಂದು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ಕರೆದು ಈ ತಂಡ ಸುದ್ದಿ ಮಾಡಿತ್ತು.

ಆದರೆ ಮೊನ್ನೆ ಏಪ್ರಿಲ್ 15ರಂದು ನಡೆದ 'ಪರಿ' ಚಿತ್ರದ ಪ್ರೀಮಿಯರ್ ಷೋ ಮೂಲಕ ಮುಂಬೈನಲ್ಲಿ ಕನ್ನಡ ಚಿತ್ರರಂಗದ ಕೀರ್ತಿಪತಾಕೆ ಹಾರುವ ಬದಲು ಮರ್ಯಾದೆ ಹರಾಜಾಗಿದೆ.

ವಿಷಯ ಇಷ್ಟೇ. ಪ್ರೀಮಿಯರ್ ಪ್ರದರ್ಶನ ಸಂಜೆ ಏಳು ಘಂಟೆಗೆ ಆರಂಭವಾಗುವ ಬದಲು 9.30 ಕ್ಕೆ ಆರಂಭವಾಯಿತಂತೆ. ಅದಾದರೂ ಪರವಾಗಿಲ್ಲ, ಆದರೆ ಆಹ್ವಾನ ಪತ್ರಿಕೆಯಲ್ಲಿ ತಿಳಿಸಿದ್ದಂತೆ ಅಮೀರ್ ಖಾನ್ ನಿಂದ ಹಿಡಿದು ಬಾಲಿವುಡ್‌ನ ಯಾವುದೇ ಸ್ಟಾರ್‌ಗಳು ಈ ಚಿತ್ರವನ್ನು ನೋಡಲು ಬರಲೇ ಇಲ್ಲ.



ಚಿತ್ರದ ನಿರ್ಮಾಪಕ ತ್ರಿವಿಕ್ರಮ್ ಬೆಳ್ತಂಗಡಿ ಅವರು ಬಾಲಿವುಡ್‌ನ ಸ್ಟಾರ್‌ಗಳಿಗಾಗಿ ಪ್ರೀಮಿಯರ್ ಷೋನಂತರ ಬಾಲಿವುಡ್ ಶೈಲಿಯಲ್ಲೇ ಅದ್ಭುತವಾದ ಪಾರ್ಟಿಯನ್ನು ವ್ಯವಸ್ಥೆ ಮಾಡಿದ್ದರು. ಬಾಲಿವುಡ್ಡಿನ ದಿಗ್ಗಜರ ಗೈರುಹಾಜರಿಯಲ್ಲಿ ಬೆಂಗಳೂರಿನಿಂದ ಹೋಗಿದ್ದ ಚಿತ್ರದ ಕಲಾವಿದರು, ತಂತ್ರಜ್ಞರು ಮತ್ತು ಅವರ ಬಂಧುಬಳಗದವರು ಆ ಪಾರ್ಟಿಯನ್ನು ಎಂಜಾಯ್ ಮಾಡಿದರಷ್ಟೇ.

ಅಂದಹಾಗೆ, ಮುಂಬೈನಲ್ಲಿ ಪ್ರೀಮಿಯರ್ ಷೋ ಮಾಡುವ ಧೈರ್ಯ ಈ ಚಿತ್ರತಂಡಕ್ಕೆ ಬರಲು ಒಂದು ಕಾರಣವೂ ಇದೆ. ಅದೇನೆಂದರೆ ಈ ಚಿತ್ರದ ಮೂಲಕ ಚೊಚ್ಚಲ ನಿರ್ದೇಶಕರಾದ ಸುಧೀರ್ ಅತ್ತಾವರ್ ಅವರು ಹಿರಿಯ ನಿರ್ದೇಶಕ ಎಂ.ಎಸ್.ಸತ್ಯು ಅವರ ಪಟ್ಟದ ಶಿಷ್ಯ. ಸತ್ಯು ಈ ಚಿತ್ರದುದ್ದಕ್ಕೂ ಶಿಷ್ಯನಿಗೆ ಬೆಂಗಾವಲಾಗಿ ನಿಂತಿದ್ದರು ಮಾತ್ರವಲ್ಲ, ಕೆಲಸವನ್ನೂ ಮಾಡಿದ್ದರು. 'ಗರಂ ಹವಾ' ದಂತಹ ಉತ್ತಮ ಸಿನಿಮಾದ ಜೊತೆಗೆ ಕೆಲವು ಹಿಂದಿ ಚಿತ್ರಗಳನ್ನೂ ಈ ಹಿಂದೆ ನಿರ್ದೇಶಿಸಿರುವ ಸತ್ಯು ಅವರಿಗೆ ಮುಂಬೈ ರಂಗಭೂಮಿ ಮತ್ತು ಚಿತ್ರರಂಗ ತೀರಾ ಪರಿಚಿತ. ಹೀಗಾಗಿ ಸುಧೀರ್ ಅತ್ತಾವರ್ ತನ್ನ ಗುರುಗಳ ಮುಂಬೈ ಚಿತ್ರರಂಗದ ಕಾಂಟ್ಯಾಕ್ಟ್‌ಗಳನ್ನು ಬಳಸಿ ಈ ಪ್ರೀಮಿಯರ್ ಷೋ ವ್ಯವಸ್ಥೆ ಮಾಡಿದ್ದರು.

ಆದರೆ ಈ ಪ್ರೀಮಿಯರ್ ಷೋದಿಂದ ಎರಡು ವಿಷಯಗಳು ಬಯಲಾದವು. ಮೊದಲನೆಯದಾಗಿ, ಮುಂಬೈನಲ್ಲಿ ಈಗ ಸತ್ಯು ಅವರ ಪ್ರಭಾವ ಕಡಿಮೆಯಾಗಿದೆ ಎಂಬುದು. ಎರಡನೆಯದಾಗಿ 'ಪರಿ' ಚಿತ್ರಕ್ಕಾಗಿ ಭಾರಿ ಹಣ ಖರ್ಚು ಮಾಡಿರುವ ನಿರ್ಮಾಪಕ ತ್ರಿವಿಕ್ರಮ್ ಅವರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂಬುದು.

ಇದೂ ಒಂದು ಸಾಹಸವೇ, ಸಿನಿಮಾ ಎಂಬ ಮಾಯಾಲೋಕದಲ್ಲಿ...

... ಚಂದಪ್ಪ ಹರಿಜನನನ್ನು ...ಬ್ಬ ಕ್ರಿಮಿನಲ್ ಆಗಿ ...ಸಿದವರು ಕೇವಲ ...ಮಾಲೀಕರು ಮಾತ್ರವಲ್ಲ, ...ದರಲ್ಲಿ ಪತ್ರಕರ್ತರ ಪಾತ್ರವೂ ...ಿ. ಚಂದಪ್ಪನಿಗೆ ...ಗಳೂರಿನಲ್ಲಿ ಆಶ್ರಯ ...ಟ್ಟವನೇ ಕೊನೆಗೆ ಅವನ ...ನೆ ಬಗ್ಗೆ ಪೊಲೀಸರಿಗೆ ...ನ್‌ಫರ್ಮೇಷನ್ ...ಟ್ಟುಕಳುಹಿಸಿ ತನ್ನ ಬಳಿ ...ದ್ದ ಚಂದಪ್ಪನ ಲಕ್ಷಾಂತರ ...ಪಾಯಿ ಹಣವನ್ನು ನುಂಗಿ ...ಕಿದ್ದಾನೆಂಬ ಅನುಮಾನ ...ಕೇಕರಿಗಿದೆ.

- ರವಿ ಹೂಗಾರ, ಹಾವೇರಿ



...ಬೇಕಿದೆ ಅಂಬೇಡ್ಕರ್ ಅವರ ಆದರ್ಶ

... ಮದುವೆ ಎಂಬುದು ನಮ್ಮ ಜೀವನದಲ್ಲಿ ಒಂದು ...ಬ್ಬ ಆಚರಣೆ. ಆದರೆ ಅಂಬೇಡ್ಕರ್ ಅವರಿಗೆ ಮದುವೆ ...ಪ್ರಾರಂಭವಿಸುವುದು ಒಂದು ಕೆಟ್ಟಕನಸಿನಂತಾಗಿತ್ತು, ಅವರು ...ದುವೆಯಾಗಲು ದೇವಸ್ಥಾನವಾಗಲಿ, ಮದುವೆ ಛತ್ರವಾಗಲಿ, ...ಮುದಾಯ ಭವನವಾಗಲಿ ಎಲ್ಲೂ ಜಾಗ ಸಿಗಲಿಲ್ಲ. ...ನೆಗೆ ಅವರು ವಿಧಿ ಇಲ್ಲದೆ ಒಂದು ಮೀನು ಮಾರುಕಟ್ಟೆ...ಲ್ಲಿ ಮದುವೆ ಆಗಬೇಕಾಯಿತು. ಅದೂ ನಡು ರಾತ್ರಿ.

... ಅಂಬೇಡ್ಕರ್ ಅವರಿಗೆ ಇಷ್ಟೆಲ್ಲ ಅವಮಾನ ಮಾಡ...ಗಿದ್ದರೂ ಅವರು ನಮ್ಮೆಲ್ಲರಿಗೂ ಒಂದು ವೈಜ್ಞಾನಿಕವಾದ, ...ಾಸಬೀಯವಾದ, ಜಾತ್ಯತೀತ ಸಂವಿಧಾನವನ್ನು ...ಸಿಕೊಟ್ಟರು. ಅದಕ್ಕಾಗಿ ನಾವು ಅವರನ್ನು ಎಂದೂ ...ರೆಯಬಾರದು.

- ರವಿಕುಮಾರ್, ಹಾಸನ

ಕಳೆದ ಭಾನುವಾರ ಏಪ್ರಿಲ್ 14ರಂದು ದೇಶದೆಲ್ಲೆಡೆ ಅಂಬೇಡ್ಕರ್ ಜಯಂತಿ ನಡೆಯಿತು. ಪ್ರತಿ ವೇದಿಕೆಯಲ್ಲೂ ಅಂಬೇಡ್ಕರ್ ಅವರ ಭಾವಚಿತ್ರವಿತ್ತು, ಆದರೆ ಆ ಭಾವ ಚಿತ್ರದ ಅಡಿಯಲ್ಲೇ ಎಲ್ಲ ದಲಿತರು ಹಲವು ಬಣಗಳಾಗಿ ಒಡೆದು ಹೋಗಿದ್ದಾರೆ.

ಶಿವಸುಂದರ್ ಅವರು 'ಚಾರ್ವಾಕ' ಅಂಕಣದಲ್ಲಿ ಹೇಳಿದಂತೆ ಸರ್ಕಾರಗಳು ಬಡ್ಜೆಟಿನಲ್ಲಿ ಎಷ್ಟು ಕಡಿಮೆ ಹಣ ಖರ್ಚು ಮಾಡಿದರೂ ಇವರಿಗೆ ಚಿಂತೆ ಇಲ್ಲ, ಏಕೆಂದರೆ ಇವರಿಗೆ ಅಂಬೇಡ್ಕರ್ ಬೇಕು, ಅವರ ಮಾತುಗಳಲ್ಲ, ಅವರ ಆದರ್ಶಗಳಲ್ಲ, ಅವರ ಕಟ್ಟಕಡೆಯ ಸಂದೇಶವೂ ಅಲ್ಲ.

- ವಿ.ಆರ್.ಮೌರ್ಯ, ಬೆಂಗಳೂರು

ರಾಜ್-ಶಂಕರ್ ಫೋಟೋ ಸಖತ್ ಆಗಿದೆ

'ಲಂಕೇಶ್ ಪತ್ರಿಕೆ' ಆರಂಭವಾದಾಗಿನಿಂದಲೂ ಆಗಾಗ್ಗೆ ಬೇಕೆನಿಸಿದಾಗಲೆಲ್ಲ ಕೊಂಡು ಓದಿ ರೋಮಾಂಚನ ಗೊಂಡಿದ್ದೇನೆ. ಲಂಕೇಶರ ಅಭಿಮಾನಿಯಾಗಿರುವ ನಾನು ಅವರ ನಿಧನದ ನಂತರ ಗೌರಿ ಅವರ ಸಂಪಾದಕೀಯದ ಪತ್ರಿಕೆಯನ್ನು ಬಿಡುವಾದಾಗಲೆಲ್ಲ ಕೊಂಡು ಓದಿದ್ದೇನೆ. ಗೌರಿ ಅವರ ನಿರ್ಭಯ ಬರವಣಿಗೆ, ದಿಟ್ಟ ಶೈಲಿ ನನಗೆ ಬಹಳ ಇಷ್ಟವಾಗಿದೆ.

ಏಪ್ರಿಲ್ 11, 2012ರ ಸಂಚಿಕೆಯಲ್ಲಿ 'ಸಾಲದ ಸುಳಿಯಲ್ಲಿ ಚನ್ನೇಗೌಡ' ಲೇಖನ ಓದಿ ಬಹಳ ಸಂಕಟವಾಯಿತು. ಚನ್ನೇಗೌಡರ ನೇರ ನಡೆನುಡಿ, ಪ್ರಾಮಾಣಿಕತೆ ತಡವಾಗಿಯಾದರೂ 'ಧರ್ಮೋ ರಕ್ಷತಿ ರಕ್ಷಿತಃ' ಎಂದು ಅವರನ್ನು ಕಾಪಾಡುತ್ತಿದೆ.

ಅದೇ ಸಂಚಿಕೆಯಲ್ಲಿ ಡಾ. ರಾಜ್‌ಕುಮಾರ್ ಮತ್ತು ಶಂಕರ್ ನಾಗ್ ಅವರಿದ್ದ ಅಪರೂಪದ ಚಿತ್ರವನ್ನು ಕಂಡು ಸಖತ್ ಸಂತೋಷವಾಯಿತು. ನನ್ನ ಮೊಬೈಲಿನಲ್ಲಿ ಅದನ್ನು ಕ್ಲಿಕ್ಕಿಸಿ ಇಟ್ಟುಕೊಂಡಿರುವೆ. ಅಪರೂಪದ ಈ ಫೋಟೋವನ್ನು ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

- ದೇಶನೂರು ಮಲ್ಲಿಕಾರ್ಜುನ ರೆಡ್ಡಿ, ಧಾರವಾಡ

ಬಿದರಿ ಇಂಥವರಾ?



ಶಂಕರ್ ಬಿದರಿ ಅವರು ಓರ್ವ ದಕ್ಷ ಪೊಲೀಸ್ ಅಧಿಕಾರಿ ಎಂದು ಭಾವಿಸಿದ್ದೆ. ಅವರು ವೀರಪ್ಪನ್‌ನನ್ನು ಕೊಂಚ ಮಟ್ಟಿಗೆ ಮಟ್ಟಹಾಕಿದ್ದವರು. ಆದರೆ ಅಂತಹ ಬಿದರಿಯವರು ತಪ್ಪುಗಳನ್ನು ಮಾಡಿದ್ದಾರೆ ಎಂದರೆ ನಂಬಲು ಸಾಧ್ಯವಾಗುತ್ತಿಲ್ಲ.

"ಈ ದೌರ್ಜನ್ಯ ಮತ್ತು ಅತ್ಯಾಚಾರಗಳಿಗೆ ನಾನೊಬ್ಬನೇ ಹೊಣೆಯಲ್ಲ" ಎಂದು ಬಿದರಿಯವರು ಹೇಳಿದ್ದಾರೆ. ಅಂದರೆ ವೀರಪ್ಪನ್‌ಗಾಗಿ ನಡೆದ ಬೇಟೆಯಲ್ಲಿ ದೌರ್ಜನ್ಯ ಮತ್ತು ಅತ್ಯಾಚಾರಗಳಾಗಿದ್ದವು ಎಂದು ಅವರೇ ಒಪ್ಪಿಕೊಂಡಂತಾಗಿದೆ. ಅಷ್ಟೇ ಅಲ್ಲದೆ, ವೀರಪ್ಪನ್‌ನ ಸದ್ದಡಗಿಸಿದ ಯಶಸ್ಸು ಬಿದರಿ ಅವರಿಗೆ ಸಿಕ್ಕಿರಬೇಕಾದರೆ ಅದರಲ್ಲಿ ಅವರ ಸಂಗಡಿಗರ ಪಾಲೂ ಇದೆ. ಹಾಗೆಯೇ ಅವರ ಸಂಗಡಿಗರು ಎಸಗಿದ ಅನ್ಯಾಯಕ್ಕೆ ಬಿದರಿ ಅವರೂ ಹೊಣೆಗಾರರಾಗುತ್ತಾರೆ ಎಂದೇ ಅರ್ಥ.

ಅದೇನೆ ಇರಲಿ, ನಮ್ಮ ದೇಶದಲ್ಲಿ ನ್ಯಾಯವೆಂಬುದು ಇದ್ದೇ ಇದೆ.

- ವಿಷ್ಣುಶಂಕರ್, ಶಿವಮೊಗ್ಗ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 02-05-2012 RNI No. KARKAN...



ಢೋಂಗಿ ಭವಿಷ್ಯ?

ಕೋಡಿಮಠದ ಸ್ವಾಮಿ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ಹಾಗೆಂದಾಕ್ಷಣ ಅವರು ಸಿನಿಮಾವೊಂದರಲ್ಲಿ ನಟಿಸುತ್ತಾರೆ ಎಂದು ತಪ್ಪು ಭಾವಿಸಬೇಡಿ. ಅವರು ಗಾಂಧಿನಗರಕ್ಕೆ ಬರುತ್ತಿರುವುದು ಆರ್.ಚಂದ್ರು ನಿರ್ದೇಶನದ 'ಚಾರ್ ಮಿನಾರ್' ಚಿತ್ರದ ಮುಹೂರ್ತವನ್ನು ನೆರವೇರಿಸಲು.

ಅದೆಂತಹದ್ದೋ ಪುರಾತನ ತಾಳೆಗರಿಗಳನ್ನು ಇಟ್ಟುಕೊಂಡು ಜನರ ಭವಿಷ್ಯವನ್ನು ಹೇಳುವ ಕೋಡಿ ಮಠದ ಶಿವಯೋಗಿ ರಾಜೇಂದ್ರ ಸ್ವಾಮೀಜಿಯವರ ಸಮ್ಮುಖದಲ್ಲೇ ತನ್ನ ಚಿತ್ರದ ಮುಹೂರ್ತ ನಡೆಯಬೇಕೆಂದು ಚಂದ್ರು ಹಠ ತೊಟ್ಟಂತಿದೆ. ಅದಕ್ಕಿಂತಲೂ ಮುಖ್ಯವಾಗಿ ಈ ಸ್ವಾಮಿ ಹೇಳಿರುವ ಭವಿಷ್ಯದ ಪ್ರಕಾರವೇ ಎಲ್ಲವೂ ನಡೆದರೆ 'ಚಾರ್ ಮಿನಾರ್' ಚಿತ್ರ ಹಿಟ್ ಆಗಿ, ಅದರ ಪಾಲುದಾರಿಕೆಯ ನಿರ್ಮಾಪಕನಾಗಿರುವ ಚಂದ್ರುಗೆ ಕೋಟಿಗಟ್ಟಲೆ ಲಾಭ ಸಿಗಲಿದೆಯಂತೆ. ಇಂತಹ ಢೋಂಗಿ 'ಭವಿಷ್ಯ'ದಲ್ಲಿ ನಂಬಿಕೆ ಹೊಂದಿರುವ ಚಂದ್ರು ಬಗ್ಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ.

ಅಂದಹಾಗೆ, ಚಿತ್ರದ ಕಥೆಯ ಬಗ್ಗೆ ಅಥವಾ ಚಿತ್ರದ ಮೇಕಿಂಗ್ ಬಗ್ಗೆ ತಲೆಕೆಡಿಸಿಕೊಳ್ಳುವ ಬದಲು ನಿರ್ದೇಶಕ ಚಂದ್ರು ಇಂತಹ ಗಿಮಿಕ್‌ಗಳ ಮುಖಾಂತರ ಪ್ರಚಾರ ಗಿಟ್ಟಿಸುವುದರಲ್ಲೇ ಹೆಚ್ಚಿನ ಸಮಯವನ್ನು ವ್ಯರ್ಥ ಮಾಡುತ್ತಿರುವುದು ಮತ್ತು ಮೂಢನಂಬಿಕೆ ಹೊಂದಿರುವುದು ನಿಜಕ್ಕೂ ಖೇದದ ವಿಷಯ.



ಇಂಗ್ಲಿಷ್ ಮುಖ

ಸೂರಪ್ಪ ಬಾಬು ನಿರ್ಮಾಣದ, ರವಿಚಂದ್ರನ್ ನಟಿಸಿರುವ, ರವಿ ಶ್ರೀ... ನಿರ್ದೇಶಿಸಿರುವ 'ದಶಮುಖ' ಚಿತ್ರ ಬಿಡುಗಡೆಯಾದ ಮೂರನೇ ದಿನಕ್ಕೆ ನೆಲಕ... ಇದು ರವಿಚಂದ್ರನ್ ಅವರಿಗೆ ಮತ್ತು ಅವರ ಅಭಿಮಾನಿಗಳಿಗೆ ನುಂಗಲ... ಅಪ್ರಿಯ ಸಂಗತಿಯಾಗಿದೆ.

ಹಾಗೆ ನೋಡಿದರೆ, ಈ ಚಿತ್ರದಲ್ಲಿ ತಾರೆಯರ ದೊಡ್ಡ ಪಟಾಲಂ... ರವಿಚಂದ್ರನ್ ಜೊತೆಜೊತೆಗೆ ಅನಂತ್‌ನಾಗ್, ದೇವರಾಜ್, ಯುವ ನಾ... ನಟ ಚೇತನ್, ಮಾಜಿ ನಾಯಕಿ ಸರಿತಾ, ಅವಿನಾಶ್, ಮಾಳವಿಕಾ, ಪ್ರವಿ... ದತ್ತಣ್ಣ, ಅಚ್ಯುತ್ ರಾವ್ ಮೊದಲಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ... ದೊಡ್ಡ ತಾರಾಸಮೂಹವೇ ಈ ಚಿತ್ರದಲ್ಲಿದ್ದರೂ ಚಿತ್ರಕ್ಕೆ ಮೂರೇ ದಿನಕ್ಕೆ ಪ್ರ... ಮಂಗಳಾರತಿ ತೋರಿಸಿದ್ದಾನೆ.

ಇದಕ್ಕೆ ಮುಖ್ಯ ಕಾರಣ ಈ ಚಿತ್ರದಲ್ಲಿ ಒಂದು ಪೈಸೆಯಷ್ಟೂ ನಮ್ಮ ... ಮತ್ತು ಭಾಷೆಯ ಸೊಗಡಿಲ್ಲದಿರುವುದು. ಇದು 1957ರಲ್ಲಿ ಬಂದಿದ್ದ ಹಾಲಿವು... 'ಟ್ವೆಲ್ವ್ ಆ್ಯಂಗ್ರಿ ಮೆನ್' ಎಂಬ ಇಂಗ್ಲಿಷ್ ಚಿತ್ರದ ರಿಮೇಕ್. ಅಮೆರಿಕದ ಸ... ಮತ್ತು ಆ ದೇಶದ ನ್ಯಾಯ ಪದ್ಧತಿಯನ್ನು ಪ್ರತಿಬಿಂಬಿಸುವ ಈ ಚಿತ್ರ ಯ... ದೃಷ್ಟಿಯಿಂದಲೂ ಕನ್ನಡದ ಪ್ರೇಕ್ಷಕರ ಹೃದಯವನ್ನು ಗೆಲ್ಲಲು ಸಾಧ್ಯವೇ...

ಹಾಗಾದರೆ ಇಂತಹ ಚಿತ್ರವನ್ನು ಸೂರಪ್ಪಬಾಬು ಯಾವ ಪುರುಷಾರ್ಥ... ನಿರ್ಮಿಸಿದರು ಎಂದು ನೀವು ಪ್ರಶ್ನಿಸಬಹುದು. ವಾಸ್ತವವಾಗಿ ಈ ... ಬಿಡುಗಡೆಯಾಗುವ ಮೊದಲೇ ನಿರ್ಮಾಪಕ ಬಾಬು ಲಾಭ ಮಾಡಿಕೊಂಡಿ... ಚಿತ್ರದಲ್ಲಿನ ತಾರಾಗಣದ ದೊಡ್ಡ ಪಟ್ಟಿಯನ್ನು ಛಾನಲ್‌ನವರಿಗೆ ತೋ... ಸೂರಪ್ಪಬಾಬು ಸಖತ್ ಲಾಭ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ಗಾಂಧಿನಗ... ದಟ್ಟವಾಗಿ ಹಬ್ಬಿದೆ. ಇಷ್ಟಾದ ಮೇಲೆ ಈ ಚಿತ್ರವನ್ನು ಥಿಯೇಟರ್‌ನಲ್ಲಿ ಪ್ರೇಕ್ಷ... ನೋಡಿದರೆಷ್ಟು, ಬಿಟ್ಟರೆಷ್ಟು ಎಂಬ ಮನೋಭಾವ ಬಾಬು ಅವರದ್ದು...

ನಿರ್ಮಾಪಕರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವ ಸೂರಪ್ಪ ಬ... ತರಹದ ದೊಡ್ಡ ನಿರ್ಮಾಪಕರೇ ಈಗ ಪ್ರೇಕ್ಷಕರಿಗಾಗಿ ಚಿತ್ರ ಮಾಡುವ ಬ... ಟಿ.ವಿ. ಚಾನಲ್‌ಗಾಗಿ ಚಿತ್ರ ಮಾಡುವ ದುಸ್ಥಿತಿಯನ್ನು ತಲುಪಿದ್ದಾರೆಂದರೆ ... ಚಿತ್ರರಂಗ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂದು ನೀವೇ ಊಹಿಸಿ.



ಮಹೇಂದರ್ ರಾಜವಂಶ

ನಟಿ ಶೃತಿಯ ಮಾಜಿ ಪತಿ ಮಹೇಂದರ್ ಈಗ ಹೊಸ ಚಿತ್ರವೊಂದನ್ನು ನಿರ್ದೇಶಿಸಲು ಹೊರಟಿದ್ದಾರೆ.

ಶೃತಿಯಿಂದ ವಿಚ್ಛೇದನ ಪಡೆದ ನಂತರ ಸುದೀರ್ಘ ಕಾಲ ಅಜ್ಞಾತವಾಸದಲ್ಲಿದ್ದ ನಿರ್ದೇಶಕ ಮಹೇಂದರ್ ಇತ್ತೀಚೆಗೆ ಸದ್ದುಗದ್ದಲವಿಲ್ಲದೆ ಎರಡನೆಯ ಮದುವೆಯನ್ನು ಮಾಡಿಕೊಂಡಿದ್ದರು. ಶೃತಿಯಿಂದ ಬೇರೆಯಾದ ನಂತರ ಮಹೇಂದರ್ ಜೊತೆ ಸಿನಿಮಾ ಮಾಡಿದರೆ ಪುಕ್ಕಟೆಯಾಗಿ ಭಾರಿ ಪ್ರಚಾರ ಸಿಗಬಹುದು ಎಂದು ಅನೇಕ ನಿರ್ಮಾಪಕರು ಸ್ಕೆಚ್ ಹಾಕಿದ್ದರು. ಮಹೇಂದರ್ 'ವೀರಬಾಹು' ಚಿತ್ರವನ್ನು ನಿರ್ದೇಶಿಸಿದರು ಆದರೆ ಸಿನಿಮಾ ಥಿಯೇಟರಿನಲ್ಲಿ ನಿಲ್ಲದೇಹೋಯಿತು.

ಈಗಿನ ಹೊಸ ನಿರ್ದೇಶಕರ ಪ್ರವಾಹದ ನಡುವೆ ಮಹೇಂದರ್ ಕೊಚ್ಚಿಹೋದರೇನೋ ಎಂದು ಭಾವಿಸುವಷ್ಟರಲ್ಲೇ ಈಗ ಮಹೇಂದರ್ ಅದ್ದೂರಿ ಚಿತ್ರವೊಂದನ್ನು ನಿರ್ದೇಶಿಸುವ ಮುಖಾಂತರ ಗಾಂಧಿನಗರವನ್ನು ಪುನಃ ಪ್ರವೇಶ ಮಾಡಲಿದ್ದಾರೆ. ಅಂದಹಾಗೆ ಮಹೇಂದರ್‌ಗೆ ಚಿತ್ರ ನಿರ್ದೇಶನ ಮಾಡಲು ಈಗ ಅವಕಾಶ ಕೊಟ್ಟಿರುವವರು ಅವರ ಹಳೆಯ ಗೆಳೆಯ ಕುಮಟೇಶ್‌ಬಾಬು. ಇವರ ನಿರ್ಮಾಣದ ಹೊಸ ಚಿತ್ರಕ್ಕೆ 'ರಾಜವಂಶ' ಎಂದು ಹೆಸರಿಟ್ಟಿದ್ದಾರೆ. ಇದು ಬಹುತಾರಾಗಣದ ಚಿತ್ರವಾಗಲಿದ್ದು ಮುಖ್ಯವಾಗಿ ಅಂಬರೀಷ್ ಅವರ ಕಾಲ್‌ಶೀಟ್‌ಗಾಗಿ ಚಿತ್ರತಂಡ ಕಾದು ಕುಳಿತಿದೆಯಂತೆ.

ಅದೇನೇ ಇರಲಿ, ಗಾಂಧಿನಗರದ ಮಟ್ಟಿಗೆ ಸಜ್ಜನ ಎಂದೇ ಎಲ್ಲರಿಂದ ಕರೆಸಿಕೊಂಡಿರುವ ಮಹೇಂದರ್ ತನ್ನ ವೈಯಕ್ತಿಕ ಸಮಸ್ಯೆಯ ತೊಳಲಾಟದಿಂದ ಹೊರಬಂದು ಹೊಸ ಚಿತ್ರವೊಂದನ್ನು ಕೈಗೆತ್ತಿಕೊಂಡು ಪುನಃ ಬಣ್ಣದ ಲೋಕಕ್ಕೆ ಕಾಲಿರಿಸುತ್ತಿರುವುದು ಸ್ವಾಗತಾರ್ಹ ಸಂಗತಿ.



ಕಠಾರಿಯಲ್ಲ ಕಾಂಗ್ರೆಸ್ ವೀರ!

'ಕಠಾರಿವೀರ ಸುರಸುಂದರಾಂಗಿ' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭವನ್ನು ಅದ್ದೂರಿಯಾಗಿ ಮಾಡಲು ನಿರ್ಮಾಪಕ ಮುನಿರತ್ನಂ ತಯಾರಿ ನಡೆಸುತ್ತಿದ್ದಾರೆ. ಆದರೆ 'ಕಠಾರಿವೀರ...'ನ ಆಹ್ವಾನ ಪತ್ರಿಕೆಯನ್ನು ನೋಡಿದರೆ ಇದು ಸಿನಿಮಾದ ಆಡಿಯೋ ಸಮಾರಂಭವೋ ಅಥವಾ ಕಾಂಗ್ರೆಸ್ ಪಕ್ಷದ ಸಮಾವೇಶವೋ ಎಂಬ ಸಂಶಯ ಕಾಡುತ್ತದೆ. ಅಷ್ಟೊಂದು ಕಾಂಗ್ರೆಸ್ ನಾಯಕರ ಹೆಸರುಗಳು ಆಹ್ವಾನ ಪತ್ರಿಕೆಯಲ್ಲಿವೆ.

ಮುನಿರತ್ನಂ ಸ್ವತಃ ಕಾಂಗ್ರೆಸ್ ಪಕ್ಷದವರಾಗಿದ್ದು ಸದ್ಯ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಪೋರೇಟರ್ ಕೂಡ ಆಗಿದ್ದಾರೆ. ಹಾಗೆಯೇ ಈ ಚಿತ್ರದ ನಾಯಕಿ 'ಸುರಸುಂದರಾಂಗಿ' ರಮ್ಯಾ ಕೂಡ ಸಕ್ರಿಯ ಕಾಂಗ್ರೆಸ್ ಸದಸ್ಯೆ. ಜೊತೆಗೆ ಈ ಚಿತ್ರದಲ್ಲಿ ಅತಿಥಿ ನಟರಾಗಿ ಯಮನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಅಂಬರೀಷ್ ಕೂಡ ಕಾಂಗ್ರೆಸ್ ಹಿರಿಯ ಎಂಬುದನ್ನು ಕೂಡ ಇಲ್ಲಿ ಸ್ಮರಿಸಬಹುದು.

ಈ ಸಮಾರಂಭಕ್ಕೆ ಮುನಿಯ ರಾಜಕೀಯದ ಗಾಡ್‌ಫಾದರ್ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ರಾಜ್ಯಾಧ್ಯಕ್ಷ ಪರಮೇಶ್ವರ್, ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ, ಡಿ.ಕೆ. ಶಿವಕುಮಾರ್, ಆರ್.ವಿ. ದೇಶಪಾಂಡೆ, ಬಿ.ಎಲ್. ಶಂಕರ್ ಹಾಗೂ ಇನ್ನೂ ಒಂದು ಡಜನ್ ಕಾಂಗ್ರೆಸ್ ನಾಯಕರು ಮುಖ್ಯ ಅತಿಥಿಗಳಾಗಿ ಬರಲಿದ್ದಾರಂತೆ.

ಅದೇನೇ ಇರಲಿ, ಈಗ ಕಾರ್ಪೋರೇಟರ್ ಆಗಿರುವ ಮುನಿರತ್ನಂ ಶತಾಯಗತಾಯ ಶಾಸಕರಾಗಿ ವಿಧಾನಸೌಧವನ್ನು ಪ್ರವೇಶಿಸುವ ಕನಸು ಕಾಣುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಕಾರಣಕ್ಕೇ ಇದು ಕ್ಯಾಸೆಟ್ ಬಿಡುಗಡೆ ಸಮಾರಂಭ ಎನ್ನುವುದಕ್ಕಿಂತಲೂ ಮುನಿಯ ವಿಧಾನಸಭೆಯ ಪ್ರವೇಶಕ್ಕೆ ಒಂದು ಚಿಕ್ಕ ರಿಹರ್ಸಲ್ ಎಂದೇ ಹೇಳಬಹುದು.



ಗ್ರೇಟ್
ವಿಶೇಷಾಂಕ
100 ಪುಟ
20 ರೂ.
ಎಲ್ಲೆಡೆ ಲಭ್ಯ



ಏಪ್ರಿಲ್ 22ರಂದು ನಡೆಯಲಿರುವ ಕೆಎಎಸ್ ಪೂರ್ವಭಾವಿ ಪರೀಕ್ಷೆಯ ವಿಶೇಷ ಸಂಚಿಕೆ
- ಮಾದರಿ ಪ್ರಶ್ನೋತ್ತರಗಳು
- ಮೆಂಟಲ್ ಎಬಿಲಿಟಿ
- ಪ್ರಚಲಿತ ಘಟನೆಗಳು
- ಕರ್ನಾಟಕ-ಭಾರತ ವಿಶೇಷ ಮಾಹಿತಿಗಳು
- ಕರ್ನಾಟಕ ಆರ್ಥಿಕ ಸಮೀಕ್ಷೆ

ಪ್ರತಿಗಳಿಗಾಗಿ ಸಂಪರ್ಕಿಸಿ
ನಂ. 9, ಇ.ಎ.ಟಿ. ರಸ್ತೆ
ಬಸವನಗುಡಿ, ಬೆಂಗಳೂರು-4
080-26676427
9880302817

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com